ಸಂವಾದ

ಫೆಬ್ರವರಿ ಮಾರ್ಚ್ 2003



ಮಾನಸ

ತಿಂಗಳ ಪತ್ರಿಕೆ ಫೆಬ್ರವರಿ - ಮಾರ್ಚ್ 2003

ಸಂಪುಟ 19 ಸಂಚಿಕೆ : 02

ವಿಳಾಸ

" **ಮಾನಸ** " ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ:	ಬಿಡಿಪ್ರತಿ	10-00 ರೂ.
	ವಾರ್ಷಿಕ ಚಂದಾ	100-00 ರೂ.
	ಸಂಸ್ಥೆಗಳಿಗೆ	150-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067

ಸಂವಾದ

ಫೆಬ್ರವರಿ ಮಾರ್ಚ್ 2003



ಮಾನಸ

ತಿಂಗಳ ಪತ್ರಿಕೆ ಫೆಬ್ರವರಿ - ಮಾರ್ಚ್ 2003

ಸಂಪುಟ 19 ಸಂಚಿಕೆ : 02

ವಿಳಾಸ

" **ಮಾನಸ** " ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ: ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067

ಸಂಪಾದಕೀಯ



ಅಮೇರಿಕವು, ಇರಾಕ್ ಮೇಲೆ ಯುದ್ಧಕ್ಕೆ ಬೀಳುವ ಸಾಧ್ಯತೆಗಳು ಹೆಚ್ಚಾಗುತ್ತಿರುವುದರ ಕುರಿತು ಎಲ್ಲೆಡೆ ಸುದ್ದಿಯಾಗುತ್ತಿದೆ. ಇಲ್ಲೇ ನಮ್ಮ ರಾಜ್ಯದಿಂದ 6 ಗಂಟೆ ಪ್ರಯಾಣದ ಮುತಾಂಗ ಅರಣ್ಯಧಾಮದಲ್ಲಿ ಪೋಲಿಸರ ದಾಳಿಗೆ ಬಲಿಯಾದ ಆದಿವಾಸಿಗಳ ಕುರಿತು ಐದೊ, ಆರನೆಯ ಪುಟದಲ್ಲಿ ಚಿಕ್ಕದಾಗಿ ಸುದ್ದಿಯಾಗುತ್ತದೆ. ದೂರದ ಒರಿಸ್ಸಾದ ರಾಯಗಡ ಬೆಲ್ಲೆಯಲ್ಲಿ 'ಜೀವತ್ತೆತ್ತೇವು ನಮ್ಮ ನೆಲ ಬಿಡೆವು' ಎಂದು ಬಾಕ್ಸೈಟ್ ಗಣಿ ಕಂಪೆನಿಗಳ ವಿರುದ್ಧ ಹೋರಾಡುತ್ತಿರುವ ಆದಿವಾಸಿಗಳ ಬಗ್ಗೆಯಂತು ಸುದ್ದಿಯಾಗುವುದೇ ಇಲ್ಲ. ಕೇರಳದ ಪೂಚಿಮಡ ಊರಿನಲ್ಲಿ ಜನರು ದೈತ್ಯ ಬಹುರಾಷ್ಟ್ರೀಯ ಕಂಪೆನಿಯಾದ ಕೋಕೊ ಕೋಲಾ ಬಾಟ್ಲಿಂಗ್ ಫ್ಯಾಕ್ಟರಿಯನ್ನು ಒದ್ದೋಡಿಸಿದ್ದು ಸುದ್ದಿಯಾಗುವುದಿಲ್ಲ.

ಇರಾಕ್ ಮೇಲೆ ಅಮೆರಿಕದ ಯುದ್ಧ ಪ್ರಜಾತಂತ್ರವಲ್ಲ, ಅಲ್ಲಿರುವ ತೈಲ ಸಂಪನ್ಮೂಲವನ್ನು ನಿಯಂತ್ರಿಸುವುದು. ಎಲ್ಲದಕ್ಕೂ ಹೂಗುಡುವ 'ಹೌದಪ್ಪ'ಗಳನ್ನು ಸ್ಥಾಪಿಸಿ ಕೂಲ್ಲಿಯಲ್ಲಿ ಅಮೆರಿಕದ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಾಗಿದೆ. ಈ ಕೃತ್ಯದ ಹಿಂದಿರುವ ಉದ್ದೇಶವೂ ಸಹ ಪರಿಸರವನ್ನು ಕಾಯುವುದಕ್ಕಾಗಲೀ ಅಥವಾ ನಕ್ಸಲೀಯರ ಹಾವಳಿಯನ್ನು ನಿಯಂತ್ರಿಸುವುದಾಗಲೀ ಅಲ್ಲ. ಅದು ಕೇರಳದ ಕಾಡು, ನದಿ, ಸಮುದ್ರವನ್ನು ನಿಯಂತ್ರಿಸುವುದಾಗಿದೆ. ಒರಿಸ್ಸಾದ ಬಾಕ್ಸೈಟ್ ಕಂಪೆನಿಗಳು ಒಂದೆ ಸಮನೆ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತಿರುವುದರ ಹಿಂದಿರುವುದು ಅಭಿವೃದ್ಧಿಯ ಉದ್ದೇಶವಲ್ಲ 1733 ಮಿಲಿಯನ್ ಟನ್ ಬಾಕ್ಸೈಟ್ ನಿಕ್ಷೇಪವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಾಗಿದೆ. ಪೂಚಿಮಡದಲ್ಲಿ ಕೋಕೊ ಕೋಲ ಕಂಪೆನಿಯು ಅಲ್ಲಿನ ಅಂತರ್ಜಲವನ್ನು ತನ್ನ ಬಾಟ್ಲಿಗಾಗಿ ಖಾಲಿ ಮಾಡುತ್ತಿದೆ ಮತ್ತು ಅಲ್ಲಿ ಜಮಿನು, ನದಿಗಳಿಗೆ ವಿಷ ಹರಿಸುತ್ತಿದೆ ಎಂಬುದು ತಿಳಿದಾಗ ಅಲ್ಲಿ ಜನರು ಘೋಷಣೆ ಕೂಗಿದ್ದು 'ಎ ದಿಲ್ ಮಾಂಗೆ ಮೋರ್'(ಈ ಹೃದಯ ಇನ್ನು ಹೆಚ್ಚಿನದನ್ನು ಬಯಸುತ್ತದೆ) ಎಂದಲ್ಲ 'ದಿಲ್ ಚಾಹ್ತಾ ನಹಿ'(ಹೃದಯಕ್ಕೆ ಬೇಕಿಲ್ಲ) ಎಂದು.

ಸರ್ಕಾರ ಆಡಳಿತ ವರ್ಗ ಅಭಿವೃದ್ಧಿ ಎಂದು ಕರೆಯುವ ದೈತ್ಯಗಾಡಿಗೆ ತೈಲ ಕಾಡು, ನದಿಗಳು, ಗಣಿಗಳು ಹಾಗು ಇತರ ನೈಸರ್ಗಿಕ ಸಂಪನ್ಮೂಲಗಳೆ ಉರುವಲು. ಈ ದೈತ್ಯಗಾಡಿಯ ಗಾಲಿಗಳಡಿಯಲ್ಲಿ ಜಗತ್ತಿನ ಎಲ್ಲ ಬಡವರು, ಅಂಚಿಗೆ ತಳಲ್ಪಟ್ಟ ಜನರು ಅಪ್ಪಚ್ಚಿಯಾಗುತ್ತಿದ್ದಾರೆ. ಅಮೇರಿಕ ಹೇರಿದ ನಿಷೇಧದಿಂದಾಗಿ, ಆಹಾರ, ಔಷಧಿ ಇಲ್ಲದೆ ನಿತ್ಯವು ಸಾವಿಗೆ, ರೋಗಕ್ಕೆ ತುತ್ತಾಗುತ್ತಿರುವ ಇರಾಕಿನ ಜನರಾಗಬಹುದು ವೈನಾಡಿನ ಬಡ ಆದಿವಾಸಿಗಳಾಗಿರಬಹುದು, ಕೆಲಸಕ್ಕಾಗಿ ವಲಸೆ ಹೋಗುವ ಭೂಹೀನ ದಲಿತರಾಗಬಹುದು ಇಲ್ಲ ಕಾರ್ಖಾನೆ, ಬೇಸಾಯದಲ್ಲಿ ಬೆನ್ನು ಮುರಿದು ಕೊಳ್ಳುವ ಮಹಿಳೆಯರಾಗಿರಬಹುದು.

ಯಾವ ಅಭಿವೃದ್ಧಿ ? ಯಾರಿಗಾಗಿ ಅಭಿವೃದ್ಧಿ ? ಪ್ರಗತಿಯನ್ನು ಅಳೆಯಲಿರುವ GDP ಯಂತಹ ಮತಿಹೀನ ಅಂಕಿ - ಅಂಶಗಳು ಇಂದು ನೀರಿನ ಬಾಟ್ಲಿ ಬೆಲೆಯನ್ನು ಹಾಲಿಗಿಂತ ಹೆಚ್ಚಿಸಿವೆ. ನಾವು ಉಸಿರಾಡುವ ಗಾಳಿ ವಿಷಾನಿಲವಾಗಿದೆ. ಜೀವ ನೀಡುತ್ತಿದ್ದ ನದಿಗಳು ವಿಷಮಯವಾಗಿ ಮಲಿನವಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಕಾರು, ವಾಶಿಂಗ್ ಮೆಶಿನ್, ಪ್ರೀತಿ, ನ್ಯಾಯ, ಕ್ರೀಡೆ, ರಾಷ್ಟ್ರೀಯತೆ ಮಾನವ ಹಕ್ಕುಗಳು, ಪ್ರಜಾತಂತ್ರ ಕುಡಿವ ನೀರು ಎಲ್ಲದಕ್ಕು ಬೆಲೆ ಪಟ್ಟಿಯಿದೆ.

ಜಗತ್ತಿನ ಆರ್ಥಿಕತೆಯನ್ನು ಗಮನಿಸಿದರೆ ಜಾಗತೀಕರಣಕ್ಕೆ ಹಾಗೂ ಕೋಮುವಾದಕ್ಕೆ ಹತ್ತಿರವಾದ ಸಂಬಂಧವಿರುವುದು ಕಂಡು ಬರುತ್ತದೆ. ಜಾಗತೀಕರಣದ ಬಿರುಗಾಳಿ ಸ್ಥಳೀಯ ಜನಾಂಗದ ಬಾಷೆ, ಸಂಸ್ಕೃತಿಯನ್ನು ಧೂಳಿ ಪಟ ಮಾಡುವುದರೊಂದಿಗೆ ಬೋಗದ ಸಂಸ್ಕೃತಿಯನ್ನು ಹುಟ್ಟು ಹಾಕುತ್ತದೆ. ಮೂಲಭೂತವಾದದ ಧಾರ್ಮಿಕ ಹೋರಾಟಗಳು ಬಹು ಸಂಸ್ಕೃತಿಯನ್ನು ನಾಶ ಮಾಡಿ ಎಕ ಸಂಸ್ಕೃತಿಯ ಅಸ್ತಿತ್ವಕ್ಕೆ ಹಾದಿ ಮಾಡಿ ಕೂಡುತ್ತದೆ. ಭಾರತದಂತಾ ದೇಶದಲ್ಲಿ ಇದು ಮೇಲು ಜಾತಿ ಹಾಗೂ ವರ್ಗದ ಸಾಂಸ್ಕೃತಿಕ ಹಿತಾಸಕ್ತಿಯನ್ನು ಕಾಪಾಡುವ ಹುನ್ನಾರವನ್ನು ಹೊಂದಿರುತ್ತದೆ.

ಪ್ರತಿಭಟನೆಯ ದನಿ ಸತ್ತುಹೋಗಿಲ್ಲ. ಜಗತ್ತಿನಾದ್ಯಂತ ಯುದ್ಧ ವಿರೋಧಿಸಿ ಪ್ರತಿಭಟನೆಗಳಾಗಿವೆ. ಲಕ್ಷಾಂತರ ಜನರು 'ತೈಲಕ್ಕಾಗಿ ರಕ್ತ ಹರಿಸಬೇಡಿ' 'ನನ್ನ ಹೆಸರಿನಲ್ಲಿ ನನ್ನ ತೆರಿಗೆಯಲ್ಲಿ ನನ್ನ ಮಗನೊಂದಿಗೆ ಯುದ್ಧ ಬೇಡ ಎಂದು ಪ್ರತಿಭಟಿಸಿದ್ದಾರೆ. ರಾಯಗಢ, ವೈನಾಡು, ಪೂಚಿಮಡ, ಬ್ರೆಜಿಲ್, ವೆನಿಜುವೆಲ, ಉರಗ್ವೆ, ಸಿಡ್ನಿ, ಗ್ಲಾಸ್ಗೋ ಇಲ್ಲೆಲ್ಲಾ ಜನ ಇತಿಹಾಸ ಬದಲಾಯಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದಾರೆ. ಜಾಗತೀಕರಣದ ವಿರುದ್ಧ ದನಿ ಎತ್ತಿರುವ ನರ್ಮದ ಹೋರಾಟ, ಮೀನುಗಾರರ ಹೋರಾಟಗಳಂತಹ ಹೋರಾಟಗಳಿಗೆ ಮಹಿಳಾ ಗುಂಪುಗಳು, ಇತರ ಸಾಮಾಜಿಕ ಶಕ್ತಿಗಳು ಕೈ ಗೂಡಿಸದಿದ್ದರೆ ನಾವು ನಮ್ಮ ಹೋರಾಟವನ್ನು ಗೆಲ್ಲಲು ಸಾಧ್ಯವಿಲ್ಲ.

ಇತಿಹಾಸ ನಿರ್ಮಾಣವಾಗುವಾಗ ಆ ಪ್ರಕ್ರಿಯೆಯ ಭಾಗವಾಗಬೇಕೆ ಅಥವಾ ಮೂಕಪ್ರೇಕ್ಷಕವಾಗಿ ಕುಳಿತಕೊಳ್ಳಬೇಕೆಂಬುದನ್ನು ನಾವು ನಿರ್ಧರಿಸ ಬೇಕಾಗಿದೆ.

- ಸಂಪಾದಕ ಮಂಡಳಿ

ನಮ್ಮ ಕೈಗಳೇ ನಮ್ಮ ಬಂದೂಕುಗಳು

ಕಾಶಿಪುರದಲ್ಲಿ ನಡೆಯುತ್ತಿರುವ ಆದಿವಾಸಿಗಳ ಹೋರಾಟ ಕುರಿತು ವರದಿ ತಯಾರಿಸಲು ಸತ್ಯಶೋಧನ ಸಮಿತಿಯ ಭಾಗವಾಗಿ ಮಾನಸದವರು ಹೋಗಬೇಕಾಗಿತ್ತು. ಹೋಗಲು ಒಪ್ಪಿಕೊಂಡವರು ವೈಯಕ್ತಿಕ ತೊಂದರೆಗಳಿಂದಾಗಿ ಕೊನೆ ಗಳಿಗೆಯಲ್ಲಿ ಆಗುವುದಿಲ್ಲವೆಂದಾಗ ಗಂಡ, ಮಕ್ಕಳು, ಸಂಸಾರವೆಂಬ ಜವಾಬ್ದಾರಿ ಇಲ್ಲದ ನಾನು ಹೋಗುವಂತಾಯಿತು. ಸಮಯ, ಹಣ, ಶಕ್ತಿ ಎಂಬ ಚಿಂತೆ ಕಾಡಿದರೂ ಹೋಗಲು ಸಿದ್ಧವಾದೆ. ಅಲ್ಲಿಗೆ ಹೋಗಿದ್ದೊಂದು ಅವಿಸ್ಮರಣೀಯ ಅನುಭವ. ಅಲ್ಲಿಗೆ ಹೋಗಿದ್ದರಿಂದ ನನ್ನ ಸಂಸಾರ ಒರಿಸ್ಸಾವರೆಗೂ ಹಬ್ಬಿತು. ಅಲ್ಲಿನ ಅನುಭವವನ್ನು ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ.



ದಿನಾಂಕ *13.12.02* ರಂದು ಇಲ್ಲಿಂದ ಹೊರಟು *14.12.02* ರಂದು ರಾಯಗಢ ತಲುಪಿದೆವು. ಅಲ್ಲಿ ನಾವು ಸಂಪರ್ಕಿಸ ಬೇಕಾಗಿದ್ದ ಪ್ರೊ. ರಫ್ ರವರು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಅವರನ್ನು ನೋಡಿದಾಗ ಸಂತನೊಬ್ಬನನ್ನು ನೋಡಿದಂತಾಯಿತು. ಅವರ ಜೊತೆಯಲ್ಲಿ ಅವರ ಸ್ನೇಹಿತರು, ಮತ್ತು ನಮಗಿಂತ ಮೊದಲೇ ಬೆಂಗಳೂರಿನಿಂದ ಹೋಗಿದ್ದ ಸ್ನೇಹಿತರೂ ಬಂದಿದ್ದರು. ರಫ್‌ರವರ ಮನೆಗೆ ಹೋಗಿ ಮಾರನೇ ದಿನದ ಕಾರ್ಯಕ್ರಮಗಳ ಕುರಿತು ಮಾತನಾಡಿದೆವು. ಮಾರನೇ ದಿವಸ ನಾವು ಪಿ.ಎಸ್.ಎಸ್.ಪಿ (ಪ್ರಾಕೃತಿಕ್ ಸಂಪದ್ ಸುರಕ್ಷಾ ಪರಿಷದ್) ಕಛೇರಿ ಇದ್ದ ಕುಚೆಪದಾರ್ ಎಂಬ ಹಳ್ಳಿಗೆ ಹೋಗ ಬೇಕಾಗಿತ್ತು. ದಿನಕ್ಕೊಂದೆ ಬಸ್ ಇರುವುದರಿಂದ ಮತ್ತು ನಮಗೆ ಹಲವಾರು ಕಡೆ ಹೋಗಬೇಕಾಗಿದ್ದುದರಿಂದ ಟ್ಯಾಕ್ಸಿ ಬುಕ್ ಮಾಡಿದೆವು. ಬೆಳಗಿನ ಜಾವವೇ ಎದ್ದು ತಯಾರಾದೆವು. ರಫ್‌ರವರು ಕಿತ್ತು ಕೊಟ್ಟ ಅವರ ತೋಟದ ಸೀಬೆ ಹಣ್ಣುಗಳನ್ನು ತುಂಬಿಕೊಂಡು, ಅವರ ತೋಟದ ಚೆಂಡು ಹೂ ಮುಡಿದು ನಾವೈದು ಜನ ಸ್ನೇಹಿತರು ಹೊರಟೆವು. ರಾಯಗಢದವರೇ ಆದ ಸತೀಶ್‌ರವರು ನಮ್ಮ ಗೈಡ್ ಆಗಿ ಉತ್ಸಾಹದಿಂದ ಬಂದರು. ಕುಚೇಪದಾರ್ ಹಳ್ಳಿಯನ್ನು ತಲುಪಿದಾಗ ಮೊದಲಿಗೆ ಕಂಡಿದ್ದು "ಅನುಮತಿ ಇಲ್ಲದೆ ಒಳಗೆ ಪ್ರವೇಶಿಸಬೇಡಿ", UAIL GO back ಎಂಬ ಬರಹ. ಹಳ್ಳಿಯೊಳಗೆ ಹೋದೆವು. ಎರಡೂ ಬದಿಯಲ್ಲಿ ಸಾಲುಮನೆಗಳು, ಎದುರಿಗೆ ಮೆಟ್ಟಿಲಿದ್ದ Open Stage. ಪುಟ್ಟ ಬಾಗಿಲುಗಳುಳ್ಳ ಮನೆಯ ಹೊರಗೋಡೆಗಳ ಮೇಲೆ ರಂಗೋಲಿಯ ಚಿತ್ತಾರದೊಂದಿಗೆ UAIL GO back ಎಂಬ ಇಂಗ್ಲೀಷ್, ಒರಿಯಾ ಬರಹಗಳು. ಮನೆಯ ಮುಂದೆ ಸಗಣಿ ಸಾರಿಸಿದ ನೆಲದ ಮೇಲೆ ಕಣ್ಸೆಳವ ಚಿತ್ತಾರದರಂಗೋಲಿಗಳು. ಅದರ ಎಳೆಗಳನ್ನು ನೋಡುತ್ತಾ ಅದರೊಳಗೇ ಕಳೆದು ಹೋಗಬಹುದಾದಷ್ಟು ಸೊಗಸಾದ ಚಿತ್ತಾರಗಳು.

ಪಿ.ಎಸ್.ಎಸ್.ಪಿ ಕಛೇರಿಗೆ ಹೋದೆವು. ಪುಟ್ಟ ಹೆಂಚಿನ ಮನೆಯದು ಹೊರಗಡೆ ಗೋಡೆಯ ಮೇಲೆ P.S.S.P ಕಛೇರಿ, ಎಂಬ ಬರಹ ಬಿಟ್ಟರೆ ಕಛೇರಿ ಎನಿಸಿಕೊಳ್ಳುವಂತಹ ಯಾವ ಕುರುಹೂ ಅಲ್ಲಿರಲಿಲ್ಲ. ಒಳಗೆ ಹೋದೆವು. ಒಂದಷ್ಟು ಜನ ಆಗಲೇ ಅಲ್ಲಿ ಸೇರಿದ್ದರು. ಆ ಮನೆಯೊಳಗೊಂದು ಪುಟ್ಟ ಅಡ್ಡಗೋಡೆ, ಮೇಲೆ ಮರದ ತೊಲೆಗೆ ಮುಸುಕಿನ ಜೋಳದ ತೆನೆಗಳನ್ನು ಕಟ್ಟಿದ್ದರು. ಒಂದು ಬದಿಗೆ ಬೀಸೋ ಕಲ್ಲು, ಮೂಟೆಗಳು. ಅಕ್ಕಿ ಹಾಕಿ ಮಾಡಿದ ಸಪ್ಪೆ ರಾಗಿ ಗಂಜಿ, ಪಕ್ಕಕ್ಕೆ ಹರಳುಪ್ಪು, ಹಸಿಮೆಣಸಿನಕಾಯಿ ಕೊಟ್ಟರು. ಗಂಜಿ ಕುಡಿದು ಕೊಂಡು P.S.S.P ಸ್ನೇಹಿತರನ್ನು, ಅವರ ಬೆಂಬಲಿಗರನ್ನು ಪರಿಚಯ ಮಾಡಿಕೊಂಡೆವು.

ಶ್ರೀ ಸನಾತನ್ ಪ್ರಾಕೃತಿಕ್ ಎಂಬುವವರು ಸಮಾಜವಾದಿ ನಾಯಕರು. ಅಲ್ಲಿ ಮೊದಲ ರೈತ ಸಂಘಟನೆ ಕಟ್ಟಿದವರು. ಮಿನುಗಾರರ ಸಂಘಟನೆಯಲ್ಲೂ ತೊಡಗಿಕೊಂಡಿರುವವರು. P.S.S.P ಯ ಹೋರಾಟವನ್ನು ಬೆಂಬಲಿಸುವ ಅವರು 16ನೇ ತಾರೀಖಿನ ಹುತಾತ್ಮರ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದರು. ಶ್ರೀ.ಸರೋಜ್‌ರವರು 'ಅನ್ವೇಷಾ' ಎಂಬ ರಾಜಕೀಯ ಆರ್ಥಿಕ ವಿಷಯಗಳ ಕುರಿತ ತ್ರೈಮಾಸಿಕದ ಸಂಪಾದಕರು. ಅವರು 93 ರಿಂದಲೂ P.S.S.P ಸಂಘಟನೆಯಲ್ಲಿ ದುಡಿಯುತ್ತಿದ್ದಾರೆ. ಒರಿಸ್ಸಾ ಪಿ.ಯು.ಸಿ.ಎಲ್ (ಪೀಪಲ್ಸ್ ಯೂನಿಟಿ ಫಾರ್ ಸಿವಿಲ್ ಲಿಬರ್ಟೀಸ್) ನವರಾದ ಶ್ರೀ.ನಿಗಮ್‌ರವರೂ ಸಹ P.S.S.P ಹೋರಾಟವನ್ನು ಬೆಂಬಲಿಸುತ್ತ ಬಂದಿದ್ದಾರೆ. ಎಲ್ಲರ ಪರಿಚಯವಾದ ಮೇಲೆ ಹಳ್ಳಿಯೊಂದಕ್ಕೆ ಭೇಟಿ ನೀಡಲು ಸನಾತನ್‌ರವರೊಂದಿಗೆ ಹೊರಟೆವು.

ಸಮಾಜವಾದಿಯಾದ ಸನಾತನ್‌ರವರು ದಾರಿಯುದ್ದಕ್ಕೂ ಅಲ್ಲಿನ ಹೋರಾಟ,ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಕುರಿತು ಹೇಳಿದ್ದು ಕೇವಲ ವಿವರಗಳಲ್ಲ. ಅಲ್ಲಿನ ಮಣ್ಣು ಮತ್ತು ಜನರೊಂದಿಗೆ ಅವರಿಗಿರುವ ಒಡನಾಟದ ಕುರುಹಾಗಿತ್ತು. ಅಭಿವೃದ್ಧಿಯ ಹೆಸರಿನಲ್ಲಿ ಗಣಿತೋಡಲು ಬಂದ Nalco (1984ರಿಂದ) UAIL (92ರಿಂದ) Hydro, Indalco, TATA ಕಂಪೆನಿಗಳು ಹೇಗೆ ಆದಿವಾಸಿಗಳ ಬದುಕನ್ನು ಗುಂಡಿಗೆ ಹಾಕಿ ಮುಚ್ಚುತ್ತಿದ್ದಾರೆಂಬುದನ್ನು ವಿವರವಾಗಿ ಹೇಳಿದರು. ಅಲ್ಲಿನ ಗುಡ್ಡಗಳಲ್ಲಿ ಬಾಕ್ಸೈಟ್ ಅದಿರು ಹೇರಳವಾಗಿ ತುಂಬಿದೆ. ಎಲ್ಲೆಲ್ಲಿ ಗುಡ್ಡದ ಮೇಲೆ ಝರಿ ಹರಿಯುತ್ತದೆಯೋ ಅಲ್ಲಿ ಬಾಕ್ಸೈಟ್ ಇದೆ. ಝರಿ ಬಾಕ್ಸೈಟ್ ಇರುವುದರ ಗುರುತು. ಅಲ್ಲಿನ ಬೆಟ್ಟಗಳ ತುದಿ ಚೂಪಾಗಿರದೆ ಅಗಲವಾಗಿದೆ, ಬೆಟ್ಟಗಳ ಮೇಲೆ ಪುಟ್ಬಾಲ್ ಸ್ಟೇಡಿಯಂನಷ್ಟು ದೊಡ್ಡ ಬಯಲುಗಳೂ ಇವೆ. ಗುಡ್ಡಗಳಲ್ಲಿ ಆದಿವಾಸಿಗಳು ಮಾಡುವ ಬೇಸಾಯ ಎಷ್ಟು ಕಷ್ಟದ್ದು. ರಾಜೀವ್ ಗಾಂಧಿಯವರು ತಮ್ಮ ಹೆಂಡತಿಯೊಂದಿಗೆ ಬಂದು ಆದಿವಾಸಿಗಳೊಂದಿಗೆ ಹಾಡಿಕುಣಿದು, ಅವರ ಕಷ್ಟಕ್ಕೆ ಮರುಗಿ ಮೊದಲು ಮಾಡಿದ್ದು ರಸ್ತೆ ನಿರ್ಮಾಣ. ಆ ರಸ್ತೆ ತಲುಪುವುದು ಬಾಕ್ಸೈಟ್‌ಗಣಿಗೆ ಮೈನಿಂಗ್ ಕಾಲೋನಿಗೆ! ಆದಿವಾಸಿಗಳ ಹಳ್ಳಿಗಲ್ಲ. ಹೀಗೇ ಅವರ ಮಾತುಗಳಲ್ಲಿ ಅಲ್ಲಿನ ಬದುಕು ಮನದೊಳಗೆ ಹರಡಿಕೊಳ್ಳುತಿತ್ತು. ಮಾತನಾಡುತ್ತಾ ತಲುಪಿದ್ದು ಬಂತೇಜಿ ಗ್ರಾಮಕ್ಕೆ ಅಲ್ಲಿ ಮೊದಲಿಗೆ ಸಿಕ್ಕಿದ್ದು ಕುಂಬಾರರ ಹಟ್ಟಿ. ನೆಲದ ಮೇಲಿನ ಮಣ್ಣು ತಿರುಗುವ ಚಕ್ರದ ಮೇಲೇರಿ ಮಡಿಕೆಯ ರೂಪ ತಳೆಯುವ ವಿಸ್ಮಯ ನೋಡಿ ಕಳೆದು ಹೋಗುವ ಮೊದಲು ಹರಿಜನರ ಹಟ್ಟಿಗೆ ಹೋದೆವು. ಆ ಗ್ರಾಮ ಸಿಜುಮಲಿ, ಕುಟ್ರಮಲಿ, ಕೊಂಡ್ವಾಲಿ ಮಲಿ (ಮಲಿ ಎಂದರೆ ಬೆಟ್ಟ) ಗಳಿಂದ ಸುತ್ತುವರೆದಿದೆ. ಆ ಮೂರೂ ಬೆಟ್ಟಗಳಲ್ಲಿ ಬಾಕ್ಸೈಟ್ ಹೇರಳವಾಗಿದೆ. ಅಲ್ಲಿನ ಆಂಚಲಿಕ ಸುರಕ್ಷಾ ಸಮಿತಿಯ ನಾಯಕರಾದ ನಿಧಾನ್ ನಾಯಕರವರನ್ನು ಮಾತನಾಡಿಸಿದೆವು. ಪಂಚೆ ಬನೀನು ತೊಟ್ಟ ಕುಳ್ಳಗಿನ ನಿಧಾನ್ ರವರು 'ಲೀಡರ್' ನಂತಿರದೆ ಕಷ್ಟ ಸುಖ ನಿಭಾಯಿಸೊ ಹಿರಿಯಣ್ಣನಂತಿದ್ದರು, ಅವರ ಹತ್ತಿರ ಮಾತನಾಡಿದ್ದು ಸಹ ನೆಂಟರಿಷ್ಟರ ಬಳಿ ಬಂಗಬಡ್ತನ ಮಾತಡ್ಡಂಗಿತ್ತು. ಎಲ್ ಅಂಡ್ ಟಿ ಮತ್ತು ಅಲ್ಕಾವ ಕಂಪೆನಿಗಳು ಇಲ್ಲಿ ಗಣಿಗಾರಿಕೆ ಶುರು ಮಾಡ ಬೇಕೆಂದಿದ್ದು ಸ್ಥಳೀಯರ ಹೋರಾಟದಿಂದಾಗಿ ಸಧ್ಯಕ್ಕೆ ನಿಂತಿದೆ. ಆ ಬಗ್ಗೆ ನಿಧಾನ್ ನಾಯಕ್‌ರವರು ವಿವರವಾಗಿ ಮಾತನಾಡಿದರು. ಮೊದಲು ಒರಿಸ್ಸಾ ಮೈನಿಂಗ್ ಕಂಪೆನಿಯವರು ಮಣ್ಣು ಪರೀಕ್ಷೆ ಮಾಡಲು ಬಂದರು. ಆಮೇಲೆ ಎಲ್ ಅಂಡ್ ಟಿ ಯವರು ಕೆಲಸ ಶುರುಮಾಡಿದ್ರು. 45 ಜನ ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡ್ತ ಇದ್ರು. ಸ್ಥಳೀಯರ್ಗೂ ಕೆಲ್ಸ ಕೊಟ್ಟಿದ್ರು. ಮಣ್ಣು ಪರೀಕ್ಷೆ ಮಾಡ್ಬೇಕು ಅಂತೇಳಿದ್ರು.



ಆಮೇಲಾಮೇಲೆ ಮೆಶಿನ್‌ನಲ್ಲಿ ಕೆಲ್ಸ ಮಾಡ್ತಿದ್ರು. ಯಾರ್ನು ಕೆಲ್ಸಕ್ಕೆ ತಗೊಳ್ತಿರ್ಲಿಲ್ಲ. ಕೊನೆಗೊಂದ್ಸಾರಿ ನಾಲ್ಕು ದಿಕ್ಕಿಗಿ ಸುಮಾರು 90 ಕಿ.ಮಿ. ದೂರದವರ್ಗೆ ಜಾಗ ಖಾಲಿಮಾಡ್ಬೇಕು ಅಂದ್ರು. ಯಾಕೆ ಏನೂ ಅಂತ ಒಂದೂ ನಮ್ಗೆ ತಿಳಿಲಿಲ್ಲ. ಇಲ್ಲೆ

ಅಗ್ರಗಾಮಿಯವರು (ಒಂದು N.G.O ಆಹಾರ ಸುರಕ್ಷಾ ಕಾರ್ಯಕ್ರಮಗಳ್ನ ಬಹಳಷ್ಟು ಹಳ್ಳಿಗಳಲ್ಲಿ ಮಾಡ್ತಾ ಇದೆ). ಸುಮಾರು 40 ಹಳ್ಳಿಗಳ ಜನರನ್ನ ಸೇರ್ಸಿ ಸಭೆ ಮಾಡಿ ಫ್ಯಾಕ್ಟ್ರಿ ಆಗೋ ವಿಷ್ಯ ಹೇಳಿದ್ರು. ಅವ್ರು ಈ ವಿಷ್ಯನಾ ಎಲ್ರಿಗೂ ಹೇಳಿದ್ರೂ ಭಯ, ಹೇಳ್ದೆ ಇದ್ರೂ ಭಯ ಅಂತ ಅಳುಕು ತೋರ್ಸಿದ್ರು. ಆದಕ್ಕೆ ನಾವು ಆ ಸಂಸ್ಥೆ ಬಿಟ್ಟು ಉಳಿದ 40 ಹಳ್ಳಿ ಜನ ಒಂದಾದ್ವಿ. ಸಾಗ್‌ವಾರಿ ಹಳ್ಳಿಲಿ ಬೆಟ್ಟಕ್ಕೆ ಹೋಗುವ ದಾರಿಗೆ ಗೇಟ್ ಹಾಕಿದ್ವಿ. ಎಲ್ ಆಂಡ್ ಟಿ ಯವರು ದೂರು



ನೀಡಿ ನಮ್ಮೆಲೆ ಕೇಸ್ ಹಾಕಿದ್ರು 20 ಜನದ ಮೇಲೆ ಜಗಳ ಗೂಂಡಾಗಿರಿ ಕೇಸು ಹಾಕಿದ್ರು. ಎಲ್ಲರ್ನು ಬಂಧಿಸಿದ್ರು. ಹಳ್ಳಿಯ ಜನರೆಲ್ಲ ಸೇರಿ ದುಡ್ಡೆತ್ತಿ ಬಿಡ್ಸಿಕೊಂಡು ಬಂದ್ರು. ನಮ್ಮ ಮೊದ್ಲು ಸಭೆಯಾಗಿದ್ದು 25.2.95 ರಂದು (ಪ್ರತಿಯೊಂದು ಕಾಗ್ದ ಪತ್ರ ಮೀಟಿಂಗ್ ವಿವರವನ್ನ ಜೋಪಾನವಾಗಿ ಇಟ್ಕೊಂಡಿದಾರೆ ನಡುನಡುವೆ ಹಲವು ದಾಖಲೆಗಳನ್ನ ತೋರಿಸಿದ್ರು) ಕಂಪೆನಿಯವರು ಗೂಂಡಾಗಳನ್ನು ಕಳಿಸಿ ಬೆದರಿಸಿದ್ರು. ನಾವ್ಯಾರು ಸಿಗ್ದೆ ಇದ್ ಕಾರ್ಣಕ್ಕೆ ಅಗ್ರಗಾಮಿಯವರ ಸುಂಗೇರಿ ಬ್ರಾಂಚ್ ಅನ್ನ 3.12.97 ರಂದು ಸುಟ್ಟು, 4ನೇ ತಾರೀಖು ಕೇರ್‌ಪೈ ಶಾಖೆ ಸುಟ್ರು. 5ನೇ ತಾರೀಖು 40 ಹಳ್ಳಿ ಜನ ಒಟ್ಗೆ ಸೇರಿ ಮೈನಿಂಗ್ ಆಫೀಸ್ಗೆ ಹೋದ್ವಿ. ಆಫೀಸಿನಲ್ಲಿದ್ದೋರೆಲ್ಲ ಓಡಿ ಹೋದ್ರು. ನಾವಲ್ಲಿ ರೊದೇನನ್ನು ಮುಟ್ಲಿಲ್ಲ, ತಗೊಂಡ್ ಬರ್ಲಿಲ್ಲ. ರೇಡಿಯೋ, ಟಿ.ವಿ. ಟೇಪ್‌ರೆಕಾರ್ಡರ್ ಎಲ್ಲ ಸೇರಿಸಿ ಅವರ ಆಫೀಸ್ ಸುಟ್ ಹಾಕಿದ್ವಿ, ನಮ್ ತಂಟೆಗೆ ಬರ್‌ಬಾರ್ದು ಅನ್ನೊದಕ್ಕೆ ಸುಟ್ವಿ ಹೊರ್ತು ಅವು ಸುಟ್ಟಿದ್ರು ಅನ್ನೊ ಕಾರ್ಣಕ್ಕೆ ಅಲ್ಲ. 62 ಜನರನ್ನ ಕಾಶಿಪುರದಪೋಲಿಸ್ನೋರು ಬಂಧ್ಸಿ ರಾಯಗಢ ಕೋರ್ಟಲ್ಲಿ ಹಾಜರ್ ಮಾಡಿದ್ರು. 15 ದಿನ ಜೈಲಲ್ಲಿಟ್ಟಿದ್ರು. ಅವ್ರು ಬಂದ್ರೊಸ್ಕೆ ಬಂದ್ರೆ ನಾವ್ಯಾರುತಪ್ಸಿಕೊಳ್ಳಿಲ್ಲ. ಹಂಗೆ ತಪ್ಸಿಕೊಂಡು ಹೋದ್ರೆ ಅವರು ಮನೆಗೆ ಬಂದು ಹೆಂಡ್ತಿ, ಮಕ್ಳು, ವಯಸ್ಸಾದವರ್ಗೆ ತೊಂದ್ರೆಕೊಡ್ತಾರೆ. ಬೇಲ್ ತಗೊಂಡು ಆಚೆ ಬಂದ್ಮೇಲೆ ಕಲಹಂಡಿ ಪೋಲಿಸ್ನೋರು ತಿರ್ಗ ನಮ್ಮನ್ನ ಬಂಧ್ಸಿ 13 ದಿನ ಕಲಹಂಡಿ ಜೈಲಲ್ಲಿಟ್ರು.

ಸ್ವಲ್ಪದಿವ್ಸ ಆದ್ಮೇಲೆ ಮುಖ್ಯಮಂತ್ರಿಗಳು ಹೆಲಿಕಾಪ್ಟರ್‌ನಲ್ಲಿ ಬರ್‍ತಾರೆ ಅಂತ ಮುಂಜಾಗ್ರತೆಗೆ ಅಂತ ಕೆಲವರ್ನ ಬಂಧಿಸಿದ್ರು. ಮುಖ್ಯಮಂತ್ರಿಗಳ್ನ ನೋಡೊಕೆ ಹೋದವರನ್ನೂ ಬಂಧಿಸಿದ್ರು. ಮುಖ್ಯ ಮಂತ್ರಿಗಳು ಹೋದ್ಮೆಲೆ ಬಂದು ಬಿಟ್ರು ಬಂದ್ಸಿ ಸರ್ವೇ ಮಾಡೋಕೆ ಅವ್ರೆಲ್ಲ ಹೆಲಿಕಾಪ್ಟರ್‌ನಲ್ಲಿ ಬಂದಿದ್ರು. ಫ್ಯಾಕ್ಟ್ರಿ ಆದ್ಮೇಲೆ ನಮ್ಗೆ ಪರಿಹಾರ ಕೊಡ್ತಿರಾ ಅಂತ ಕೇಳಿದ್ವಿ, ಇಲ್ಲ ಅಂದ್ರು, ಪರಿಹಾರಾನೂ ಕೊಡಲ್ಲ, ಕೆಲ್ಸಾನೂ ಕೊಡಲ್ಲ ಅಂತಿರಾ, ಪರಿಸರ ಹಾಳಾದ್ರೆ ನಮುಗ್‌ತಾನೆ ತೊಂದ್ರೆ ಆಗೋದು ಅಂದಿದ್ದಕ್ಕೆ ಕಲೆಕ್ಟರ್ ರವರು 'ನೀವು ಸ್ಥಳಾಂತರಗೊಂಡ್ರೆ ಇಡೀ ಜಗತ್ತು ಉದ್ಧಾರವಾಗುತ್ತೆ' ಅಂದ್ರು. ಗಂದಮರ್ದನ, ದಾಮನ್ ಜೋಡಿಲಿ ಕಂಪೆನಿಯವರಿಂದ ಎಲ್ಲಾ ಇಂತಹ ಕಳಕೊಂಡು ಜನ ಹಾಳಾಗಿ ಸಅನುಭವಿಸಿದ ಕಷ್ಟ ಏನೂ ಅಂತ ನಮ್ಗೆ ಗೊತ್ತಿತ್ತು ಅದ್ಕೆ ನಾವು ಮೊದ್ಲೆ ಎಚ್ಚೆತ್ಕೊಂಡ್ವಿ ಎಂದು ನಿಧಾನ್ ನಾಯಕ್ ಹೇಳಿದ್ರು. ಈಗ ಎಲ್ ಆಂಡ್ ಟಿ ಕೆಲ್ಸ ನಿಲ್ಸಿದೆ ಎಲ್ಲಿವರ್ಗೆ ಅಂತ ಗೊತ್ತಿಲ್ಲ. ಆ ಹಳ್ಳಿಯಲ್ಲಿ ಎಲ್ಲರ ಮೇಲು ಜನಿವಾರ ಕಂಡುಆಶ್ಚರ್ಯವಾಯ್ತು. ಹರಿಜನ್ರು ಅಂತಾರೆ ಜನಿವಾರ ಹೆಂಗೆ ಅಂತ ಕೇಳ್ದೆ. ಗಾಯತ್ರಿ ಆಶ್ರಮ ಅಂದ್ರು. ಆಮೇಲೆ ಗೊತ್ತಾಯ್ತು ಎಷ್ಟೊ ವರ್ಷಗಳ ಹಿಂದೆ ಯಾರೊ ಒಬ್ರು ಸ್ವಾಮಿಜಿ(ಹೆಸರು ಮರೆತೋಗಿದೆ) ಅಲ್ಲಿಗಾಯತ್ರಿ ಆಶ್ರಮ ಶುರುಮಾಡಿ ಎಲ್ಲರಿಗೂ ಜನಿವಾರ ಹಾಕಿದ್ರಂತೆ. ಅಲ್ಲಿ ಯಾರ್ದು ಬೇರೆಕೂಡಿಸೋದು, ಬೇರೆಕಡೆ ಊಟ ಹಾಕೋದು ಅದೆಲ್ಲ ಇಲ್ವಂತೆ ಯಾರಿಗಂದ್ರು ಜನಿವಾರ ಹಾಕಿ ಬೋದ್ನೆ ಮಾಡ್ತಾರೆ ಅಂತ ತಿಳೀತು. ಜನಿವಾರ ಹಾಕಿಕೊಂಡೋರು ಮಾಂಸ ತಿನ್ನೊ ಹಂಗಿಲ್ಲ, ಹೆಂಡ ಕುಡಿಯೊ ಹಂಗಿಲ್ಲ. ಕುಡಿತದ ಹಾವಳಿ ತಪ್ಪೊದ್ರಿಂದ ಗಾಯತ್ರಿ ಆಶ್ರಮ ಅಲ್ಲಿ ಜನಪ್ರಿಯವಾಗಿದೆ. ವಿವರವಾಗಿ ಅಧ್ಯಯನಮಾಡೋಕೆ ಆಸಕ್ತಿದಾಯಕ ವಿಷಯ ಅನ್ನಿಸ್ತು.

ಮೈಕಂಚ್‌ನಲ್ಲಿ ಹುತಾತ್ಮರ ದಿನ : ದಿನಾಂಕ 16.12.02 ರಂದು ಮೈಕಂಚ್ ಹಳ್ಳಿಯಲ್ಲಿ ಹುತಾತ್ಮರ ದಿನವನ್ನು ಆಚರಿಸಲಾಯಿತು. ದಿನಾಂಕ 16.12.2000 ದಂದು ಮೂರು ಜನ ಆದಿವಾಸಿ ಹೋರಾಟಗಾರರಾದ ಅಭಿಲಾಷ್, ರಘುನಾಥ್ ಜೋಡಿಯ ಮತ್ತು ದಾಮೋದರ್ ಜೋಡಿಯ ಪೋಲಿಸರ ಗುಂಡಿಗೆ ಬಲಿಯಾದರು. 6 ಜನ ತೀವ್ರವಾಗಿ ಗಾಯಗೊಂಡು 30 ಕ್ಕಿಂತ ಹೆಚ್ಚಿನವರಿಗೆ ಸಣ್ಣ ಪುಟ್ಟ ಗಾಯಗಳಾದವು. ರಾಜಕೀಯ ಪಕ್ಷದ ಸ್ಥಳೀಯ ನಾಯಕನೊಬ್ಬ ನಡೆಸಿದ ಸಮಾರಂಭದ ಸಮಯದಲ್ಲಿ ಆದಿವಾಸಿ ಹೆಣ್ಣು ಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸಿದ್ದಕ್ಕೆ ಅಲ್ಲಿನ ಆದಿವಾಸಿಗಳು ಜಗಳವಾಡಿದ್ದನ್ನೆ ನೆಪ ಮಾಡಿಕೊಂಡು ಮಾರನೆಯ ದಿನ ಪೋಲಿಸರು ಹಟ್ಟಿಗೆ ಬಂದು ವಿಚಾರದೆ ನಡೆಸಿದ್ದಾರೆ. ಮನೆಯಲ್ಲಿದ್ದವರನ್ನ ಎಲ್ಲ ಎಲ್ಲಿ ಹೋಗಿದ್ದಾರೆಂದು ಕೇಳಿದ್ದಾರೆ. ಹಾಗೆ ಜೋರಿನಲ್ಲಿ ಕೇಳುವಾಗ ಮುದುಕಿಯೊಬ್ಬಳಿಗೆ ಬಂದೂಕಿನ ಹಿಂಬದಿ ಹಣೆಗೆ ತಾಗಿ ಆಕೆ ನೆಲಕ್ಕೆ ಬಿದ್ದು ಪ್ರಜ್ಞೆ ಕಳೆದುಕೊಂಡ್ಳು. ಸತ್ತು ಹೋದಳೇನೊ ಎಂಬ ಗಾಭರಿಯಲ್ಲಿ ಸುತ್ತಲ್ಲಿನ ಗುಡ್ಡದಲ್ಲಿದ್ದವರೆಲ್ಲ ಬಂದಿದ್ದನ್ನೆ ನೆಪಮಾಡಿಕೊಂಡ ಪೋಲಿಸರು ಅವರನ್ನೆಲ್ಲಾ ಅಟ್ಟಿಸಿಕೊಂಡು ಹೋಗಿ ಫೈರಿಂಗ್ ಮಾಡಿದಾಗ ಮೂರು ಜನ ಬಲಿಯಾದರು. ಇದರ ಹಿಂದೆ ಆದಿವಾಸಿಗಳ ಹೋರಾಟವನ್ನು ಮುರಿಯುವ ಸಂಚು ಇತ್ತು. ಆದರೆ ಇದಕ್ಕೆ ವಿರುದ್ಧವಾಗಿ ಹೊರಾಟ ಇನ್ನೂ ತೀವ್ರಗೊಂಡಿತು. ಅಂದಿನಿಂದ ಪ್ರತಿವರ್ಷ ಡಿಸೆಂಬರ್ 16ನ್ನು ಹುತ್ಮಾತರ ದಿನವನ್ನಾಗಿ ಆಚರಿಸಲಾಗುತ್ತಿದ್ದು ಅದರಲ್ಲಿ ಆದಿವಾಸಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಹಲವಾರು ಇತರೆ ಸಂಗಟನೆಗಳವರು ಭಾಗವಹಿಸಿ ಬೆಂಬಲ ಸೂಚಿಸುತ್ತಾರೆ. ಅಲ್ಲಿ ಕೆಲವರನ್ನು ಭೇಟಿಯಾಗಿ ಮಾತನಾಡಿಸಿದೆವು.

ಬುಲ್ಕ ಮೀಶಿಯಕ್ಕ : ಕೊರಾಪುಟ್ ಜಿಲ್ಲೆಯ ಬಾರಿಗಾವ್ ಹಳ್ಳಿಯವರು, ತಮ್ಮ ಅನುಭವ ಹಂಚಿಕೊಂಡರು. ನಮ್ಮ ಹಳ್ಳಿಗೆ ಸರ್ವೇ ಮಾಡಲು ಒಂದು ಗುಂಪು ಬಂತು. ಒಂದು ಆಣೆಕಟ್ಟು ಕಟ್ತೀವಿ ಕುಚೇಪದರ್ ಹಳ್ಳಿಗೆ ನೀರು ಕೊಡಲು ಅಂತ ಹೇಳಿದ್ರು. ಎಷ್ಟು ಅಡಿ ಅಂತ ಕೇಳಿದ್ವಿ. 4 ಅಡಿ ಅಂದ್ರು. ನಾಲ್ಕಡಿ ಕಟ್ಟಿ ನೀರ್ ಕೊಡೋಕೆ ಸಾಧ್ಯವ ಅಂದುಕೊಂಡ್ವಿ. ಕೆಲ್ಸ ಶುರು ಮಾಡಿದ್ರು, ಬೇರೆ ಕಡೆಯಿಂದ ಕೆಲ್ಸಗಾರರ್ನ ಕರ್ಕೊಂಡು ಬಂದ್ರು. ನಮ್ಮ ಹಳ್ಳಿಗೆ ಬಂದು ಕೆಲ್ಸ ಮಾಡ್ತಾ ಇದ್ದೀರಿ, ನಮ್ಗೆ ಕೆಲ್ಸ ಯಾಕೆ ಕೊಡಲ್ಲ ಅಂತ ಕೇಳಿದ್ದಕ್ಕೆ ಚಕಮುಕಿ ಆಯ್ತು ಟಿಕ್ರಿ, ಲಕಿಪುರ ಠಾಣೆಯಲ್ಲಿ ದೂರು ನೀಡಿದ್ರು. ಪೋಲಿಸ್ರು ಬಂದು ಸರ್ವೆ ಮಾಡೊರ್ಗೆ ಹೇಳಿದ್ರು 'ಹಳ್ಳಿಯವರ್ಗೆ ಹೇಳ್ದೆ ಮಾಡೋದು ಗಲಾಟೆಗೆ ಕಾರಣವಾಗುತ್ತೆ ಅಂತ. ಕೆಲ್ಸ ಮಾಡ್ತ ಇದ್ದೋರು ಸಹ ಆದಿವಾಸಿಗಳೊಂದಿಗೆ ಗಲಾಟೆ ಮಾಡ್ಬೇಡಿ ಅಂತ ಹೇಳಿದ್ರು. ಆಮೇಲೆ ನಮ್ಗೆ ಗೊತ್ತಾಯ್ತು ಅಣೆಕಟ್ಟಿನಿಂದಾಗಿ 12 ಹಳ್ಳಿಗಳು ಮುಳುಗುತ್ತೆ ಅಂತ. ಆದ್ರಿಂದ ನಾವು ಹೋರಾಟ ಪ್ರಾರಂಭಿಸಿದೆವು. ಹಳ್ಳಿ ವಳ್ಗೆ ಯಾರನ್ನೂ ಬಿಡ್ದೆ ಸರ್ವೇನೆ ನಿಲ್ಸಿದ್ವಿ. ಅಲಿಪುಟ್, ಬಾರಿಗಾವ್ ಹಳ್ಳಿಗಳಿಗೆ ನುಸುಳಲು ನೋಡಿದ್ರು ಅಲ್ಲೂ ಜನ ಅವರನ್ನ ಓಡಿಸಿದ್ರು ಎಲ್ಲರ್ನು ಸೇರ್ಸಿ ಸಭೆ ಮಾಡೋಣ ಅಂದ್ಕೊಂಡ್ವಿ. ಪೋಲಿಸ್ರು ಬಿಡ್ಲಿಲ್ಲ. ಮೂರ್ ದಿನದ್ ಮೇಲೆ ಕಲೆಕ್ಟರ್ ಎಸ್.ಪಿ ತಹಶೀಲ್‌ದಾರ್ ಬಂದ್ರು. ಆಗ ನಾವು ಕೇಳಿದ್ವಿ 'ನಮ್ಗೆ ಸಭೆ ಮಾಡೋಕೆ ಅನುಮತಿ ಕೊಡ್ಲಿಲ್ಲ, ಈಗ ನಮ್ಮ ಅನುಮತಿ ಇಲ್ದೆ ಹಳ್ಳಿಗೆ ಹೆಂಗೆಬಂದ್ರಿ ?' ಏನೂ ಮಾತಾಡ್ದೆ ಕ್ಷಮೆ ಕೇಳಿ ಹೋದ್ರು.

ಸ್ವಲ್ಪ ದಿನ ಆದ್ಮೇಲೆ ಬಾರಿಗಾವ್‌ಗೆ ಪೋಲಿಸ್ರ ಪಡೆ ಬಂತು. ಕೆಂದುಪೈ ಹಳ್ಳಿ ಮೂಲಕ ಪಡೆ ಬರಲು ಶುರುವಾಯ್ತು. ಕಾಡು, ಗುಡ್ಡಲ್ಲಿ ಲಾಠಿ ಛಾರ್ಜ್ ಕಷ್ಟ ಅಂತ ವಾಪಸೋದ್ರು. ನಮ್ಮ ಹಳ್ಳಿ ಹತ್ರ ಪೋಲಿಸ್ ಪಡೆನಿಂತಿತ್ತು. ಒಬ್ರು ಬಲ್ಕಾ ಎಲ್ಲಿರ್ತಾನೆ ಅಂತ ನನ್ನೆ ಕೇಳಿದ್ರು. ಗೊತ್ತಿಲ್ಲ ಅಂದೆ. ಮುಂದೆ ಹೋದ್ರು. 'ಮುಂದೆ ಹೋಗ್ಬೇಡಿ' ಅಂದೆ ಏನಾಗುತ್ತೆ ಅಂತಕೇಳಿದ್ರು ಅದ್ಕೆ 'ಗೊತ್ತಿಲ್ಲ ವಾಪ್ಸು ಬರ್ದೇನೂ ಇರ್ಬೋದು' ಅಂದೆ ಹೊರಟೋದ್ರು ಆಮೇಲೊಂದಿನ ನನ್ನ ತಮ್ಮ ಮತ್ತು ಅಲಿಪುಟ್‌ಗ್ರಾಮದ ಇಬ್ಬರನ್ನು ಟಿಕ್ರಿಯಲ್ಲಿ ತರ್ಕಾರಿ ಮರೋಕೋದಾಗ ಬಂಧ್ಸಿ ರಾಯಗಢಕೋರ್ಟಿನಲ್ಲಿ ಹಾಜ್ರು ಪಡ್ಸಿದ್ರು 5000 ರೂ ಧಂಡ ಹಾಕಿದ್ರು. ಆಗ ಪಿ.ಎಲ್.ಎಸ್.ಪಿ ಯ ಕೃಷ್ಣಕಾಂತ್ ಅವ್ರು ಬಂದು ವಿಚಾರಿಸಿ 5000 ರೂ ಕೊಡ್ತಿವಿ ಅಂದ್ರು. 'ದಂಡ ಯಾಕೆ ಕೊಡ್ಬೇಕು ತಪ್ಪಿಲ್ದೆ ಹೋರಾಟ ಮಾಡೆ ಆಚೆ ಬರೋಣ' ಅಂದೆ. ಟಿಕ್ರಿ ಜನಕ್ಕೆನೊ ತಕ್ಷಣವೆ ಬೇಲ್ ಸಿಕ್ಕಿತ್ತು ಲಕಿಪುರದವರಿಗೆ ಬಂದು ವಾರವಾಯಿತು. ಈಗಲೂ ಲಕಿಪುರದ 7 ಜನರ ಮೇಲೆ ಕೇಸಿದೆ.

ನಮ್ಮಲ್ಲಿ ಬರ ಕಾಡುವ ಸಮಸ್ಯೆ. ನೀರನ್ನು ಉಪಯುಕ್ತವಾಗಿ ಬಳಸಿ ಕೊಳ್ಳುವ ವಿಧಾನವಿಲ್ಲ. ಸರ್ಕಾರ ಕಂಪೆನಿಯವರೊಂದಿಗಿರುವುದರಿಂದ ಸರ್ಕಾರವನ್ನು ಕೇಳಲು ಹಿಂದೇಟು ಹೊಡೆಯುತ್ತೇವೆ. ಪ್ರಧಾನ ಮಂತ್ರಿಗಳ ರಸ್ತೆ

ಮಾಡುವಯೋಜನೆಯಲ್ಲಿ ಮೆಶಿನ್ನುಗಳನ್ನೆ ಬಳಸುತ್ತಾರೆ ನಮಗೆ ಕೆಲಸ ಕೊಡುವುದಿಲ್ಲ. ನೆಲ್ಕೊ ಕಂಪೆನಿಯವರಿಂದ ಆಗಿರುವ ಹಾನಿಯಿಂದ ನಾವು ಪಾಠ ಕಲಿತಿದ್ದೇವೆ. ನಮ್ಮ ಹಳ್ಳಿಯಲ್ಲಿ ಸರ್ವೇ ಮಾಡಲೂ ಸಹ ಬಿಡಬಾರದೆಂದು ಕೊಂಡಿದ್ದೇವೆ. 'ಸರ್ಕಾರಿ ಜಮೀನು ಎಂದು ಎತ್ತಂಗಡಿ ಮಾಡಲು ನೋಡುತ್ತಾರೆ. ಓಟು ಹಾಕಿ ಸರ್ಕಾರ ಮಾಡುವವರು ನಾವಾ ಇಲ್ಲಾ ಕಂಪನಿಗಳಾ? ಸರ್ಕಾರ ಕೆಲಸ ನಮ್ಮನ್ನು ರಕ್ಷಿಸೋದು ಅದು ಬಿಟ್ಟು ಸರ್ಕಾರ ನಮ್ಮ ಮೇಲೆ ಗುಂಡು ಹಾರಿಸುತ್ತೆ, ತಪ್ಪೇ ಇಲ್ಲದೆ ಶಿಕ್ಷೆ ನೀಡುತ್ತೆ, ಏನೇ ಆದರೂ ನಾವು ನಮ್ಮ ಹೋರಾಟ ನಿಲ್ಲಿಸೆವು. ಪೋಲಿಸರು ಬರುವಾಗ ಅವರ ಗುಂಡುಗಳಿಗೆ ಎದೆಯೊಡ್ಡಲು ನಮ್ಮಂತಹ ಹಿರಿಯರು, ವಯಸ್ಸಾಗಿರುವರು ಯಾವಾಗಲೂ ಸಿದ್ಧರಾಗಿರುತ್ತೇವೆ. ಇಂದೋ ನಾಳಯೋ ಸಾಯುವವರು ನಾವು, ಚಿಕ್ಕವರು ಬಾಳಿ ಬದುಕ ಬೇಕು ಎಂದ ನಿಧಾನ ನಾಯಕ್‌ರವರನ್ನು ಮಾತನಾಡಿಸಿಕೊಂಡು ಕುಚೇಪದಾರ್‌ಗೆ ವಾಪಸ್ಸು ಬಂದೆವು. ಮಾರನೆದಿನದ ಮೈಕಂಚ್ ಕಾರ್ಯಕ್ರಮಕ್ಕೆ ತಯಾರಿ ನಡೆದಿತ್ತು. ಬೇರೆ ಊರುಗಳಿಂದ ಜನ ಬಂದು ಸೇರುತ್ತಿದ್ದರು. ಥಂಡಿ ಹೆಚ್ಚಾ ಇತ್ತು. ಎಷ್ಟು ಹೊದ್‌ಕೊಂಡ್ರು, ಎಷ್ಟು ಮುದ್ರಿಕೊಂಡು ಕೂತ್ರು ತಡ್ಕೊಕಾಗಲ್ಲ. ದೇಬ ಬಂದು ಏಳು ಮೇಲೆ ಅಂತ ಯಾರ್ದೊ ಮನೆಗೆ ಕರ್ಕೊಂಡು ಹೋದ. ಆ ಮನೆಯವರು ಬಾಗ್ಲಲ್ಲಿ ಬೆಂಕಿ ಹಾಕ್ಕೊಂಡು ಚಳಿ ಕಾಯಿಸ್ತಾ ಇದ್ರು. ಬೆಂಕಿ ಕಂಡದ್ದೆ ಮನೆ ಒಳ್ಗೆ ಹೋಗ್ದೆ ಬೆಂಕಿ ಮುಂದೆ ಕೂತೆ. ಮೈ ಬೆಚ್ಚಗಾಗಿ ಎಂತ ಸುಖ! ಮೇಲೆ ಒಂಟಿ ಚಂದ್ರನೊಂದಿಗೆ ಅವನ ನಕ್ಷತ್ರಗಳ ಪರಿವಾರ ಇಲ್ಲಿ ನೆಲದ ಮೇಲೆ ಚಂದ್ರನ ಬೆಳ್ಳಿ ಬೆಳಕಿನೊಂದಿಗೆ ಕಷ್ಟ ಸುಖ ಮಾತನಾಡುವ ರಂಗೋಲಿಯ ಬೆಳ್ಳಿ ಎಳೆಗಳು. ಬಡಿಯಲು ತಮಟೆ ಸಿದ್ಧವಾಗುತ್ತಿತ್ತು. ಕುಣಿಯಲು ಕಾಲುಗಳು ಸಜ್ಜಾಗುತ್ತಿದ್ದವು. ಮನೆಯೊಳಗೆ ದೇಬ, ಆ ಮನೆ ಹೆಂಗಸಿನೊಂದಿಗೆ ಮಾತನಾಡುತ್ತಾ ಉಣ್ಣುತ್ತಿದ್ದ. ಕೋಳಿ ರೆಕ್ಕೆಯೊಳಗೆ ಹೂಮರಿಗಳ ಕವುಚಿಕೊಳ್ಳುವಂತೆ ಸಮಾಧಾನ ಎಲ್ಲರನ್ನು ಕವುಚಿಕೊಂಡಿತ್ತು. ಅಲ್ಲಿದ್ದ ಸಮಾಧಾನ -ವನ್ನಿಂದಷ್ಟು ಹೊದ್ದುಕೊಳ್ಳಲು ಆಸೆಯಾಗಿ ಮನೆಯೊಳಗೆ ಹೋದೆ. ಆ ಮನೆಯಾಕೆ ಎತ್ತರಕ್ಕಿದ್ದ ಹೊಸ್ತಿಲ ಮೇಲೆ ಕೂತು ಚಳಿಕಾಯಿಸಿಕೊಳ್ಳುತ್ತಿದ್ದಳು. ಅವಳ ಮಗ್ಗುಲಿಗೆ ಹೋಗಿ ಕೆಂಡದ ಬಿಸಿಗೆ ಕೈ ಹರಡಿ ಕೂತೆ. ಅವಳ ಮೈ ತೊಗಲು ದಂಡಿನ ಶಿವಿರದ ನನ್ನಮ್ಮನಂತೆ. ವಾಸನೇನೂ ಅಂತದ್ದೆ. ಅಡ್ಗೆ ಏನು ಅಂತ ಮಡ್ಕೆ ಮುಚ್ಳ ತೆಗ್ದು ನೋಡ್ದೆ ಅನ್ನ ಹಾಕಿದ್ದರಾಗಿ ಮುದ್ದೆ, ಹುಳಿ ರಾಗಿಗಂಜಿ, ಸೊಪ್ಪಿನ ಜೊತೆ ಬೇಸಿದ್ದ ಮೂಲಂಗಿ, ಮಡ್ಡಿ ದೀಪದ ಬೆಳಕಿನಲ್ಲಿ ನಾನು, ಮೂಸೆ, ದೇಬ ಕೂತು ಮಾತಾಡಿದೆವು ದಲಿತ ಚಳುವಳಿ, ಆದಿವಾಸಿಗಳ ಹೋರಾಟ ಕೂತು ಮಾತಾಡಿದೆವು. ಚರ್ಚೆಯಲ್ಲ ಅದು ಹೊಟ್ಟೆ ತುಂಬ ಉಂಡು ಕಾಲ್‌ಚಾಚ್ಕೊಂಡು ಸಮಾಧಾನವಾಗಿ ಆಡೊ ಮಾತುಗಳು. ನಮ್ಕಡೆಲಿ ಇಂಗಂದೆ, ನಿಮ್ಕಡಲೆ ಎಂಗಿದೀರಿ ಅನ್ನಂಗೆ. ಹೊರ್ಗಡೆ ತಮ್ಟೆ ಸದ್ದು, ಹಾಡಿನ ಸದ್ದು ಹೆಚ್ಚಾಯ್ತು ಹೊರ ಬಂದು ನೋಡಿದ್ರೆ, ಬೆಳದಿಂಗಳ ಬೆಳಕಲ್ಲಿ ಸಾಲಾಗಿ ಸರಪಳಿ ಮಾಡಿಕೊಂಡು ಕುಣಿಯುತ್ತಿದ್ದದ್ದು ಹಾವು ಹರಿದಂಗೆ ಇತ್ತು. ನಾವೂ ಹೋಗಿ ಸರಪಳಿಗೆ ಕೊಂಡಿಯಾದೆವು ಎಷ್ಟು ಚಂದದ ಸರಪಳಿ ಅದು! ಸುಮಾರು ನೂರ ಜನ ಇರ್ಬೇಕು ಅಷ್ಟೆ ಉದ್ದ ಹಿಂದೆ ಮುಂದೆ ತೂಗುತ್ತ, ಲಯ ಬದ್ಧವಾಗಿ ಸರಸರ ಹರಿವ ಸರಪಳಿ, ಕೊನೆಯೇ ಇಲ್ಲದೆ ಯಾರದರೂ ಸೇರಿಕೊಳ್ಳುತ್ತಾ ಹೋಗಬಹುದಾದ ಸರಪಳಿ. ನಾನು ಒಂದೇ ಸುತ್ತಿಗೆ ಸುಸ್ತು ಹೊಡೆದರೆ ಅವರೆಲ್ಲ ಚೂರು ಉಸಬುಸ ಎನ್ನದೆ ನದಿಯಂತೆ ಹರಿಯುತ್ತಿದ್ದರು, ಚೆಂದಾಗಿ ತೂಗುತ್ತ. ಸುಸ್ತಾದರೂ ಸರಪಳಿ ಬಿಡದೆ ನಾವೂ ನಗರದವರು ಕುಣಿದೆವು. ಲಯವಿಲ್ಲದೆ ಅಡ್ಡಾದಿಡ್ಡಿ. ಕುಣಿದು ಸಾಕಾಗಿ, ಮಾತಾಡಿ ಸಾಕಾಗಿ ಮಲಗಿದ್ದು ಎಷ್ಟೊತ್ತಿಗೊ. ಬೆಳಗ್ಗ ಏಳುವಹೊತ್ತಿಗೆ, ಆಗಲೇ ಎಲ್ಲರೂ ಎದ್ದು ಎಷ್ಟೊ ಕೆಲಸಗಳುನಡೆಯುತ್ತಿದ್ದವು. ಎಲ್ಲರೂ ಕಡ್ಡಿ ಜಗಿದು ಹಲ್ಲುಜ್ಜುತ್ತಿದ್ದರು. ಕಾಡು ತಂಬಾಕಿನ ಕಡ್ಡಿ ಅದು. ನಾನೂ ಕಡ್ಡಿ ಜಗಿದು ಉಜ್ಜದೆ, ಟೂಥ್‌ಪೇಸ್ಟ್ ಸೇರಿಸಿ ಹಲ್ಲುಜ್ಜಿದ ಮೇಲೆ ಟೀ ಕುಡಿಯಲು ಜೀವ ಹಾತೊರೆಯುತ್ತಿತ್ತು. ಟೀ, ಕಾಫಿ ಸುಳಿವೆ ಇಲ್ಲ. ಒಂದೇ ಒಂದು ಅಂಗ್ಡಿಲಿ ಸಿಗುತ್ತೆ ಅಂತ ಗೊತ್ತಾಗಿ ಅಲ್ಲಿಗೆ ಹೋದ್ವಿ. ಅಲ್ಲಿ ಒಂದು ಹೆಂಗ್ಸು ಮನೆನಲ್ಲೆ ಪುಟಾಣಿ ಅಂಗ್ಡಿ ಮಾಡ್ಕೊಂಡು ಬನ್ನು, ಬೀಡಿ, ಸಿಗರೇಟು, ಟೀ ಮಾಡ್ತ ಇದ್ಲು. ಟೀಗೆ ಹೇಳಿ ಅಲ್ಲೆ ಒಲೆಪಕ್ಕ ಕಟ್ಟೆ ಮೇಲೆ ಕೂತೆ ಅಮುಲ್ ಹಾಲಿನ ಪುಡಿ ಡಬ್ಬ ಕಾಣಿಸ್ತು. ಇದೇನಪ್ಪ ಅಂದು ಕೊಂಡು ಇದು ಹೆಂಗೆ ಇಲ್ಲಿಗೆ ಬಂತು ಅಂತ ಸನ್ನೆ ಮಾಡಿಕೇಳ್ದೆ, ಅದ್ರಲ್ಲೆ ಟೀ ಮಾಡೋದು ಅಂದ್ಲು. ಆಶ್ಚರ್ಯ ಅನ್ಸಿ ದೇಬನ್ನ ಕರ್ದು ಕೇಳ್ದೇ ನಿನ್ನೆಯಿಂದ ಎಷ್ಟೊಂದು ಮೇಕೆ, ದನ ನೋಡ್ತಾ ಇದಿವಿ. ಇದ್ಯಾಕೆ ಹಾಲಿನ ಪುಡಿಲಿ ಟೀಮಾಡ್ತರೆ ಅಂತ ಕೇಳ್ದೆ. ಅವನು ನಕ್ಕು ಹೇಳ್ದ. 'ಇಲ್ಲಾರು ಹಾಲನ್ನ ಕರ್ಯೋದೆ ಇಲ್ಲ. ನಿಮ್ಮಂತಹ ಸಿಟಿಯವರು ಬರ್ತಾರೆ ಅಂತ

ಈಗಿಗ ಟೀ ಮಾಡ್ತರೆ ಅಂಗ್ಡಿಲಿ. ಇಲ್ಲ ಅಂದ್ರೆ ಇಲ್ಲಾರು ಕಾಫೀ ಟೀ ಕುಡ್ಯಲ್ಲ ಕುಡ್ಯೊದು ರಾಗಿ ಗಂಜಿ, ಇಲ್ಲ ಮಹುವ ಹೆಂಡ' (ಕಾಡಿನ ಮರದ ಹೂ) ಅಂದ. ಅಯ್ಯೊ ಶಿವ್ನೆ ಅಂಗರೆ ದನ ಯಾಕೆ ಸಾಕ್ಕೊಂಡವ್ರೆ ಅಂತ ಕೇಳ್ದೆ. 'ದನ ಸಾಕಿರೋದು ಉಳ್ಮೆ ಮಾಡಕೆ, ಗೋಬ್ಬರಕ್ಕೆ, ತಿನ್ನಕ್ಕೆ, ದನದ ಹಾಲು ದನದ ಕರುವಿಗಷ್ಟೇ ಹಂಗೂ ಅಪ್ಪಿತಪ್ಪಿ ಹಾಲು ಕುಡ್ಯೊದು ಅಂದ್ರೆ ದನ ಮೇಯ್ಸೊ ಹುಡುಗ್ರು, ಅದು ಮೇಯ್ಸ್‌ಕೊಂಡು ಹೋದಾಗ ಕದ್ದು ಕರ್ಕೊಂಡು ಕುಡಿತಾರೆ ಅಂದ. 'ಹಾಲಿನಲ್ಲಿ ಕ್ಯಾಲ್ಸಿಯಂ ಇದೆ. ಪೌಷ್ಠಿಕತೆಗಾಗಿ ನಿತ್ಯವೂ ಎರಡು ಲೋಟ ಹಾಲು ಕುಡಿಯ ಬೇಕು, ಬೆಂಗಳೂರು ಡೈರಿ ನಂದಿನಿ ಹಾಲು ಎಲ್ಲ ನೆನಪಿಗೆ ಬಂದು. ಟೀ ಗುಟಕರಿಸುತ್ತ ಕೂತೆ'.

ಅಲಾಯ್ ಮಾಜಿ : ಪ್ರಾಣ ತೆತ್ತರೂ ನಮ್ಮ ಭೂಮಿ ಬಿಡೆವು ಎಂದು ಹೋರಾಟಕ್ಕೆ ಬದ್ಧಳಾಗಿರುವ ಅಲಾಯ್ ಮಾಜಿಯನ್ನು ಮಾತನಾಡಿಸಿದೆವು. ಪೋಲಿಸರನ್ನು ಒಮ್ಮೆ ಹೇಗೆ ಎದುರಿಸಿದೆವೆಂಬ ಘಟನೆಯನ್ನು ನಮ್ಮೊಡನೆ ಆಕೆ ಹಂಚಿಕೊಂಡರು. ಸರ್ವೇ ಮಾಡೋರು ಒಂದ್ ಸಲ ನಮ್ಮ ಳ್ಳಿಗೆ ಪೋಲಿಸರ ಸಮೇತ ಬಂದ್ರು. ನಾವೆಲ್ಲ ನಮ್ಮ ಆಯುಧಗಳನ್ನೆಲ್ಲಾ ತಗೊಂಡು ಹಳ್ಳಿ ಬಾಗಿಲಿಗೆ ಬಂದ್ ನಿಂತ್ಕೊಂಡ್ವಿ, ನಾನು ಉಟ್ಕಂಡಿದ್ ಬಟ್ಟೆ ಕಿತ್ತೆಸ್ದು ಜಮೀನು ನಿಮ್ಮಪ್ಪಂದ,ಅದ್ಯಾರ‍್ಯಾರು ಬತ್ತಿರೂ ಬನ್ರೊ, ಬರೋನು ನನ್ನ ದಾಟ್ಕೊಂಡೆ ಬರ್ಬೆಕು, ನನ್ನ ಮುಟ್ದೋನು ನನ್ನ ಮದ್ವೆ ಮಾಡ್ಕೊಬೇಕು ಅಂದು ಕೈಲಿದ್ದ ಕೊಡ್ಲಿ ತಿರ‍್ಗಿಸ್ತಾ ತಂಬಾಕು ಕಡ್ಡಿ ಜಗ್ದು(ಅಲ್ಲಿ ಹಲ್ಲುಜ್ಜೊಕೆ ತಂಬಾಕಿನ ಕಡ್ಡಿ ಉಪಯೋಗಿಸ್ತಾರೆ) ಉಗ್ದೆ. ನನ್ನ ಅವತಾರ, ನೋಡಿ ಕೈ ಮುಗ್ದು ಓಡಿ ಹೋದ್ರು.

ಗೋಮತಿ ಜೋಡಿಯಾ : 'ನಮ್ಮ ಕೈಗಳೇ ನಮ್ಗೆ ಬಂದೂಕಗಳು' ಎನ್ನುವ ಗೋಮತಿ ಕೊಲಕಾನಿ ಹಳ್ಳಿಯವರು. 40 ಮಹಿಳೆಯರು ಸೇರಿ ಎಲ್ ಅಂಡ್ ಟಿ ವಿರುದ್ಧ ನಡೆಸಿದ ಹೋರಾಟವನ್ನು ವಿವರಿಸಿದರು. ನಾವೆಲ್ಲ ಸೇರಿ ಎಲ್ ಆಂಡ್ ಟಿ ಕ್ಯಾಂಪ್ ಹತ್ರ ಹೋದ್ವಿ. ಲಕ್ಷ್ಮಣನಾಯಕ್‌ನ (ಬ್ರಿಟಿಷರ ವಿರುದ್ಧ ಸೆಣಸಾಡಿದ ಆದಿವಾಸಿ ನಾಯಕ ಲಕ್ಷ್ಮಣನಾಯಕ ಕೊರಾಪುಟ್ ಜಿಲ್ಲೆಯವನು. ಅವನನ್ನು 1942ರಲ್ಲಿ ಬ್ರಿಟಿಷರು ಗಲ್ಲಿಗೇರಿಸಿದ್ದರು) ಫೋಟೊ, ಸುಭಾಷ್‌ಚಂದ್ರ ಬೋಸರ ಫೋಟೊವನ್ನಿಟ್ಟು ಕೊಂಡು 8 ದಿನಗಳ ಕಾಲ ಬ್ಲಾಕೇಡ್ ಮಾಡಿದೆವು. 9ನೇ ದಿನ ಕಲೆಕ್ಟರ್, ಪೋಲಿಸರು ಎಲ್ಲಾ ಬಂದ್ರು. ನಾವು ಪಟ್ಟು ಬಿಡ್ದೆ ಕೊತ್ವಿ ನಿಮ್ಮ ಮೇಶಿನ್ ಜೊತೆಲಿ, ಕ್ಯಾಂಪ್ ಎತ್ತಿ ಕೊಂಡು ಹೋಗಿ ಎಂದರು ಕೇಳಲಿಲ್ಲ. ಸೀಮೆ ಎಣ್ಣೆ ಸುರಿದು ರೆಕಾರ್ಡ್ಸ್ ಸಮೇತ ಕ್ಯಾಂಪ ಅನ್ನು ಸುಟ್ಟು ಹಾಕಿದೆವು ಹಿರಾಕುಡ್, ಇಂದ್ರಾವತಿ ಜನರಿಗೆ ಏನೂ ತಿಳಿಯದಿದ್ದರಿಂದ ಎತ್ತಂಗಡಿ ಮಾಡಿದಾಗ ಸುಮ್ಮನೆ ಹೋಗಿಬಿಟ್ಟರು, ಈಗವರ ಸ್ಥಿತಿ ಎನಾಗಿದೆ ಎಂಬುದು ನಮಗೆ ತಿಳಿದಿದೆ ನಮ್ಮ ಸ್ಥಿತಿ ಹಾಗಾಗಲು ಬಿಡುವುದಿಲ್ಲ, ನಾವೀಗ ಎಚ್ಚೆತ್ತು ಕೊಂಡಿದ್ದೇವೆ.

ಸುಮನಿ : ಆದಿವಾಸಿಗಳ ಸ್ವಾಯತ್ತತೆಯಲ್ಲಿ ನಂಬಿಕೆ ಇರಿಸಿರುವ ಸುಮನಿ ಅಂದಿನ ಸಭೆಯಲ್ಲಿ ಮಾತನಾಡುತ್ತ Nalco ಕಂಪನಿಯವರು ನಮಗೆ ಪ್ರಶಸ್ತಿ ನೀಡಲು ಬಂದಿದ್ದನ್ನು ಹೇಳಿದರು. ಕಂಪೆನಿಯವರು ನಮಗೆ ರೂ. 15000 ಪ್ರಶಸ್ತಿ ನೀಡಲು ಕರೆದರು. ಮೈಕಂಚ್‌ನಲ್ಲಿ ಪೋಲಿಸ್ ಗೋಲಿಬಾರ್‌ನಲ್ಲಿ ಮೂರು ಜನ ಆದಿವಾಸಿಗಳು ಸತ್ತು ಹೋದದ್ದು ತಿಳಿದ ಮೇಲೆ ಸಮಾರಂಭಕ್ಕೆ ಹೋಗಿ ಮೈಕ್ ತೆಗೆದುಕೊಂಡು 'ನೀವೇ ಗುಂಡು ಹೊಡೆದು ನಮ್ಮನ್ನು ಸಾಯಿಸ್ತೀರಿ, ನೀವೇ ಪ್ರಶಸ್ತಿಯನ್ನು ಕೊಡಲು ಬರುತ್ತೀರಿ ನಿಮ್ಮ ಪ್ರಶಸ್ತಿ ನೀವೇ ಇಟ್ಕೊಳಿ' ಎಂದು ವಾಪಸ್ಸು ಬಂದೆ ಎಂದು ಹೇಳಿದರು.

ಪೋಲಿಸರ ಗುಂಡಿಗೆ ಬಲಿಯಾದ ಅಭಿಲಾಷ್‌ನ ತಮ್ಮ ಮತ್ತು ಹೆಂಡತಿಯನ್ನು ಮಾತನಾಡಿಸಿದೆವು. ಅವರು ಹೆಚ್ಚು ಮಾತನಾಡ ಬಯಸಲಿಲ್ಲ. ಅಭಿಲಾಷ್ ತನ್ನ ತಮ್ಮ ಸುಭಾಷ್‌ಗೆ ಗುಂಡು ಬಿತ್ತೆಂದು ಕೇಳಿ ಓಡಿಹೋದಾಗ ಬಿದ್ದ ಗುಂಡಿಗೆ ತಾನೆ ಬಲಿಯಾದ ಆತನ ಹೆಂಡತಿಗೆ ಮೂರು ಪುಟ್ಟ ಮಕ್ಕಳಿವೆ. ಸಿಕ್ಕಿರುವ ಪರಿಹಾರ ಕೇವಲ 1 ಲಕ್ಷ, ಪೋಲಿಸರ ಗುಂಡು ಸುಭಾಷ್‌ನ ಕಾಲಿಗೆ ತಗುಲಿ ಆಳವಾದ ಗಾಯವಾಗಿತ್ತು.

ಬೆಟ್ಟದ ಇಳಿಜಾರಿನಲ್ಲಿ ನಡೆದ ಸಭೆಯಲ್ಲಿ ಆದಿವಾಸಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು ಎಲ್ಲರು ಹುಲ್ಲು ಹಾಸಿಕೊಂಡು ಕೂತಿದ್ದರು. ಅತಿಥಿಗಳಿಗೆಂದು ಒಂದು ಜಮಖಾನ ಹಾಸಿದ್ದರು. ವೇದಿಕೆ ಇಲ್ಲದಿದ್ದುದು ಚೆನ್ನಾಗಿತ್ತು. ಜಾತ್ರೆಗೆ ಜನ ಸೇರಿ ಕಷ್ಟ ಸುಖ ಮಾತಾಡ್ತಂಗೆ ಇತ್ತು. ಬೇರೆ ಬೇರೆ ಹೋರಾಟಗಳಲ್ಲಿ ಭಾಗಿಯಾಗಿರುವವರು

ಬಂದು ತಮ್ಮ ಬೆಂಬಲ ಸೂಚಿಸಿ ಮಾತನಾಡಿದರು. ನಡು ನಡುವೇ ಹಾಡುಗಳು. ಮಾತು, ಹಾಡು ಎಲ್ಲದರಲ್ಲಿಯೂ ಇದ್ದದ್ದು ಒಂದೆ ಇಚ್ಛೆ, ಒಂದೆ ಉದ್ದೇಶ ಅವರ ಸ್ವಾಯತ್ತತೆ, ಅವರ ಮಣ್ಣಿನಲ್ಲಿ ಅವರಿಗೆ ಬೇಕಾದಂತೆ ಬದುಕುವ ಹಕ್ಕು, 40-50 ಮೈಲಿಗಳಿಂದಲೂ ಜನ ನಡೆದೇ ಬಂದಿದ್ದರು. ರಾತ್ರಿಯಿಡಿ ಥರಗುಟ್ಟುವ ಚಳಿಯಲ್ಲಿ ಹುಲ್ಲು ಹಾಸಿಕೊಂಡು ಕೂತು 4-5 ಸಾಕ್ಷ್ಯಚಿತ್ರಗಳನ್ನು ನೋಡಿ ಬೆಳಗಿನ ಜಾವ 3.50-4 ಗಂಟೆಯ ಹೊತ್ತಿಗೆ ಎದ್ದು ಹೋದರು. ನಾವು ರಾಯಗಢಕ್ಕೆ ಹಿಂತಿರುಗಿ ಬಂದೆವು. ಅಲ್ಲಿ ಪ್ರಗತಿ ಪರ ಚಿಂತಕರಾದ ರತ್‌ರವರನ್ನು ಮಾತನಾಡಿಸಿದೆವು. ಅವರು ಒಟ್ಟಾರೆ ಸಂದರ್ಭದ ಕುರಿತು ವಿವರವಾಗಿ ಮಾತನಾಡಿದರು.

ಒರಿಸ್ಸಾ ರಾಜ್ಯವು ಬಾಕ್ಸೈಟ್ ಅದಿರು, ಹಸಿರು ಬಯಲು, ಝರಿಗಳಿಂದ ಕೂಡಿ ಸಮೃದ್ಧಿಯಾಗಿದೆ. ಇಲ್ಲಿ ಅಭಿವೃದ್ಧಿ ಕೆಲಸ ಪ್ರಾರಂಭವಾದದ್ದು IFAD ಸಂಸ್ಥೆಯ ಮೂಲಕ. ಸಂಸ್ಥೆ ರಸ್ತೆ ನಿರ್ಮಾಣ, ಅಣೆಕಟ್ಟು ನಿರ್ಮಾಣದ -ಂತಹ ಕೆಲಸಗಳನ್ನು ಮಾಡಿತು. ಇತರ ಕಂಪೆನಿಗಳು ಬಂದು ನೆಲೆಯೂರಲು IFAD ಒಂದು base ಅನ್ನು ಸೃಷ್ಟಿಸಿತು. ಇವೆಲ್ಲ ಏನೆಂದು ಆದಿವಾಸಿಗಳಿಗೆ ತಿಳಿದಿರಲಿಲ್ಲ. ಅಗ್ರಗಾಮಿ ಎಂಬ ಸರ್ಕಾರೇತರ ಸಂಸ್ಥೆಯು ground work ಮಾಡಿತು. ಆದಿವಾಸಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಅಗ್ರಗಾಮಿ ಮಾಡಿತು. ಮುಂದೆ ಬಂದ ಕಂಪೆನಿಗಳು ತಿಕ್ರಿ, ರಾಯಗಡದಂತಹ ಪ್ರದೇಶಗಳಲ್ಲಿ ವಕೀಲರು, ರಾಜಕಾರಣಿಗಳು, ವಾಣಿಜ್ಯೋದ್ಯಮಿಗಳಂತಹ ಮುಖ್ಯ ಜನರನ್ನು ಬುಟ್ಟಿಗೆ ಹಾಕಿಕೊಂಡವು. ಕೈಗಾರಿಕೆ, ಗಣಿಗಾರಿಕೆಯಿಂದ ಅಭಿವೃದ್ಧಿ ಸಾಧಿಸುತ್ತೇವೆ ಎಂಬುದು ಭ್ರಮೆ. ಅಂತಹ ಅಭಿವೃದ್ಧಿಯಲ್ಲಿ ಹತ್ತು ಜನರಿಗೆ ತೊಂದರೆಯಾದರೆ ಒಬ್ಬರಿಗಷ್ಟೇ ಲಾಭವಾಗುವುದು. ಅಭಿವೃದ್ಧಿಯ ಹಿಂದಿನ ಮೋಸದ ಅರಿವಾಗುತ್ತಿದ್ದಂತೆ ಕುಚೆಪದಾರ್ ನಂತಹ ಸ್ಥಳಗಳಲ್ಲಿ ಪ್ರತಿರೋಧ ಪ್ರಾರಂಭವಾಯಿತು. ಸ್ವಾಯತ್ತತೆ, ಸಮಾನತೆಯ ನಂಬಿಕೆಯುಳ್ಳ ಮಧ್ಯಮ ವರ್ಗದ ಯುವಕರು ಚಳುವಳಿ ಬೆಂಬಲಿಸುತ್ತಿರುವುದು ಒಳ್ಳೆಯ ಅಂಶ.

ಒರಿಸ್ಸಾ ರಾಜ್ಯಕ್ಕೆ ಪ್ರತಿಭಟನೆಯ ಇತಿಹಾಸವಿದೆ. ಬಲ್ಯಾಪಲ್‌ನಲ್ಲಿ ಕ್ಷಿಪಣಿಗಳ ಗೊಡೌನ್ ಮಾಡಬೇಕೆಂದಿದ್ದರು. ಜನರು ಗೇಟುಹಾಕಿ, ಶಂಖ ಊದಿ ಸಹಸ್ರಾರು ಸಂಖ್ಯೆಯಲ್ಲಿ ಪ್ರತಿಭಟಿಸಿದ ಕಾರಣ ಕ್ಷಿಪಣಿಗಳ ಗೊಡೌನ್ ಅನ್ನು ನಿಲ್ಲಿಸಲಾಯಿತು. ಸಂಬಲ್‌ಪುರದ ಗಂಧಮಾರ್ದನದಿಂದ ಬಾಲ್ಕೊ ಕಂಪೆನಿಯನ್ನು ಓಡಿಸಲಾಯಿತು. ಆ ಹೋರಾಟದಲ್ಲಿ ಸನಾತನ್ ಹಾಗು ಲಿಂಗರಾಜುರವರು ಪ್ರಮುಖ ಪಾತ್ರ ವಹಿಸಿದರು. ಗೋಪಾಲಪುರದಲ್ಲಿ ಟಾಟಾರವರ ಉಕ್ಕಿನ ಕಾರ್ಖಾನೆಯನ್ನು ನಿಲ್ಲಿಸಲಾಯಿತು. ಚಿಲ್ಕಾ ಸರೋವರ ಉಳಿಸಿ ಹೋರಾಟವೂ ತೀವ್ರವಾಗಿತ್ತು. ಈ ಹೋರಾಟಗಳು ಈಗಿನ ಚಳುವಳಿಯನ್ನು ಗಟ್ಟಿಗೊಳಿಸಿವೆ.

ಕಂಪನಿಯವರು ದಲಿತರು ಮತ್ತು ಆದಿವಾಸಿಗಳ ನಡುವೆ ಬಿರುಕು ತಂದು ಚಳುವಳಿಯನ್ನು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಒಂದು ಹಂತದವರೆಗೂ ಅವರ ಒಡೆದಾಳುವ ನೀತಿ ಯಶಸ್ವಿಯಾಗಿದೆಯಷ್ಟೆ. ಎಲ್ಲಾ ರಾಜಕೀಯ ಪಕ್ಷಗಳಿಗೂ ಹಣಬೇಕು. ಹೆಂಡ ಮಾರುವವರು, ಮಾಫಿಯಾದವರು, ರಾಜಕೀಯ ಪಕ್ಷದವರನ್ನು ಕಂಪೆನಿಯವರು ಸುಲಭವಾಗಿ ಕೊಂಡುಕೊಳ್ಳುತ್ತಾರೆ. ವಿವಿಧ ಪಕ್ಷಗಳಲ್ಲಿನ ಆದಿವಾಸಿ ನಾಯಕರುಗಳು ಚಳವಳಿಯನ್ನು ಬೆಂಬಲಿಸಿಲ್ಲ. 'NGO ಗಳಾಗಲಿ, ಮಧ್ಯಮ ವರ್ಗದವರಾಗಲಿ ಚಳುವಳಿಯನ್ನು ಬೆಂಬಲಿಸಬೇಕೇ ಹೊರತು ಮುಂಚೂಣಿಯಲ್ಲಿರಬಾರದು, ನಾಯಕತ್ವ ವಹಿಸಬಾರದು. ನಾಯಕತ್ವ ಆದಿವಾಸಿಗಳ ಕೈಲೇ ಇರಬೇಕು' ಎಂಬುದನ್ನು ರತರವರು ಬಲವಾಗಿ ಪ್ರತಿಪಾದಿಸುತ್ತಾರೆ.

ಅದೇ ದಿವಸ UAIL (ಉತ್ಕಲ್ ಅಲ್ಯುಮಿನಿಯಂ ಲಿ.) ಕಛೇರಿಗೆ ಹೋಗಿ ಅಲ್ಲಿನ ಅಧಿಕಾರಿ ಶ್ರೀ.ಎಸ್. ಸುಬ್ರಮಣ್ಯರವರನ್ನು ಭೇಟಿಮಾಡಿದೆವು. ಶೇ 100 ರಷ್ಟು ರಫ್ತು ಮಾಡುವ ಉದ್ದೇಶವಿರುವ UAIL ಕಂಪೆನಿಯಲ್ಲಿ ಮೂರು ಕಂಪೆನಿಗಳಿವೆ. ನಾರ್ವೆಯ ಹೈಡ್ರೊ ಅಲ್ಯುಮಿನಿಯಂ ಕಂಪೆನಿಯದು 45% ಶೇರಿದ್ದರೆ, ಅಲ್ಕನ್ ಅಲ್ಯುಮಿನಿಯಂ ಕೆನಡಾದವರದು 35% ಶೇರು, ಇಂಡಿಯಾ ಅಲ್ಯುಮಿನಿಯಂ ರವರದು 20% ಶೇರಿದೆ. ಅಲ್ಲಿನ ಅಧಿಕಾರಿ ಎಸ್.ಸುಬ್ರಮಣ್ಯರವರು ಕಂಪೆನಿಯ ಯೋಜನೆ ಕುರಿತು ದೀರ್ಘವಾಗಿ ಮಾತನಾಡಿದರು. ತಮ್ಮ ಕಂಪೆನಿಯು ಅತೀವ ಕಾಳಜಿವಹಿಸಿ ಪರಿಸರಕ್ಕೆ ಹಾನಿಯಾಗದಂತೆ, ಆದಿವಾಸಿಗಳ ಜೀವನಕ್ಕೆ ಧಕ್ಕೆಯಾಗದಂತೆ ಅಂತರರಾಷ್ಟ್ರೀಯ

ಪ್ರಮಾಣಗಳಿಗೆ ತಕ್ಕುದಾಗಿ ಯೋಜನೆಯನ್ನು ತಯಾರಿಸಿದೆ ಎಂದು ಹೇಳಿದರು. ಯೋಜನೆಯ ನೀಲಿ ನಕ್ಷೆ ಫೋಟೊಗಳು, ಚಿತ್ರಗಳೊಂದಿಗೆ ವಿವರವುಳ್ಳ ಪುಸ್ತಕಗಳನ್ನು ನೀಡಿದರು. ಅತ್ಯುತ್ತಮ ಪೇಪರ್ ಬಳಸಿದ, ದುಬಾರಿ ವೆಚ್ಚದ ಪುಸ್ತಕಗಳು. (ಒರಿಸ್ಸಾದ ಕಾಡುನಾಶದಲಿ J.K Paper Mills ಮುಖ್ಯ ಪಾತ್ರವಹಿಸಿದೆ) ಆದಿವಾಸಿಗಳೂ ಸಹ ಕೆಲಸ ಯಾವಾಗ ಪ್ರಾರಂಭಿಸುತ್ತೀರಾ, ಬೇಗನೆ ಪ್ರಾರಂಭಿಸಿ ನಮಗೆ ಕೆಲಸ ಬೇಕು ಎಂದು ಗೋಗರೆಯುತ್ತಾರೆ. ನಾವು ಅವರಿಗೆ ಎಲ್ಲ ರೀತಿಯ ಅನುಕೂಲ ಮಾಡಲು ಸಿದ್ಧರಿದ್ದೇವೆ. ಅದಕ್ಕಾಗಿ ಅದ್ಭುತವಾದ ಯೋಜನೆಗಳಿವೆ ಎಂದು ಆದಿವಾಸಿಗಳಿಗಾಗಿ ಕಟ್ಟಲಿರುವ ಮನೆಗಳ ಮಾದರಿಯುಳ್ಳ ಚಿತ್ರವನ್ನು ಪುಸ್ತಕದಲ್ಲಿ ತೋರಿಸಿದರು. ಸಿಂಗಲ್ ರೂಮ್, ಹಾಲ್, ವೆರಾಂಡ್, ಕಾಂಪೌಂಡ್, ಕೌಶೆಡ್ ಉಳ್ಳ ಮನೆ. ಕೆಲವೇ ಕೆಲವರು ಮಾತ್ರ ಕಂಪೆನಿ ಬೇಡವೆನ್ನುತ್ತಿರುವವರು ನಮಗೆ ಆದಿವಾಸಿಗಳ ಬಗ್ಗೆ ಅತೀವ ಕಾಳಜಿ ಇದೆ ಅವರಿಗೂ ಇದರಿಂದ ಲಾಭವಿದೆ. ಅವರೂ ಅಭಿವೃದ್ಧಿ ಹೊಂದುತ್ತಾರೆ ಎಂದು ಹೇಳಿದರು. ಅಭಿವೃದ್ಧಿ ಹೆಸರಿನಲ್ಲಿ ಆದಿವಾಸಿಗಳ ಬದುಕಿನ ಮೇಲೆ ನಡೆಸಿರುವ ಅನ್ಯಾಯದ ಇತಿಹಾಸ ಕಣ್ಣೆದುರುರಿರುವಾಗ ಅನುಮಾನ ಸಹಜವಲ್ಲವೇ ಅಲ್ಲದೇ ಎಲ್ಲಾ ಬಿಟ್ಟು ಇದೇ ಆದಿವಾಸಿಗಳನ್ನು ಉದ್ಧಾರ ಮಾಡುವುದರ ಹಿಂದೆ ಬಾಕ್ಸೈಟ್, ರಫ್ತು ಲಾಭ ಇತ್ಯಾದಿ ಇಲ್ಲವೆ ಎಂದು ಕೇಳಿದ್ದಕ್ಕೆ ಅವರು 'ಹಿಂದಿನ ಕಂಪೆನಿಗಳು ಮಾಡಿದಂತೆ ನಮ್ಮ ಕಂಪೆನಿ ಮಾಡುವುದಿಲ್ಲ. ಯಾವುದೇ ಬಿಸಿನೆಸ್ ಆಗಲಿ ಲಾಭವಿಲ್ಲದೆ ಮಾಡುವುದಿಲ್ಲ' ಎಂದು ಹೇಳಿದರು.

UAIL ನಿಂದ ಆದಿತ್ಯ ಅಲ್ಯೂಮಿನಿಯಂ, ಎಲ್ ಅಂಡ್ ಟಿ ಕಛೇರಿಗಳಿಗೆ ಹೋದೆವು. ಆದಿತ್ಯ ಅಲ್ಯುಮಿನಿಯಂ ಕಛೇರಿಯಲ್ಲಿ ಬೇಟಿಯಾಗಲು ಯಾರೂಸಿಗಲಿಲ್ಲ. ಎಲ್ ಅಂಡ್ ಟಿಯ ಪ್ರಾಜೆಕ್ಟ್ ಆಫೀಸರ್ ಶ್ರೀ.ಟಿ.ಕೆ ಕೆಲ್ಲಿಯವರು ಸದ್ಯಕ್ಕೆ ಕೆಲಸ ನಿಲ್ಲಿಸಿದ್ದೇವೆ. ಮುಂದಿನದೇನು ತೀರ್ಮಾನವಾಗಿಲ್ಲವೆಂದರು.

ಬಾಕ್ಸೈಟ್ ಗಣಿಗಳಿಂದ ಕೋಟ್ಯಾಂತರ ಲಾಭ ದೋಚಿ, ಪ್ರತಿಯಾಗಿ ಆದಿವಾಸಿಗಳಿಗೆ ಕೆಲಸ ನೀಡಿ ಅವರನ್ನು ಉದ್ಧಾರ ಮಾಡುತ್ತೇವೆ ಎಂಬುದು ಕಂಪೆನಿಗಳ ಅಂಬೋಣ. ಆದಿವಾಸಿಗಳಿಗೆ ನೀಡುವ ಕೆಲಸವೆಂದರೆ ಗಣಿಯಲ್ಲಿ ಫ್ಯಾಕ್ಟರಿಯಲ್ಲಿ ಕೂಲಿಗಳ ಕೆಲಸ. ಕಾರು ಬಂಗಲೆಗಳ ಆಫೀಸರ್ ಗಿರಿಯಲ್ಲ. ಜಲಾಶಯಗಳೇ ದೇವಾಲಯಗಳೆಂದ ದೇಶದ ಪ್ರಥಮ ಪ್ರಧಾನಿಯ ಕಾಲದಿಂದಲೂ ಒರಿಸ್ಸಾದ ಆದಿವಾಸಿಗಳು ಅಭಿವೃದ್ಧಿಗೆ ಬಲಿಯಾಗುತ್ತಲೇ ಇದ್ದಾರೆ. ಹಿರಾಕುಡ್ ಅಣೆಕಟ್ಟಿನಿಂದಾಗಿ 10 ಕ್ಕಿಂತಲೂ ಹೆಚ್ಚು ಭಾರಿ ಸ್ಥಳಾಂತರಗೊಂಡು ಇನ್ನೂ ಪರಿಹಾರವೂ ಸಿಕ್ಕದವರು ಇದ್ದಾರೆ. ಆದಿವಾಸಿಗಳ ಬದುಕಿನ ಬಗ್ಗೆ ಕಾಳಜಿ ಇದೆ ಎಂದು ಬೊಗಳೇ ಬಿಡುವ ಕಂಪೆನಿಗಳು ಇಷ್ಟು ವರ್ಷ ಏನು ಮಾಡಿದ್ದಾರೆಂಬುದರ ಅರಿವು ಜನರಿಗೆ ಚೆನ್ನಾಗಿಯೇ ಇದೆ. ಲಾಭ ಯಾರಿಗೆ ದಕ್ಕುತ್ತದೆ, ಉಪಯೋಗ ಯಾರಿಗಾಗುತ್ತಿದೆ ಎಂಬುದು ಅಂಗೈ ಹುಣ್ಣಿನಷ್ಟೇ ಸ್ಪಷ್ಟವಾಗಿದೆ. ಅವರ ನೆಲದಲ್ಲಿ ಅವರನ್ನೆ ಕೂಲಿಗಳನ್ನಾಗಿಸುವ 'ಅಭಿವೃದ್ಧಿ'ಯನ್ನು ಸಮಾನತೆ, ಸ್ವಾಯತ್ತತೆಯನ್ನು ನಂಬುವ ಎಲ್ಲರೂ ವಿರೋಧೀಸಬೇಕು. ಆದಿವಾಸಿಗಳು ಕೇಳುತ್ತಿರುವುದು ಅವರದೇ ನೆಲದಲ್ಲಿ ಸ್ವಾಭಿಮಾನದಿಂದ, ಘನತೆಯಿಂದ ಬದುಕುವ ಹಕ್ಕನ್ನು ಮಾತ್ರ, ಡಾಲರ್ ಲಾಭವನ್ನೆಲ್ಲ, ಪಂಚತಾರ ಜೀವನವನ್ನಲ್ಲ. ಗುಡ್ಡದ ಮೇಲಿನ ತುಂಡು ನೆಲವ ಚೆನ್ನು ಮುರಿದುಕೊಂಡು ಉಳುಮೆ ಮಾಡಿ ರಾಗಿ, ಜೋಳ ಬೆಳೆದು, ಗಂಜಿ ಕುಡಿದು ಹಸಿವೆ ಹಿಂಗಿಸಿಕೊಂಡು, ಪುಟ್ಟ ಮನೆಯೊಳಗೆ ಬದುಕುವ, ಆಗ ಆದಿವಾಸಿಗಳ ಬದುಕನ್ನು ಅಭಿವೃದ್ಧಿಯ ಹೆಸರಿನಲ್ಲಿ ನಿರ್ನಾಮ ಮಾಡುವುದು ಎಷ್ಟು ಸರಿ ಎಂದು ಅಭಿವೃದ್ಧಿಯ ಫಲ ಉಣ್ಣುವ ಅನಗತ್ಯವಾಗಿ ತಿಂದುಂಡು ಕಬಳಿಸುವ ಎಲ್ಲರೂ ಯೋಚಿಸಬೇಕು. ಅಲ್ಯುಮಿನಿಯಂನಿಂದ ತಯಾರಾದ ವಿಮಾನದಲ್ಲಿ ಪಂಚತಾರ ಜನ ಹಾರಾಡಿದರೆ, ಗಣಿಗಳಲ್ಲಿ ಕೂಲಿ ಮಾಡುವ ಆದಿವಾಸಿಗಳಿಗೆ ಸಿಗುವುದು ಅಲ್ಯೂಮಿನಿಯಂ ತಪ್ಲೆ ಚೊಂಬು ಮಾತ್ರ. ನಮ್ಮ ನೆಲದಲ್ಲಿ ನಾವೇ ಕೂಲಿಗಳಾಗಲೂ ಸಿದ್ಧರಿಲ್ಲವೆಂದು ಆದಿವಾಸಿಗಳು ದನಿ ಎತ್ತಿ ಎದ್ದು ನಿಂತಿದ್ದಾರೆ. ಅವರ ದನಿಗೆ ದನಿ ಸೇರಿಸುವುದು ಕರ್ತವ್ಯ ಎಂದು ಮಾನಸ ಭಾವಿಸುತ್ತದೆ.

- ಸರಸ್ವತಿ. ದು.

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ.ಮಂಡಳಿ

ಮುಗಿಲು ಮಲ್ಲಿಗೆಯ ಎಟುಕಿಸಿ

ಮುಗಿಲು ಮಲ್ಲಿಗೆಯ ಎಟುಕಿಸಿ
(ದೃಶ್ಯ ಚರಿತ್ರೆ ಕಮ್ಮಟದಲ್ಲಿ ಕಲಾವಿದೆಯರಿಂದ ಅಭಿವ್ಯಕ್ತಿಸಲ್ಪಟ್ಟವುಗಳ ಸಂಪಾದಿತ ಬರಹ)

ಮೂಲ ಲೇಖನ : ಡಾ.ಸಿ.ಎಸ್. ಲಕ್ಷ್ಮಿ

ಸಂಪಾದಕರು
ತುಳಸಿ ವೇಣುಗೋಪಾಲ್

ಕನಕ ಹಾ. ಮಾ.
ಮಿತ್ರಾ ವೆಂಕಟ್ರಾಜ್

ಪ್ರಕಾಶಕರು : ಸ್ಪ್ಯಾರೊ, ವಿತರಕರು : ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು,

ಮೊದಲ ಮುದ್ರಣ 2002, ಬೆಲೆ : ರೂ. 150

ಮುಂಬೈ ಮೂಲದ "ಸ್ಪಾರೊ" (Sound & Picture Archive for Research on Women) ಸಂಸ್ಥೆ, ಕಲಾವಿದೆಯರ ಬದುಕಿನ ದನಿಗಳನ್ನು ದಾಖಲಿಸುವಂತಹ ಸಂಶೋಧನಾ ಸಂಸ್ಥೆಯಾಗಿದೆ. ಇದಕ್ಕಾಗಿ 'ಸ್ಪ್ಯಾರೊ' ಸಂಸ್ಥೆ ದೃಶ್ಯ ಚರಿತ್ರೆ ಕಮ್ಮಟಗಳನ್ನು ಏರ್ಪಡಿಸುತ್ತದೆ. ಈ ಕಮ್ಮಟಗಳಲ್ಲಿ ವಿವಿಧ ಕಲಾವಿದರು ತಮ್ಮ ಅನುಭವಗಳ ಲೋಕವನ್ನು ತೆರೆದಿಡುತ್ತಾರೆ. ಕಲಾವಿದರ ಬದುಕಿನ ಅನುಭವಗಳು ಹಾಗೂ ಅವರ ಕೃತಿಗಳು, ಕಾರ್ಯಗಳ ದೃಶ್ಯರೂಪವನ್ನು ಜನರಿಗೆ ಪರಿಚಯಿಸುವ ಪ್ರಯತ್ನವನ್ನು ಇಂತಹ ಕಮ್ಮಟಗಳು ಮಾಡಿವೆ. ಈ ದೃಶ್ಯ ಚರಿತ್ರೆ ಕಮ್ಮಟಗಳನ್ನು ಧ್ವನಿ-ಚಿತ್ರ ಮುದ್ರಣ ಮಾಡಿಕೊಳ್ಳಲಾಗುತ್ತದೆ. ಪ್ರತಿ ಕಮ್ಮಟದ ನಂತರ ಆ ಕಲಾವಿದೆಯ ಆತ್ಮಚರಿತ್ರೆಯ ಪುಸ್ತಕವನ್ನು ಸ್ಪ್ಯಾರೋ ಸಂಸ್ಥೆ ಹೊರತರುತ್ತದೆ.

'ಮುಗಿಲುಮಲ್ಲಿಗೆಯ ಎಟುಕಿಸಿ' ಪುಸ್ತಕವೂ ಇಂತಹದೇ ಕಮ್ಮಟಗಳಿಂದ ಒಡಮೂಡಿದ ಪುಸ್ತಕ ಕಮ್ಮಟದಲ್ಲಿ ಪ್ರಸ್ತುತಗೊಂಡ ಹಾಗೂ ಕಲಾವಿದೆಯರ ಮನೆಗಳಲ್ಲಿ ಮತ್ತು ಅವರವರ ವೃತ್ತಿಸ್ಥಳಗಳಲ್ಲಿ ಧ್ವನಿಚಿತ್ರ ಮುದ್ರಿತಗೊಂಡವುಗಳ ಮೇಲೆ ಈ ಪುಸ್ತಕ ರೂಪುಗೊಂಡಿದೆ.

ಈ ಪುಸ್ತಕದಲ್ಲಿ ಒಟ್ಟು ಆರು ಮಂದಿ ಕಲಾವಿದೆಯರು ತಮ್ಮ ಅನುಭವಲೋಕಗಳನ್ನು ತೆರೆದಿಟ್ಟಿದ್ದಾರೆ. ಇವರುಗಳಲ್ಲಿ ಗತಕಾಲದ ಸಿನಿಮಾ ನಟಿ, ಶಿಲ್ಪಿ, ನೃತ್ಯ ಕಲಾವಿದೆ, ಮರಾಠಿ ರಂಗಭೂಮಿ ನಟಿ, ಪಾರಂಪರಿಕ ಚಿತ್ರ ಕಲಾವಿದೆ ಹಾಗೂ ಕಥಕ್ಕಳಿ ನೃತ್ಯ-ಸಮಕಾಲೀನ ರಂಗಭೂಮಿಯನ್ನು ಬೆಸೆದು ನವ್ಯ ಮಾರ್ಗದಲ್ಲಿ ಸಾಧನೆ ಮಾಡಿದ ಕಲಾವಿದೆ ಸೇರಿದ್ದಾರೆ. ಸ್ತ್ರೀಯಾಗಿ ಹಾಗೂ ಕಲಾವಿದೆಯಾಗಿ ತಮ್ಮನ್ನೇ ಕಂಡುಕೊಳ್ಳಲು ಸವೆಸಿದ ಹಾದಿಯ ವರ್ಣಮಯ ಬದುಕಿನ ಚಿತ್ರಣವನ್ನು ಈ ಪುಸ್ತಕ ಕಟ್ಟಿಕೊಡುತ್ತದೆ.

ಮೂವತ್ತರ ದಶಕದಲ್ಲಿಯೇ ಚಲನಚಿತ್ರರಂಗದಲ್ಲಿ ಮಿಂಚಿದ ತಾರೆ ಪ್ರಮೀಳಾ ಎಂದು ಕರೆಯಲಾಗುತ್ತಿದ್ದ ಎಸ್ತರ್ ವಿಕ್ಟೋರಿಯಾ ಅಬ್ರಹಾಂ ಅವರ ಬದುಕಿನ ಕಥೆಯನ್ನು ಪುಸ್ತಕದ ಮೊದಲನೇ ಅಧ್ಯಾಯ ನಿರೂಪಿಸುತ್ತದೆ. ಪ್ರಮೀಳಾ ಅವರು 1947ರಲ್ಲಿಯೇ ಮೊತ್ತ ಮೊದಲ ಮಿಸ್ ಇಂಡಿಯಾ ಎನಿಸಿಕೊಂಡಿದ್ದರು ಎಂಬ ಮಾಹಿತಿ ಕುತೂಹಲಕರವಾಗಿದೆ. ಮದರ್ ಇಂಡಿಯಾ (1935)ದಲ್ಲಿ ಅವರು ವಹಿಸಿದ ಪಾತ್ರ ಅನನ್ಯವಾದುದು. ಜತೆಗೆ ಡಾರ್ಲಿಂಗ್ ಡಾಟರ್ಸ್, ಮೇರೆ ಜಾಲ್, ಮಹಾ ಮಾಯಾ, ಬಸಂತ್, ಬೇಕಸೂರ್ ಹಾಗೂ ಜಂಗಲ್ ಕಿಂಗ್ ಮುಂತಾದ ಚಿತ್ರಗಳಲ್ಲೂ ಪ್ರಮೀಳಾ ನಟಿಸಿದ್ದಾರೆ. ಅಷ್ಟೇ ಅಲ್ಲ ಅಂದಿನ ಪ್ರಖ್ಯಾತ ಛಾಯಾಗ್ರಾಹಕ ಎ.ಜೆ. ಪಟೇಲ್ ಅವರ ಮೆಚ್ಚಿನ ಮಾಡೆಲ್ ಕೂಡಾ ಆಗಿದ್ದರು. ಪ್ರಮೀಳಾರ ಭಾವಚಿತ್ರಗಳು ಪಟೇಲರಿಗೆ ಖ್ಯಾತಿ ತಂದಿತು. ಅವುಗಳಲ್ಲಿ ಹೆಚ್ಚಿನವು ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಪ್ರಕಟವಾಗಿವೆ. ಪ್ರಮೀಳಾರ ಸೀರೆಯುಡುವ ಶೈಲಿ ಹಾಗೂ ಅವರು ಉಡುತ್ತಿದ್ದ ಜರಿಯಂಚಿನ ಸೀರೆಗಳು ಹೊಸ ಫ್ಯಾಷನನ್ನೇ ಆ ಕಾಲದಲ್ಲಿ ಸೃಷ್ಟಿಸಿತಂತೆ.

ಮೂಲತಃ ಕೊಲ್ಕತ್ತಾದವರಾದ ಪ್ರಮೀಳಾ ಅವರು ಹಿಂದಿ ಸಿನಿಮಾ ಚರಿತ್ರೆಯ ಅತ್ಯಂತ ಮಹತ್ವದ ಘಟ್ಟದಲ್ಲಿ ಮುಂಬಯಿಗೆ ಆಗಮಿಸಿದರು. ಆಗಷ್ಟೇ ಎಂದರೆ 1931 ರಲ್ಲಿ ಆಲಂ ಆರಾ ಎಂಬ ಪ್ರಥಮ ವಾಕ್ಚಿತ್ರವನ್ನು ಇಂಪೀರಿಯಲ್ ಕಂಪನಿ ನಿರ್ಮಿಸಿತ್ತು. 1937ರಲ್ಲಿ ಪ್ರಥಮ ಬಣ್ಣದ ಚಿತ್ರ ಕಿಸಾನ್ ಕನ್ಯಾ ಚಿತ್ರವನ್ನೂ ಇದೇ ಕಂಪನಿ ನಿರ್ಮಿಸಿತು. ಆ ಕಾಲದಲ್ಲಿ ಮುಂಬೈ ಚಿತ್ರರಂಗದಲ್ಲಿ ಸುಶಿಕ್ಷಿತ ಹೆಣ್ಣುಮಕ್ಕಳು ಹೆಚ್ಚು ಇದ್ದಿರಲಿಲ್ಲ. ದುರ್ಗಾ ಖೋಟೆ, ದೇವಿಕಾ ರಾಣಿ, ಲೀಲಾ ಚಿಟ್ನಿಸ್, ಶಾಂತಾ ಹುಬ್ಳೀಕರ್, ಸವಿತಾ ದೇವಿ, ಮಾಯಾ ಬ್ಯಾನರ್ಜಿ ಮುಂತಾದವರನ್ನು ಬಿಟ್ಟರೆ ಹೆಚ್ಚಿನವರು ಸಾಂಪ್ರದಾಯಿಕ ನೃತ್ಯ ಮನೆತನದವರಾಗಿದ್ದು. ಇಂಪೀರಿಯಲ್ ಫಿಲ್ಮ್ ಕಂಪನಿಯ ಸಂಸ್ಥಾಪಕ ಅರ್ದೇಶೀರ್ ಇರಾನಿ ಅವರು ಪ್ರಮೀಳಾ ಅವರ ಬಳಿ ಪ್ರಮೀಳಾರಂತಹ ಹೆಣ್ಣುಮಕ್ಕಳ ಅಗತ್ಯ ಚಿತ್ರರಂಗಕ್ಕಿದೆ ಎಂದು

ಹೇಳುತ್ತಿದ್ದರು ಎಂಬುದನ್ನು ಪ್ರಮೀಳಾ ಅವರು ನೆನಪಿಸಿಕೊಂಡಿದ್ದಾರೆ ಮಹಾಮಾಯಾ ಚಿತ್ರದಲ್ಲಿ ಅಭಿನಯಿಸಿದ್ದ ಪ್ರಮೀಳಾ ಆ ಚಿತ್ರದ ಚಿತ್ರೀಕರಣದ ವೇಳೆ ಭೇಟಿಯಾದ ಅಂದಿನ ಆಕರ್ಷಕ ನಟ ಕುಮಾರ್ ಅವರನ್ನು ವಿವಾಹವಾದರು.

ಪ್ರಮೀಳಾ ಯಾರೊಂದಿಗೆ ಕೆಲಸ ಮಾಡಿದರೂ ತಮ್ಮ ಪರತ್ತಿನ ಮೇಲೆಯೇ ಕೆಲಸ ಮಾಡುವುದಾಗಿ ಸ್ಪಷ್ಟಪಡಿಸುತ್ತಿದ್ದರಂತೆ. ಹಾಲಿವುಡ್ ನಲ್ಲಿ ರೂಢಿಯಲ್ಲಿರುವ casting on the couch ಎಂಬಂತಹ ವ್ಯವಸ್ಥೆಯೇನೂ ಆಗ ಇರಲಿಲ್ಲ ಎಂಬುದನ್ನು ಪ್ರಮೀಳಾ ಹೇಳಿದ್ದಾರೆ. ಆದರೆ ನಾಯಕ ನಟರ ಹಾಗೂ ನಿರ್ದೇಶಕರ ಸಲುಗೆಯ ವರ್ತನೆ ಅದರ ಸ್ವೀಕರಣೆಯಾ ನಿರಾಕರಣೆ ಹಾಗೂ ವ್ಯಕ್ತಿಗಳ ನಡುವಣ ಆಕ್ರಮ ಸಂಬಂಧಗಳು ನಡೆಯುತ್ತಿದ್ದವಂತೆ ಎಂಬುದನ್ನೂ ಅವರು ಹೇಳಿದ್ದಾರೆ.

ಆದರೆ ತಾವೆಂದೂ ಗಂಡಸರ ಸೂತ್ರದ ಬೊಂಬೆಯಾಗಲಿಲ್ಲ. ಗೆಳೆತನಗಳು, ಸಂಬಂಧಗಳು ಬೆಳೆದಾಗ ತನಗೆ ಬೇಕಾಗಿ ಅದನ್ನು ಒಪ್ಪಿದುದೇ ಹೊರತು, ತನ್ನಿಂದ ಅವರು ಅದನ್ನು ಬಯಸಿದರೆಂದು ಅಲ್ಲ ಎಂಬುದನ್ನೂ ಅವರು ಹೇಳಿದ್ದಾರೆ. ತಮ್ಮೊಡನೆ ಆಟವಾಡಲು ಸಾಧ್ಯವಿಲ್ಲ ಎಂಬುದು ಆಗ ಎಲ್ಲರಿಗೂ ತಿಳಿದ ವಿಷಯವಾಗಿತ್ತು ಎಂಬುದನ್ನೂ ಅವರು ಹೇಳಿದ್ದಾರೆ. ಜಂಗಲ್ ಕಿಂಗ್ ಮತ್ತು ವಾಡಿಯಾ ಮೂವಿಟೋನ್ ಫಿಲ್ಮ್ ರ ಚಿತ್ರಗಳಿಂದಾಗಿ ಪ್ರಮೀಳಾ ಅವರು ಅನೇಕ ಸಾಹಸಗಳಲ್ಲಿ ಭಾಗಿಯಾಗಬೇಕಾಗಿ ಬಂತು. ಅದರಿಂದಾಗಿ ಅವರ ಬೆನ್ನು ಹುರಿಗೆ ಗಂಭೀರ ಪೆಟ್ಟು ತಗುಲಿತು.

ಹಾಲಿವುಡ್ ನ ಭ್ರಾಮಕ ಚಿತ್ರವೊಂದನ್ನು ಆಧರಿಸಿ 1941ರಲ್ಲಿ ಬಿಡುಗಡೆಯಾದ ಉಲ್ಟಿಗಂಗಾದಂತಹ ಚಿತ್ರದಲ್ಲಿ ಪ್ರಮೀಳಾರ ಮೇರು ವ್ಯಕ್ತಿತ್ವ ಪರಿಪೂರ್ಣತೆ ಪಡೆಯುತ್ತದೆ. ಯಂತ್ರ ನಡೆಸುವುದು, ರೈಲ್ವೆ ನಿಲ್ದಾಣದ ಕಾರ್ಯ ನಿರ್ವಹಣೆ, ವಾಹನ ಸಂಚಾರದ ನಿಯಂತ್ರಣ, ಮದುವೆ ಕರಾರುಗಳನ್ನು ವಿಧಿಸುವುದು - ಹೀಗೆ ಎಲ್ಲಾ ರಂಗಗಳಲ್ಲೂ ಪುರುಷರ ಸ್ಥಾನವನ್ನು ಆಕ್ರಮಿಸುವ ಹೆಣ್ಣಿನ ಕುರಿತಾದ ಚಿತ್ರವಾಗಿತ್ತು ಅದು ರೈಲ್ವೆ ನಿಲ್ದಾಣದ ಅಧಿಕಾರಿ ಹೆರಿಗೆ ರಜೆ ಪಡೆದು ಹೋಗುವುದು, ಟ್ರಾಫಿಕ್ ಪೊಲೀಸರು ಮುಖಾಲಂಕಾರ ಮಾಡಿಕೊಳ್ಳಲು ವಾಹನ ಸಂಚಾರವನ್ನು ನಿಲ್ಲಿಸುವುದು, ಹುಡುಗರನು ನೋಡಿ ಹುಡುಗಿಯರು ಸಿಳ್ಳು ಹಾಕುವುದು, ಗಂಡಸರು ಮಾತ್ರ ಎಂದಿರುವ ಬೋಗಿಯಲ್ಲಿ ಹೆಂಗಸರು ತಮ್ಮ ಗಂಡಂದಿರನ್ನು ಇರಿಸಿ ಸಹ ಪ್ರಯಾಣಿಕರೊಡನೆ ಅವರನ್ನು ನೋಡಿಕೊಳ್ಳುವಂತೆ ಹೇಳುವುದು - ಇತ್ಯಾದಿ ಹಾಸ್ಯಮಯ ಸನ್ನಿವೇಶಗಳು ಅದರಲ್ಲಿ ಇದ್ದವು. ಈ ಚಿತ್ರದ ಒಂದು ದೃಶ್ಯದಲ್ಲಿ ಪ್ರಮೀಳಾ ಪ್ಯಾಂಟು ಹಾಕಿ, ಕೈಯಲ್ಲಿ ಚಾಟಿ ಹಿಡಿದು ಆಕೆಯೊಂದಿಗೆ ಮದುವೆಯ ಪ್ರಸ್ತಾಪವನ್ನೆತ್ತುವ ಧೈರ್ಯ ಮಾಡಿದ ಮುದುಕನನ್ನು ಓಡಿಸುವ ದೃಶ್ಯ ಬರುತ್ತದೆ. ಈ ರೀತಿಯ ಪಾತ್ರಗಳನ್ನು ಮಾಡುವಾಗ ತಾವು ತಂಬಾ ಖುಷಿ ಪಟ್ಟುದಾಗಿ ಪ್ರಮೀಳಾ ಹೇಳಿಕೊಂಡಿದ್ದಾರೆ.

ನಿರ್ಭೀತ ಮಹಾ ಸಾಹಸಿ ಸ್ತ್ರೀ ಪಾತ್ರಗಳು ಪ್ರಮುಖ ಆಕರ್ಷಣೆಯಾಗಿರುವ ಚಿತ್ರಗಳು ಮೂವತ್ತರ ದಶಕದಲ್ಲಿ ಆರಂಭವಾಗಿ, ಹಂಟರ್‌ವಾಲಿ, ಸೈಕಲ್ ವಾಲಿ ಮತ್ತು ಲೇಡಿ ರಾಬಿನ್ ಹುಡ್ ನಂತಹ ಚಿತ್ರಗಳಲ್ಲಿನ ಇಂತಹ ಪಾತ್ರಗಳಿಗಾಗಿಯೇ ನಾಡಿಯಾ, ರೊಮಿಲಾ ಮತ್ತಿತರರನ್ನು ಜನರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಆದರೆ ಪ್ರಮೀಳಾ ಅವರ ಪ್ರಕಾರ, ಇವು ಬಹುಶಃ ಗಂಡಸಿನ ಕನಸು ಅಥವಾ ಭ್ರಮೆಗಳಾಗಿದ್ದವೇ ಹೊರತು ನಿಜವಾಗಿ ಹೆಂಗಸಿನಿಂದ ನಿರೀಕ್ಷಿಸಿದಂತಹವುಗಳಲ್ಲ. ವಾಸ್ತವವಾಗಿ ಉಲ್ಟಿಗಂಗಾ ಚಿತ್ರದಲ್ಲಿ ಇಂತಹ ಭ್ರಮೆಗಳ ಕನಸು ಕಾಣುತ್ತಿದ್ದ ಹೆಣ್ಣು ವಾಸ್ತವ ಲೋಕಕ್ಕೆ ಮರಳಿ ಕರಟಿದ ರೊಟ್ಟಿಗಳನ್ನೂ, ಕುಪಿತ ಅತ್ತೆಯನ್ನೂ ಎದುರಿಸಬೇಕಾಗುತ್ತದೆ. ಈ ಚಿತ್ರ ಹೆಂಗಸರಿಗೆ ತಪ್ಪು ಕಲ್ಪನೆ ಕೊಡಬಹುದೆಂಬ ಕಾರಣದಿಂದ ಲಕ್ನೊದಲ್ಲಿ ನಿಷೇಧಿಸಲಾಗಿತ್ತಂತೆ, ಆದರೂ ಈ ರೀತಿಯ ಚಿತ್ರಗಳ ಜನಪ್ರಿಯತೆಯು ಐವತ್ತರ ದಶಕವರೆಗೂ ಮುಂದುವರಿಯಿತು. 1954ರಲ್ಲೂ ನಾಡಿಯಾರವರು ದೈಹಿಕವಾಗಿ ಕಾದಾಡಿ ಎಲ್ಲವನ್ನು ಸರಿ ಪಡಿಸಬಲ್ಲ ನಿರ್ಭೀತ ಹೆಣ್ಣಿನ ಪಾತ್ರ ವಹಿಸುತ್ತಿದ್ದರು. ಈ ದಿಟ್ಟ ಹೋರಾಟಗಾರ್ತಿಗೆ ವಿರುದ್ಧವಾಗಿ ಮಾಟಗಾತಿಯಾದ ಹೆಣ್ಣಿನ ಚಿತ್ರಣವೂ ಇರುತ್ತಿತ್ತು. ಉದಾಹರಣೆಗೆ 1954ರಲ್ಲಿ ನಾಡಿಯಾ ಅವರು ಫೈಟಿಂಗ್ ಕ್ವೀನ್ ಚಿತ್ರದಲ್ಲಿ ಹೋರಾಡುವ ರಾಣಿಯಾಗಿ ಅಭಿನಯಿಸಿದರೆ ಪ್ರಮೀಳಾ ಅವರದೇ ಸಂಸ್ಥೆಯಾದ ಸಿಲ್ವರ್ ಫಿಲ್ಮ್ ಮತ್ತು ಕುಮಾರ್ ಸ್ಟುಡಿಯೊ ವತಿಯಿಂದ ನಿರ್ಮಿಸಲಾದ ಧೂನ್ ಚಿತ್ರ ತಯಾರಿಸಿದಾಗ ಸೆನ್ಸಾರ್‌ನ ಸಮಸ್ಯೆಯನ್ನು ಎದುರಿಸಬೇಕಾಯಿತು. 1953ರಲ್ಲಿ ರಾಜ್ ಕಪೂರ್ ಹಾಗೂ ನರ್ಗೀಸ್‌ರನ್ನು ಮುಖ್ಯ ನಟ ನಟಿಯರಾಗಿ ಇರಿಸಿಕೊಂಡು ಈ ಚಿತ್ರ ತಯಾರಿಕೆ ಆರಂಭಿಸಲಾಯಿತು. ಧೂನ್ ಚಿತ್ರದಲ್ಲಿ ಪ್ರಮೀಳಾರ ಸೆರಗು ಭುಜದಿಂದ ಕೆಳಗೆ ಜಾರಿ ಬೀಳುವ ದೃಶ್ಯಕ್ಕೆ ಮೊರಾರ್ಜಿ ದೇಸಾಯಿ ಆಕ್ಷೇಪ ಎತ್ತಿದ್ದರು. 'ಇಂತಹ ಆಕಸ್ಮಿಕಗಳು ನಡೆಯಬಹುದೆಂದು ನಾನು ಮೊರಾರ್ಜಿ ದೇಸಾಯಿಯವರಿಗೆ ವಿವರಿಸಿದೆ. ಯಾವ ಭಾರತೀಯ ಸ್ತ್ರೀಯೂ ಬಿದ್ದ ಸೆರಗನ್ನು ಹಾಗೇ ಇರಗೊಡುವುದಿಲ್ಲ. ತಕ್ಷಣ ಅಪ್ರಯತ್ನವಾಗಿ ಅದನ್ನೆತ್ತಿ ಸೆರಗು ಹೊದ್ದುಕೊಳ್ಳುತ್ತಾಳೆ ಎಂದು ಮೊರಾರ್ಜಿಯವರಿಗೆ ಹೇಳಿದೆ. ಹೀಗಾಗಿ ಆ ದೃಶ್ಯಕ್ಕೆ ಕತ್ತರಿ ಪ್ರಯೋಗವಾಗಲಿಲ್ಲ ಎಂದು ಪ್ರಮೀಳಾ ಹೇಳಿಕೆಕೊಂಡಿದ್ದಾರೆ ಒಟ್ಟಾರೆಯಾಗಿ ಹಿಂದಿ

ಚಿತ್ರದ ಬೆಳವಣಿಗೆಯಲ್ಲಿ ಪ್ರಮೀಳಾ ಹಾಗೂ ಅವರ ಕಾಲದ ಸಮಕಾಲೀನ ಮಹಿಳೆಯರ ಕಾಣಿಕೆಯನ್ನು ನಿರ್ಲಕ್ಷಿಸುವಂತದ್ದಲ್ಲ ಎಂಬುದು ಪ್ರಮೀಳಾರ ನಿರೂಪಣೆಯಲ್ಲಿ ವ್ಯಕ್ತವಾಗಿದೆ.

ಶಿಲ್ಪಿ ಕನಕಮೂರ್ತಿಯವರನ್ನು ಕುರಿತಂತಹ ಅಧ್ಯಾಯ, ಕನಕರವರು ತಮ್ಮ ಬದುಕಿನ ಕನಸನ್ನು ಸಾಕಾರಗೊಳಿಸಿಕೊಳ್ಳಲು ನಡೆಸಿದ ಯಾತ್ರೆಯನ್ನು ವಿವರಿಸುತ್ತದೆ. ಶಿಲ್ಪಕಲೆಯನ್ನು ಮಗಳು ವೃತ್ತಿಯಾಗಿ ಸ್ವೀಕರಿಸುವುದನ್ನು ಇಷ್ಟ ಪಡದ ಕುಟುಂಬದಿಂದ ಬಂದವರು ಕನಕ. ಆದರೆ ಹೆಸರಾಂತ ಶಿಲ್ಪಿ ವಾದಿರಾಜರನ್ನು ಗುರುವಾಗಿ ಪಡೆದಂತಹ ಅದೃಷ್ಟಶಾಲಿಯೂ ಹೌದು.

ಆಗ ಬೆಂಗಳೂರಿನ ಕಲಾ ಮಂದಿರದ ಮುಖ್ಯಸ್ಥರಾಗಿದ್ದ ಎ.ಎನ್ ಸುಬ್ಬರಾವ್ ಅವರಿಂದ ಚಿತ್ರಕಲೆಯನ್ನು ಕಲಿಯುವ ಅವಕಾಶವೂ ಒದಗಿ ಬರುತ್ತದೆ. ಸುಬ್ಬರಾವ್ ಅವರು ಹುಡುಗಿಯರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. ಏಕೆಂದರೆ ಕಲಿಯುವಾಗ ಹುಡುಗಿಯರು ಎದುರಿಸುವಂತ ಸಮಸ್ಯೆಗಳು ಹುಡುಗರಿಗೆ ಇರುವುದಿಲ್ಲ ಎಂದು ಅವರಿಗೆ ಅನಿಸುತ್ತಿತ್ತು. ಒಮ್ಮೆ ಸುಬ್ಬರಾಯರು ತಮ್ಮ ಮನೆಗೆ ಭೇಟಿಕೊಂಡ ಪ್ರಸಂಗವನ್ನು ಕನಕ ನೆನಪಿಸಿಕೊಂಡಿದ್ದಾರೆ. ಆಗ ಕನಕ ಅವರು ಒಂದು ಮೌಲ್ಡಿಂಗ್ ಕೆಲಸದಲ್ಲಿ ನಿರತರಾಗಿದ್ದರು. ತನ್ನ ಕೆಲಸದ ದಿರಿಸಿನಲ್ಲಿ ಮಣ್ಣು ಮೆತ್ತಿಸಿಕೊಂಡು ಬೆವರಿಳಿಸಿಕೊಂಡಿದ್ದ ಕನಕರನ್ನು ನೋಡಿ ಆಕೆ ಚಿನ್ನಾಭರಣಗಳಿಂದ ಮುಚ್ಚಿಕೊಂಡಿರುವುದನ್ನು ನೋಡುವುದಕ್ಕಿಂತಾ ಹೀಗೆ ನೋಡಲು ಖುಶಿಯಾಗುತ್ತಿದೆ ಎಂದಿದ್ದರಂತೆ ಅವರು.

ಕಲೆಯನ್ನು ಕಲಿಸಿಕೊಡುವಲ್ಲಿ ಹೆಣ್ಣು-ಗಂಡಿನ ತಾರತಮ್ಯ ಮಾಡುವಂತಹ ಇನ್ನೊಂದು ಪ್ರಸಂಗವನ್ನು ಕನಕ ನೆನಪಿಸಿಕೊಂಡಿದ್ದಾರೆ. ಅಖಿಲ ಭಾರತ ಮಂಡಳಿ, ವಾದಿರಾಜರ ಬಳಿ ನಾಲ್ಕು ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕೇಳೊಕೊಂಡಿತು. ಕನಕ ಆಯ್ಕೆಗೆ ಮಂಡಳಿಯ ತೀವ್ರ ವಿರೋಧವಿತ್ತು. ಒಬ್ಬ ಹುಡುಗ ತರಬೇತಿ ಪಡೆದರೆ ಆತ ಅದೇ ಕೆಲಸ ಮುಂದುವರಿಸಿಕೊಂಡು ಹೋಗುವುದರಿಂದ ಒಳ್ಳೆಯ ಉತ್ಪನ್ನ ಬರಬಹುದು. ಆದರೆ ಹುಡುಗಿಯನ್ನು ತರಬೇತಿ ಮಾಡುವುದು ವ್ಯರ್ಥ ಎಂಬುದು ಅವರ ವಾದವಾಗಿತ್ತು. ಆಗ ವಾದಿರಾಜರ ಗುರು ಹರಿಹರನ್ ಅವರು, ಮರದ ಮತ್ತು ಶಿಲೆಯ ಕೆತ್ತನೆಯನ್ನು ನಿಲ್ಲಿಸುವುದಿಲ್ಲ ಎಂದು ಪ್ರಮಾಣ ಮಾಡಬೇಕೆಂದರು. ಆ ಪ್ರಕಾರ ತಕ್ಷಣವೇ ಕನಕ ಅವರು ಪ್ರಮಾಣ ಮಾಡಿದಾಗ ಹರಿಹರನ್ ಅವರಿಗೆ ಅಚ್ಚರಿಯಾಯಿತು.

ಕನಕ ಅವರ ಶಿಲ್ಪ ಕಾಯಕದ ಬಗ್ಗೆ ನೆಂಟರಿಷ್ಟರಿಂದ ಕಟೋಕ್ತಿಗಳು, ವ್ಯಂಗ್ಯ ಬಾಣಗಳು, ಸಣ್ಣ ಮಾತುಗಳು ಪದೇ ಪದೇ ಕೇಳಿ ಬರುತ್ತಿತ್ತು ಎಂಬ ಬಗ್ಗೆ ಕೆಲವು ಪ್ರಸಂಗಗಳನ್ನು ಕನಕ ವಿವರಿಸಿದ್ದಾರೆ.

ಕನಕ ಅವರಿಗೆ ತಂದೆಗಿಂತ ಗುರು ವಾದಿರಾಜ ಅವರೇ ಪಿತೃ ಸದೃಶರಾಗಿದ್ದರು. ಕನಕರಿಗೆ ತಂದೆ ಎಂದೂ ಆಪ್ತವಾಗಿರಲಿಲ್ಲ. ಆಕೆ ಶಿಲ್ಪಕಲೆ ಕಲಿಯುವುದು ಇಷ್ಟವಿಲ್ಲ ಎಂದು ಅವರ ತಂದೆ ತಾಯಿಯ ಮೂಲಕ ಆಕೆಗೆ ಹೇಳಿಸಿದ್ದರು.

ಹೆಣ್ಣಿನ ಕೃತಿಗಳ ಬಗೆಗಿರುವ ಹಗುರ ಭಾವನೆಯನ್ನು ಪ್ರತಿಬಿಂಬಿಸಲು ಕನಕ ಮತ್ತೊಂದು ಕುತೂಹಲಕರ ಪ್ರಸಂಗವನ್ನು ವಿವರಿಸುತ್ತಾರೆ.

"1978ರಲ್ಲಿ ಜೇಡಿಮಣ್ಣಿನ ಮಾದರಿಯ ಪ್ರಾತ್ಯಕ್ಷಿಕೆಯಲ್ಲಿ ಕನಕರು ಭಾಗವಹಿಸಿದ್ದರು. ಆಕೆಯ ಗುರು ವಾದಿರಾಜರು ಆಗ ಬದುಕಿದ್ದರು, ಆಗ ಸಾಮಾನ್ಯವಾಗಿದ್ದ ಟೀಕೆಯೆಂದರೆ ಗುರು ವಾದಿರಾಜರೇ ಎಲ್ಲಾ ಕೆಲಸ ಮಾಡಿಕೊಡುತ್ತಾರೆ.... ಒಂದು ಬಾರಿ ವಾದಿರಾಜರಲ್ಲಿ ಯಾರೋ ಕರ್ನಾಟಕದಲ್ಲಿ ಪ್ರತಿಕೃತಿ ಮಾಡುವವರೇ ಇಲ್ಲ ಎಂದಾಗ ವಾದಿರಾಜರು ಕನಕರ ಹೆಸರನ್ನು ಸೂಚಿಸಿದ್ದರು. ಆಕೆ ಈ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಬಹುದು ಎಂದಿದ್ದರು. ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಈ ಬಹಿರಂಗ ಪ್ರದರ್ಶನದಲ್ಲಿ ಭಾಗವಹಿಸಿದ್ದ ಇನ್ನೊಬ್ಬ ವ್ಯಕ್ತಿ ವೆಂಕಟಾಚಲಪತಿ. ಇಬ್ಬರೂ ತಮ್ಮ ಪ್ರತಿಕೃತಿಗೆ ಮಾದರಿಯಾಗಿ ನಿಲ್ಲಲು ಒಬ್ಬೊಬ್ಬ ವ್ಯಕ್ತಿಯನ್ನು ಆಯ್ದುಕೊಂಡರು. ಕನಕ ಆಯ್ದುಕೊಂಡ ವ್ಯಕ್ತಿ ಸ್ವಲ್ಪ ಸಮಯದ ನಂತರ ತನಗೆ ಮಾದರಿಯಾಗಿ ನಿಲ್ಲಲು ವೇಳೆಯಿಲ್ಲ ಎಂದು ಹಿಂದೆ ಸರಿದ. ಕನಕ ಇನ್ನೊಬ್ಬ ವ್ಯಕ್ತಿಯನ್ನು ವಿಚಾರಿಸಿದರು. ಆತನಿಗೂ ಮನಸ್ಸಿರಲಿಲ್ಲ. ತನಗೆ ಮಾದರಿಯಾಗಿ ನಿಲ್ಲಲು ಯಾರೂ ಇಷ್ಟ ಪಡುತ್ತಿಲ್ಲ ಎಂದು ಕನಕ ಅವರಿಗೆ ಕೊನೆಗೆ ತಿಳಿಯಿತು. ಬಹುಶಃ ಅವರು ಹೆಂಗಸಾಗಿದ್ದರಿಂದಲೋ ಏನೊ. ಆಗ ಆಕೆಗೆ ಅಲ್ಲೇ ಕುಳಿತಿದ್ದ ಹಿರಿಯ ಪತ್ರಕರ್ತರೊಬ್ಬರು ಕಂಡರು. ಕನಕ ಅವರ ಬಳಿಗೆ ಹೋಗಿ ಅವರನ್ನು ರೂಪದರ್ಶಿಯಾಗಲು ಕೇಳಿಕೊಂಡರು. ಅದಕ್ಕವರು "ಧಾರಾಳವಾಗಿ" ಎಂದು ಆಕೆಯೆದುರು ಕುಳಿತುಕೊಂಡರು. ಅವರಿಗೆ ಸ್ವಲ್ಪ ಅಗಲವಾದ ದಪ್ಪ ಮುಖವಿತ್ತು. ಆದುದರಿಂದ ಆಕೆ ಹೆಚ್ಚು ಮಣ್ಣು ಮೆತ್ತ ಬೇಕಿತ್ತು.

ಅವರಿಗೆ ಹೀಗೆ ಪ್ರತಿಕೃತಿ ಮಾಡಲು ಒಂದು ಗಂಟೆ ಕೊಡಲಾಗುತ್ತಿತ್ತು ಮತ್ತು ಅಷ್ಟರೊಳಗೆ ಅವರು ಆ ವ್ಯಕ್ತಿಯ ಹೋಲಿಕೆಯನ್ನು ತರಬೇಕಿತ್ತು. ಆಕೆ ಕೆಲಸ ಆರಂಭಿಸಿದ ಹತ್ತು ನಿಮಿಷಗಳಲ್ಲಿ ಮೆತ್ತಿದ ಮಣ್ಣು ತುಂಬಾ ಭಾರವಾಗಿದ್ದರಿಂದ ಕಳಚಿ ಬೀಳತೊಡಗಿತ್ತು. ಅದು ಬಿದ್ದ ತಕ್ಷಣ ಸುತ್ತಮುತ್ತಲಿನ ಜನರೆಲ್ಲಾ ದೊಡ್ಡದಾಗಿ ಉದ್ಗರಿಸತೊಡಗಿದರು. ಕನಕ

ಹೇಗೋ ಮಣ್ಣನ್ನ ಮತ್ತೆ ಅಂಟಿಸಿ ತನ್ನ ಕೆಲಸ ಮುಂದುವರಿಸಿದರು. ಸುಮಾರು ಅರ್ಧ ತಾಸಿನ ನಂತರ ವೆಂಟಾಚಲಪತಿಯ ಪ್ರತಿಕೃತಿಯೂ ನೆಲ ಕಚ್ಚಿತು. ಆಗ ಮಾತ್ರ ಯಾರೂ ಸ್ವರ ಎತ್ತಲೇ ಇಲ್ಲ. ಆತನೊಬ್ಬ ಗಂಡಸಾದ್ದರಿಂದ ಯಾವುದೇ ಸಂದರ್ಭವನ್ನು ಸಂಭಾಳಿಸಿಕೊಂಡು ಹೋಗಬಲ್ಲ ಎಂದು ಗುಂಪಿಗೆ ಅನ್ನಿಸಿತ್ತು. ಕನಕ ಮಾತ್ರ ತಕ್ಷಣ ಹೋಗಿ ವೆಂಕಟಾಚಲಪತಿಗೆ ಸಹಾಯ ಮಾಡಿದರು. ಅರ್ಧ ಗಂಟೆಯಲ್ಲಿ ಕನಕ ಅವರಿಗೆ ಹೋಲಿಕೆ ತರಲು ಸಾಧ್ಯತೆ ಇತ್ತು".

ಪಾರಂಪರಿಕ ಶಿಲ್ಪ ಕಲೆಯೊಂದಿಗೆ ತಳುಕು ಹಾಕಿಕೊಂಡಿರುವ ವಿಶಿಷ್ಟ ಕಲೆಯ ಗುಟ್ಟುಗಳು ಹುಡುಗಿಗೆ ತಿಳಿದಿದ್ದರೆ ಮದುವೆಯಾದ ಬಳಿಕ ಅವು ಗಂಡನ ಕುಟುಂಬಕ್ಕೆ ದಾಟಿ ಬಿಡಬಹುದು ಎನ್ನುವ ಭಾವನೆ ಅವರಲ್ಲಿದೆ. ಹಾಗೆ ಕುಟುಂಬದ ಹೆಂಗಸರು ಬಳಿ ಇರುವಾಗ ಅವರು ಕೆತ್ತನೆಯನ್ನು ನಿಲ್ಲಿಸಿಬಿಡುತ್ತಾರೆ. ...... ಈ ಹಿನ್ನೆಲೆಯಲ್ಲೇ ಶಿಲ್ಪ ಕಲೆಯ ಕಸುಬನ್ನು ಮಾಡುವ ಕನಕ ಅಂಥವರನ್ನು ವಿಶ್ವಕರ್ಮ ಕೋಮಿನವರು ಸಂತೋಷದಿಂದ ಒಪ್ಪಿಕೊಳ್ಳಲಿಲ್ಲ. ಜತೆಗೆ ವಿಶ್ವಕರ್ಮ ಪಂಗಡಕ್ಕೇ ಸೇರದವರು ಆ ಕ್ಷೇತ್ರಕ್ಕೆ ಇಳಿಯುವುದನ್ನು ಒಪ್ಪಿಕೊಳ್ಳುವುದು ಕಷ್ಟ. ಅದರಲ್ಲೂ ಸ್ತ್ರೀಯೊಬ್ಬಳು ಕೆತ್ತನೆ ಮಾಡುವುದನ್ನು ಒಪ್ಪಿಕೊಳ್ಳುವುದು ಇನ್ನೂ ಕಷ್ಟ.

ಹೀಗಾಗಿಯೇ ಕನಕ ಯಾವುದೇ ಪಾರಂಪರಿಕ ರುವಾರಿ ಮನೆತನದವರಲ್ಲವಾದ್ದರಿಂದ ಅವರಲ್ಲಿ ಕಲಿಯಲು ಯಾವ ಶಿಷ್ಯರೂ ಇಲ್ಲ ಒಮ್ಮೊಮ್ಮೆ ಕೆಲವು ಹುಡುಗರು ಕಲಿಯಲು ಬಂದರೂ ನಂತರ ಬೇರೆ ಕಡೆಗೆ ಹೋಗಿ ಬಿಡುತ್ತಾರೆ ಎಂದೂ ಕನಕ ಅವರು ಹೇಳಿಕೊಂಡಿದ್ದಾರೆ.

ಖ್ಯಾತ ಕಥಕ್ ನೃತ್ಯಗಾತಿ ದಮಯಂತಿ ಜೋಷಿ ಅವರ ಬದುಕಿನ ಕಥೆ ಇನ್ನೊಂದು ಬಗೆಯದು. ನೃತ್ಯ ಕಲಾ ಕುಟುಂಬಕ್ಕೆ ಸೇರಿರದ ಆದರೆ ಈ ಕಲೆಯನ್ನು ತನ್ನದಾಗಿಸಿಕೊಂಡ ಮೊಟ್ಟ ಮೊದಲ ನೃತ್ಯ ಕೋವಿದೆ ಮೇನಕಾ ಅವರ ಮಾನಸ ಪುತ್ರಿಯಾಗಿ ದಮಯಂತಿ ಜೋಷಿ ಅವರು ನೃತ್ಯ ಕ್ಷೇತ್ರದಲ್ಲಿ ಏರಿದ ಸಾಧನೆಯನ್ನು ದಮಯಂತಿ ಜೋಷಿ ಅವರನ್ನು ಕುರಿತ ಅಧ್ಯಾಯ ನಿರೂಪಿಸುತ್ತದೆ. ಪತಿಯನ್ನು ಕಳೆದು ಕೊಂಡು ಇರುವ ಒಬ್ಬಳೇ ಮಗಳನ್ನು ಸಲಹಲು ಕಸೂತಿ, ಬಟ್ಟೆ ಹೊಲಿಯುವುದು ಇತ್ಯಾದಿ ಕಸುಬಿನ ಮೂಲಕ ದಮಯಂತಿ ತಾಯಿ ವತ್ಸಲಾ ಜೋಷಿ ಸೆಣಸಾಡುತ್ತಿದ್ದರು. ದಮಯಂತಿಯನ್ನು ದತ್ತು ಪಡೆಯುವ ವಿಚಾರವನ್ನು ಮೇನಕಾ ಅವರು ವತ್ಸಲಾ ಬಳಿ ಪ್ರಸ್ತಾಪಿಸಿದಾಗ "ಕಾನೂನು ರಿತಿ ದತ್ತಕ ಸಾಧ್ಯವಿಲ್ಲ. ಮಗವನ್ನು ಹಂಚಿಕೊಳ್ಳೋಣ. ಆಕೆಗೆ ಇಬ್ಬರು ತಾಯಂದಿರಿರಲಿ ಎಂದು ವತ್ಸಲಾ ಹೇಳಿದಾಗ ಮೇನಕಾ ಒಪ್ಪಿಕೊಂಡರು. ಆ ನಂತರ ದಮಯಂತಿ ಹದಿ ಹರೆಯದವರಿದ್ದಾಗಲೇ ಮೇನಕಾ ತೀರಿಕೊಂಡರು. ಆದರೆ ಮೇನಕಾ ಅವರೊಂದಿಗೆ ದಮಯಂತಿ ಕಳೆದ ಬದುಕಿನ ರಚನಾತ್ಮಕ ಕಾಲವಾಗಿದ್ದು ಆಕೆಯ ಮುಂದಿನ ಬದುಕಿಗೆ ಅಸ್ತಿಭಾರವಾಗಿ ನಿಂತಿತು.

'ನೃತ್ಯಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡಿರುವುದರಿಂದ ತಾನು ಒಬ್ಬಂಟಿಯಾಗಿರಲು ಬಯಸಿದೆ' ಎಂದೂ ದಮಯಂತಿ ಹೇಳಿಕೊಂಡಿದ್ದಾರೆ. ದಮಯಂತಿಯವರು ಮಾತುಕತೆಯಲ್ಲಿ ಪದೇ ಪದೇ ಘನತೆ, ಗೌರವ ಎಂಬ ಪದಗಳನ್ನು ಪದೇ ಪದೇ ಬಳಸುತ್ತಾರೆ ಎಂಬುದೂ ಈ ಅಧ್ಯಾಯದಲ್ಲಿ ನಿರೂಪಿತವಾಗಿದೆ. ಕಥಕ್ ನೃತ್ಯವನ್ನು ಆಸ್ಥಾನದ ವಾತಾವರಣದಿಂದ ಹೊರಕ್ಕೆ ತಂದ ದಮಯಂತಿ ಅವರಂತಹ ನೃತ್ಯ ಕಲಾವಿದರಿಗೆ ಈ ನೃತ್ಯಕ್ಕೆ ತಳುಕು ಹಾಕಿಕೊಂಡಿದ್ದ ಎಲ್ಲಾ ರೀತಿಯ ಕಳಂಕವನ್ನು ತೊಡೆದುಹಾಕಬೇಕಿತ್ತು. "ಈಗ ದಮಯಂತಿಯವರು ಆತ್ಮ ಚರಿತ್ರೆಯನ್ನು ಬರೆಯುವ ಯೋಜನೆ ಹಾಕಿಕೊಂಡಿದ್ದಾರೆ. ಅದು ಸಾಧ್ಯವಾದಲ್ಲಿ, ಮನೆಯೊಳಗೇ ಇರಬೇಕೆಂಬ ನಿರ್ಬಂಧವಿದ್ದರೂ ಅದನ್ನು ಧಿಕ್ಕರಿಸಿ ರಂಗಮಂಚ ಏರಿ ನೃತ್ಯ ಮಾಡುವ ಧೈರ್ಯ ತೋರಿದ ನೃತ್ಯ ಕಲಾವಿದರ ಹಾಗೂ ನೃತ್ಯಕಲೆಯ ಒಂದು ಪೂರ್ತಿ ಶಕವನ್ನೇ ಅದು ಪುನರ್ ಸೃಷ್ಟಿಸಲಿದೆ " ಎಂಬ ವಾಕ್ಯಗಳೊಡನೆ ಈ ಅಧ್ಯಾಯ ಮುಕ್ತಾಯವಾಗಿದೆ.

ಪತ್ರಕರ್ತೆ ಹಾಗೂ ರಂಗಭೂಮಿಯ ಕಲಾವಿದೆಯಾಗಿ ಸುಷ್ಮಾ ದೇಶಪಾಂಡೆ ಖ್ಯಾತರಾಗಿದ್ದಾರೆ. ಅವರು ವಿಭಿನ್ನ ಬಗೆಯ ರಂಗಭೂಮಿಗಳಲ್ಲಿ ಕೈಯಾಡಿಸಿದ್ದರೂ ಸಾವಿತ್ರಿ ಬಾಯಿ ಫುಲೆ ಹಾಗೂ ತಮಾಷಾ ಕಲಾವಿದೆಯರ ಮೇಲಿನ ಅವರ ನಾಟಕಗಳಿಗಾಗಿ ಹೆಚ್ಚು ಖ್ಯಾತರಾಗಿದ್ದಾರೆ. ಮಹಿಳಾ ಹೋರಾಟದ ಇತಿಹಾಸದಲ್ಲಿ ಸಾವಿತ್ರಿ ಬಾಯಿ ಫುಲೆ ದೊಡ್ಡ ಹೆಸರು. ತುಳಿತಕ್ಕೊಳಗಾದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಸಾಂಪ್ರದಾಯಿಕ ಕುಟುಂಬದ ಚೌಕಟ್ಟಿನಿಂದ ಹೊರಬಂದ ಸಾವಿತ್ರಿಬಾಯಿಯವರ ಕಾಲವನ್ನು ಸುಷ್ಮಾರ ನಾಟಕ ಪುನರ್ ಸೃಷ್ಟಿಸುತ್ತದೆ.

ಬಾಲ್ಯದಲ್ಲಿ ಅವಿಭಕ್ತ ಕುಟುಂಬದಲ್ಲಿ ಇತರರ ಟೀಕೆಗಳ ಮಧ್ಯೆ ಸುಷ್ಮಾ ಬೆಳೆದರೂ, ಅಜ್ಜ ಆಕೆಯ ಆಪ್ತಸ್ನೇಹಿತೆಯಾಗಿದ್ದರು. ನಂತರ ಬರವಣಿಗೆ, ನಟನೆ, ಸ್ವಂತಿಕೆಯ ಹುಡುಕಾಟದ ಸಂದರ್ಭದಲ್ಲಿ ಸುಷ್ಮಾರ ಮೊದಲ

ಮದುವೆ ಆರಂಭದ ಹಂತದಲ್ಲೇ ವಿಫಲಗೊಂಡಿತ್ತು. ಅಷ್ಟರಲ್ಲಿಯೇ ವಿಶ್ವಾಸ ಕಣೇಕರ್ ಎಂಬವರ ಪರಿಚಯ, ಗೆಳೆತನ ಸುಷ್ಮಾರಿಗೆ ದೊರಕಿ ಅವರನ್ನು ಮದುವೆಯಾದರು. ವಿಶ್ವಾಸ್ ಸಹ ರಂಗಭೂಮಿಯಲ್ಲೇ ತೊಡಗಿಕೊಂಡಿದ್ದರು. ಸಾವಿತ್ರಿಬಾಯಿ ಫುಲೆ ಅವರನ್ನು ಕುರಿತು ನೀವ್ಯಾಕೆ ನಾಟಕವೊಂದನ್ನು ಬರೆಯಬಾರದು ಎಂದು ಸ್ನೇಹಿತರೊಬ್ಬರು ಸೂಚಿಸಿದಾಗ ಸುಷ್ಮಾ ಸಾವಿತ್ರಿ ಅವರನ್ನು ಕುರಿತು ಹಲವು ತಿಂಗಳುಗಳ ಕಾಲ ಅಧ್ಯಯನ ನಡೆಸಿದರು. "ಹಾಂ ನಾನು ಸಾವಿತ್ರಿ ಬಾಯಿ" ಎಂಬ ನಾಟಕವನ್ನು ಸುಷ್ಮಾ ಬರೆದು ಹಲವೆಡೆ ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿದ್ದಾರೆ. ಸುಷ್ಮಾ ಅವರು ತಮ್ಮ ಸಾವಿತ್ರಿ ಸ್ಕ್ರಿಪ್ಟಿನ ಮೇಲೆ ಹಕ್ಕು ಸಾಧಿಸಿಲ್ಲ. ಯಾರು ಬೇಕಾದರೂ ಈ ನಾಟಕ ಪ್ರದರ್ಶಿಸಬಹುದು. ಆದರೆ ಅವರಿಗೂ, ತಮಗಿರುವ ನಂಬಿಕೆ ಇರಬೇಕಷ್ಟೆ ಎಂದು ಸುಷ್ಮಾ ಹೇಳುತ್ತಾರೆ. "ಹಾಂ, ನಾನು ಸಾವಿತ್ರಿ ಬಾಯಿ" ನಾಟಕದ ಕನ್ನಡ ಅನುವಾದವನ್ನೂ ಈ ಪುಸ್ತಕದಲ್ಲಿಯೇ ನೀಡಲಾಗಿದೆ.

ರಂಗಭೂಮಿಯ ಹೊಸ ಸಾಧ್ಯತೆಗಳ ಮೂಲಕ ತಮ್ಮ ಆಲೋಚನೆ, ವಿಚಾರ, ಭಾವನೆಗಳ ಹುಡುಕಾಟವನ್ನು ಮಾಯಾಕೃಷ್ಣ ರಾವ್ ನಿರಂತರವಾಗಿ ಜೀವಂತವಿರಿಸಿಕೊಂಡಿದ್ದಾರೆ. ಮಾಯಾಕೃಷ್ಣ ರಾವ್ ಅವರ ತಾಯಿ ಭಾನುಮತಿ ರಾವ್ ಅವರೂ ಕಲಾವಿದೆಯೇ ತಾಯಿಯೇ ಇವರ ಮೊದಲ ನೃತ್ಯಗುರು ಮಾಯಾ ಅವರು ಕಲಾವಿದೆಯಾಗಿ ಕಥಕ್ಕಳಿ ನೃತ್ಯವನ್ನು ಬಳಸಿಕೊಳ್ಳುತ್ತಾರೆ. ಆಕೆಯ ನಾಟಕದ ಕಲ್ಪನೆಗಳಲ್ಲಿ ದೇಹವೇ ಕೇಂದ್ರ, ಇಡೀ ವಿಶ್ವವನ್ನೇ ತಮ್ಮ ದೇಹದೊಳಗೆ ತಂದುಕೊಳ್ಳುವ, ದೇಹವನ್ನು ಎತ್ತರಕ್ಕೆ ಕೊಂಡೊಯ್ಯುವ, ಅತೀಂದ್ರಿಯ ಹಂತಕ್ಕೇರಿಸುವ ಅದ್ಭುತ ಪ್ರಯತ್ನ ಮಾಯಾರದು. ಮಾಯಾರವರ ನಿರೂಪಣೆಯನ್ನೂ ಸ್ಪಾರೋ ಸಂಸ್ಥೆ ನಡೆಸಿದ ಕಮ್ಮಟವನ್ನೇ ಆಧರಿಸಿ ಬರೆಯಲಾಗಿದೆ. ಆದರೆ ಈ ಕಮ್ಮಟ ಸ್ಪಾರೋ ಕಮ್ಮಟಗಳ ಇತಿಹಾಸದಲ್ಲೇ ವಿಶಿಷ್ಟವಾದುದು ಎಂದು ಈ ಅಧ್ಯಾಯದ ಪ್ರಸ್ತಾವನೆಯಲ್ಲಿ ಸಿ.ಎಸ್.ಲಕ್ಷ್ಮಿ ಹೇಳುತ್ತಾರೆ. ಕಮ್ಮಟವೇ ರಂಗ ಪ್ರದರ್ಶನದ ಸ್ವರೂಪ ಪಡೆಯಿತು. ಪ್ರೇಕ್ಷಕರು ಅಭಿನಯದ ಒಂದು ಅಂಗವಾಗಿ ಮೇಳದಂತೆ ನಡುವೆ ಬರುತ್ತಿದ್ದು ಈ ಇಡೀ ಅನುಭವ ಅಪರೂಪದ್ದಾಗಿತ್ತು ಎಂದು ಲಕ್ಷ್ಮಿ ಹೇಳುತ್ತಾರೆ. ಕಮ್ಮಟ ಮುಗಿದ ಬಹಳ ಸಮಯದ ನಂತರವೂ ಕಲಾವಿದೆ ಮಾಯಾರ ನೆನಪಿನೊಂದಿಗೆ ವಿಸ್ಮಯದ ಅನುಭವ ಪ್ರೇಕ್ಷಕರ ಮನದೊಳಗೆ ಬಹು ಕಾಲ ಉಳಿಯಿತು ಎಂದು ಅವರು ಹೇಳುತ್ತಾರೆ.

ಈ ಪುಸ್ತಕದ ಕಡೆಯ ಅಧ್ಯಾಯ, ಮೈಸೂರು ಚಿತ್ರಕಲೆಯ ಶೈಲಿಯನ್ನು ತಮ್ಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡ ನೀಲಾರ ಅನುಭವ ಕಥನವನ್ನು ಕುರಿತದ್ದು. ನೀಲಾ ಅವರು ಈ ಪಾರಂಪರಿಕ ಚಿತ್ರಕಲೆಯನ್ನು ವಂಶಪಾರಂಪರ್ಯವಾಗಿ ಬೆಳೆಸಿಕೊಂಡು ಬಂದ ಕುಟುಂಬಕ್ಕೆ ಸೇರಿದವರಾಗಿರಲಿಲ್ಲ. ಜತೆಗೆ ಈ ಚಿತ್ರಕಲೆ ತಂದೆಯಿಂದ ಮಗನಿಗಷ್ಟೇ ವಂಶಪಾರಂಪರ್ಯವಾಗಿ ಬರುತ್ತಿತ್ತು. ಕುಟುಂಬದ ಮಹಿಳೆಯರಿಗೆ ಇದಕ್ಕೆ ಅವಕಾಶವಿರುತ್ತಿರಲಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಈ ಕ್ಷೇತ್ರದಲ್ಲಿ ನೀಲಾರ ಸಾಧನೆ ವಿಶಿಷ್ಟವಾದುದು. ನೀಲಾರ ವೈಯಕ್ತಿಕ ಬದುಕು ಮತ್ತು ವೃತ್ತಿ ಬದುಕಿನ ನಿರೂಪಣೆಗಳೊಂದಿಗೇ, ಈ ಪಾರಂಪರಿಕ ಕಲೆ ಚರಿತ್ರೆಯ ಉಲ್ಲೇಖಗಳನ್ನು ನಿರೂಪಣೆಯ ಮಧ್ಯ ಮಧ್ಯದಲ್ಲೇ ನೀಡಲಾಗಿದೆ.

ಒಟ್ಟಾರೆಯಾಗಿ "ಸ್ಪಾರೋ" ಸಂಸ್ಥೆಯ ದೃಶ್ಯ ಚರಿತ್ರೆ ಕಮ್ಮಟಗಳಲ್ಲಿ ವಿವಿಧ ಕ್ಷೇತ್ರಗಳ ಕಲಾವಿದರು ಅಭಿವ್ಯಕ್ತಿಸಿದ ಅನುಭವಗಳು ಓದುಗರನ್ನು ಬೇರೊಂದು ಲೋಕಕ್ಕೇ ಕರೆದೊಯ್ಯುತ್ತವೆ. ಆದರೆ ಈ ಅನುಭವಗಳ ನಿರೂಪಣೆಯನ್ನು ಕನ್ನಡದ ಭಾಷೆಯ ಜಾಯಮಾನಕ್ಕೆ ಬಗ್ಗಿಸುವಲ್ಲಿ ಹಲವೆಡೆ ಮುಗ್ಗರಿಸಿದಂತಾಗಿದೆ. ಇದರಿಂದ ಕೆಲವು ಭಾಗಗಳು ಸರಾಗ ಓದಿಗೆ ತೊಡಕಾಗಿದೆ. ಪುಸ್ತಕದ ಶೀರ್ಷಿಕೆ "ಮುಗಿಲುಮಲ್ಲಿಗೆಯ ಎಟುಕಿಸಿ" ಕಾವ್ಯಾತ್ಮಕವಾಗಿದ್ದು ಮನ ಸೆಳೆಯುತ್ತದೆ. ಆದರೆ ಅದರ ಉಪ ಶೀರ್ಷಿಕೆ ದೃಶ್ಯ ಚರಿತ್ರೆ, ಕಮ್ಮಟದಲ್ಲಿ ಕಲಾವಿದೆಯರಿಂದ ಅಭಿವ್ಯಕ್ತಿಸಲ್ಪಟ್ಟವುಗಳ ಸಂಪಾದಿತ ಬರಹ ಎಂಬುದು ಅಷ್ಟು ಸಮರ್ಪಕವಾಗಿಲ್ಲ. casting on the couch ಎಂಬಂತಹ ಇಂಗ್ಲಿಷ್‌ನಲ್ಲಿ ಬಳಕೆಯಲ್ಲಿರುವ ನುಡಿಗಟ್ಟಿಗೆ "ಪಾತ್ರ ವ್ಯವಸ್ಥೆಯ ಮಂಚ", depression ಗೆ ಆರ್ಥಿಕ ಖಿನ್ನತೆ ಎಂಬಂತಹ ಪದಶಃ ಅನುವಾದಗಳೂ ಕಿರಿಕಿರಿ ಮೂಡಿಸುತ್ತವೆ.

ಆದರೆ ಒಟ್ಟಾರೆಯಾಗಿ ಹಲವು ಅಡೆತಡೆಗಳ ಮಧ್ಯೆಯೂ ತಾವು ಆಯ್ದುಕೊಂಡ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ ಈ ಮಹಿಳೆಯರ ಕಥಾನಕಗಳು ಓದುಗರಲ್ಲಿ ರೋಮಾಂಚನಗಳನ್ನು ಮೂಡಿಸುವುದಲ್ಲದೆ, ಎಳೆಯ ಪೀಳಿಗೆಗಳಿಗೆ ಸ್ಫೂರ್ತಿಯ ಸೆಲೆಗಳೂ ಆಗಬಹುದು.

- ಸಿ.ಜಿ. ಮಂಜುಳಾ

ಭಾರತೀಯ ಸಂಸ್ಕೃತಿಯ ರಕ್ಷಕರು ಯಾರು ?

ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಮೂರನೇ ಬ್ರಾಹ್ಮಣ ಸಮ್ಮೇಳನವನ್ನು ಉಧ್ಘಾಟಿಸಿ ಉನ್ನತ ಶಿಕ್ಷಣ ಸಚಿವರು ಆದ ಡಾ॥ ಜಿ. ಪರಮೇಶ್ವರ್ ರವರು ಮಾತನಾಡಿದ ಮಾತುಗಳು ಆಶ್ಚರ್ಯಕರವಾಗಿವೆ. ಜನರಿಂದ ಆಯ್ಕೆಯಾಗಿ ಸರ್ಕಾರದ ಪ್ರತಿನಿಧಿಯಾಗಿ, ಒಂದು ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಬಹುಮುಖೀ ಸಮಾಜದಲ್ಲಿ ಒಂದು ಸಮುದಾಯದವರನ್ನು ಓಲೈಸುವುದು. ಅವರ ಕೊಡುಗೆಯನ್ನು ಅತಿಯಾಗಿ ವಿಜ್ರಂಭಿಸುವುದು. ಇದುವರೆಗೂ ನಡೆಸಿಕೊಂಡು ಬಂದ ಐತಿಹಾಸಿಕ ಹುನ್ನಾರದ ಒಂದು ಯತ್ನವಾಗಿದೆ.

ರಾಜ್ಯದಲ್ಲಿ ಕೇವಲ ಶೇ 4 ರಷ್ಟಿರುವ ಸಮುದಾಯದಿಂದ ಬಹುತೇಕ ವಿಜ್ಞಾನಿಗಳು ಶಿಕ್ಷಣ ತಜ್ಞರು ಈ ಜನಾಂಗದಿಂದ ಬಂದವರು ಎಂದು ಹೇಳುವ 'ಶಿಕ್ಷಣ' ಸಚಿವರು ಎಷ್ಟು ಕುರುಡಾಗಿದ್ದಾರೆಂದರೆ, ಐತಿಹಾಸಿಕವಾಗಿ ಇಂತಹ ಅವಕಾಶ -ವನ್ನು ಇತರ ಸಮುದಾಯದವರಿಗೆ ನೀಡಲಾಗಿತ್ತೆ ? ಇತರ ಸಮುದಾಯದ ಜನರಿಗೆ ಇಂತಹ ಅವಕಾಶಗಳನ್ನು ವಂಚಿಸಿದವರು ಯಾರು ? ಜಾತಿಯ ಶ್ರೇಣೀ ಕೃತ ವ್ಯವಸ್ಥೆಯಲ್ಲಿ ಯಾವ ಸಮುದಾಯದ ಜನರಿಗೆ ಹೆಚ್ಚಿನ ಅವಕಾಶಗಳು ದೊರೆತವು ? ಈ ಪ್ರಶ್ನೆಗಳನ್ನು ಸರ್ಕಾರದ ಪ್ರತಿನಿಧಿಯಾದ ಉನ್ನತ ಶಿಕ್ಷಣ ಸಚಿವರು ಯಾರನ್ನು ಕೇಳಬೇಕು ?

ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಉಳಿಸಿ ಕೊಳ್ಳುವ ರಾಜ್ಯ ಸರ್ಕಾರದ ಪ್ರಯತ್ನವನ್ನು ವಿವರಿಸುತ್ತಾ, ಇದರಿಂದ ಹೆಚ್ಚು ಬುದ್ಧಿವಂತರನ್ನು ಹೊಂದಿದ ಬ್ರಾಹ್ಮಣ ಸಮುದಾಯಕ್ಕೆ ಅನುಕೂಲವಾಗುತ್ತದೆಯೆಂದು ವಿಶೇಷಣವನ್ನು ಸೇರಿಸುತ್ತಾರೆ. ಬುದ್ಧಿವಂತಿಕೆ ಈ ದೇಶದಲ್ಲಿ ಒಂದು ಸಮುದಾಯದ ಸೊತ್ತೆ? ಇದು ಹೇಗಾಯಿತು ? ಇತರ ಸಮುದಾಯದಲ್ಲಿ ಬುದ್ಧಿವಂತರು ಇಲ್ಲವೆ? ಅಥವಾ ಇತರ ಸಮುದಾಯದ ಬುದ್ಧಿವಂತರನ್ನು ಗುರುತಿಸಿದೇ ಇರುವುದರ ಹಿಂದಿರುವ ಹಿತಾಸಕ್ತಿ ಏನು ?

ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವಲ್ಲಿ ಬ್ರಾಹ್ಮಣ ಸಮುದಾಯದ ಕೊಡುಗೆಯನ್ನು ಸಚಿವರು ಎತ್ತಿ ಹೇಳುತ್ತಾರೆ ಭಾರತೀಯ ಸಂಸ್ಕೃತಿ ಎಂದರೇನು ? ಬ್ರಾಹ್ಮಣ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿಯೆ ? ಒಂದು ಸಮುದಾಯದ ಕೊಡುಗೆಯಿಂದ ಭಾರತೀಯ ಸಂಸ್ಕೃತಿಯ ರಕ್ಷಣೆ -ಯಾಗುತ್ತಿದೆಯೆ ? ಅಥವಾ ಒಂದು ಸಮುದಾಯದ ಸಂಸ್ಕೃತಿಯ ರಕ್ಷಣೆಯಾಗುತ್ತಿದೆಯೇ ?

ಕೋಮುವಾದ ಪ್ರಭಲವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಮಾದರಿಯ ಆಲೋಚನೆಗಳು ಯಾವುದೇ ಪಕ್ಷದ ವಕ್ತಾರದಿಂದಲೂ ವ್ಯಕ್ತವಾಗುವುದು ಸಿದ್ಧಾಂತಗಳನ್ನು (ಇದ್ದರೆ) ಮೀರಿ ಮನಸ್ಸುಗಳು ಯಾವ ಕಡೆ ವಾಲುತ್ತಿವೆಯೆನ್ನುವುದಕ್ಕೆ ಹಿಡಿದ ಕನ್ನಡಿಯಾಗಿದೆ.

ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಈ ಸಮುದಾಯದ ಚಿಂತನೆಯೇ ಇಂದು ದೇಶವನ್ನು ಕೋಮುದಳ್ಳುರಿಗೆ ತಳ್ಳುತ್ತಿದೆ. ಭಾರತದಂತಹ ಬಹುಮುಖೀ ದೇಶದಲ್ಲಿ ಒಂದು ಸಮುದಾಯದ ಏಕ ಮುಖಿ ಸಂಸ್ಕೃತಿ, ಭಾಷೆ, ನಡೆ, ನುಡಿ, ಧರ್ಮ ಆಲೋಚನೆಗಳೇ ಮುಖ್ಯವಾಹಿನಿಯಾಗಿದೆ. ಇತರ ಸಮುದಾಯಗಳು ಸಾಂಸ್ಕೃತಿಕ ಕೀಳರಿಮೆಯಿಂದ ನರಳುತ್ತಿವೆ. ಕಡಿಮೆ ಜನಸಂಖ್ಯೆಯನ್ನು ಹೊಂದಿದ ಒಂದು ಸಮುದಾಯ ಬಹು ಸಂಖ್ಯಾತ ಜನರ ಸಂಸ್ಕೃತಿಯ ನಾಶಕ್ಕೆ ಐತಿಹಾಸಿಕ ಗುಂಡಿಯನ್ನು ತೆಗೆಯುತ್ತದೆ.

ನಮ್ಮ ದೇಶದ ಜಾತಿ ಆಧಾರಿತ ಶ್ರೇಣೀಕೃತ ವ್ಯವಸ್ಥೆ. ಒಂದು ಸಮುದಾಯದ ವೈಭವೀಕರಣವೇ ಕೋಮುವಾದದ ಮೊದಲ ಮೆಟ್ಟಿಲು.

ಭಾರತದಲ್ಲಿ ಶೇ 45 ರಷ್ಟು ಹರೆಯದ ಹೆಣ್ಣು ಮಕ್ಕಳು ಹಾಗೂ ಶೇ 20 ರಷ್ಟು ಗಂಡು ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಾರೆ.

ಶೇ 25ರಿಂದ 30 ರಷ್ಟು ಹೆಣ್ಣು ಮಕ್ಕಳು 17 ವರ್ಷ ವಯಸ್ಸಿಗಿಂತ ಮೊದಲೇ ತಾಯಂದಿರಾಗುತ್ತಾರೆ.

19 ವರ್ಷ ವಯಸ್ಸಿನೊಳಗಿನ ಹೆಣ್ಣು ಮಕ್ಕಳಲ್ಲಿ ಸುಮಾರು 13 ಮಿಲಿಯನ್ ಹೆಣ್ಣು ಮಕ್ಕಳು ಕಾಣೆಯಾಗುತ್ತಿದ್ದಾರೆ.

ಅವಳೊಳಗಿನ ಅವಳು

ಬಣ್ಣವಿರದ ರೂಪವಿರದ
ಬರೀ ಭಾವಗಳು ಹೊಸಲಾಗಿ
ಹರಿವ ಅದಮ್ಯ ಬಯಕೆಗಳು
ಕಚಗುಳಿಯಿಡುತ್ತವೆ
ಬೆಪ್ಪಾಗಿ ಕೂತ ಅಡಿಗೆ ಮನೆಯೊಳಗಿನಾಕೆಗೆ

ಬಲೆಗಂಟಿದ ಚಿಮಣಿಯೇನೋ ಬಹು ಸುಂದರ
ಜತೆಗೆ ಬಲುಭಾರ ಮನ ನಿರಾಕಾರ
ಭುಗಿಲೇಳುವ ಹೊಗೆಯ ದಬ್ಬಲು
ಬಲವಿಲ್ಲದ ಇವಳು
ಎದಿರಾದ ಮಾಘ ಮಾಸದ
ಗಾಳಿಗೆ ಉಸಿರುಕಟ್ಟಿ ತಲ್ಲಣಿಸುತ್ತಾಳೆ
ವಸಂತದೊಸಗೆಯ ನೆನೆದು
ಅಂಗಳದಿ ಅರಳಿದ ಚಿತ್ತಾರ ಚಿತ್ತದಲಿನಿಂದು
ಮುಖಕೆ ಸೆರಗಗಾಳಿ ಹಾಕಿ ಪುಳಕಗೊಳ್ಳುತ್ತಾಳೆ

ಅಡುಗೆಯಂಗಳದಿ ತೆರೆದ ಕಿಟಕಿಯ
ಸರಳಿಗೆ ಮುಖವೊಡ್ಡುತ್ತಾಳೆ
ಎಟಕುವ ರೆಂಬೆಯೊಂದರ
ಹೂತಡವಿ ಮುತ್ತಿಟ್ಟು
ಮರುಮೂಡಿ ನಗುತ್ತಾಳೆ

ಎದೆಯ ಹಿಡಿಯಾಗಿಸಿ ಕಿವಿಗೆ ಕೈಯಾನಿಸಿ
ಅಮರಲೆಗಳ ಸದ್ದಾಲಿಸುತ್ತಾಳೆ
ಆಗಸದಿ ಕಣ್ಣು ಕೀಲಿಸಿ
ಬಿಸಿಲ ಹಸೆಗೆ ರೆಕ್ಕೆ ಬಡಿದು
ಹಾರುವ ಹಕ್ಕಿಯ ಕಂಡು ತಣಿಯುತ್ತಾಳೆ

ವಾಹನದ ಬೆನ್ನಿಂದೆ ಗೆರೆಯೆಳೆದ
ಹಳಿಯಂತ ಬಿಳಿ ಸಾಲು
ಕರಗುವ ಕೌತುಕಕೆ ಪೆಚ್ಚಾಗುತ್ತಾಳೆ

ಹಿತ್ತಲ ಬೇಲಿಯಲಿ ಫಲಿತ ಸೀಬೆಯ
ಕುಕ್ಕಿ ಕುಕ್ಕಿ ತಿನ್ನುವ ಗಿಣಿಕೊಕ್ಕ ನಿರುಕಿಸಿ
ಸೀತೆ ಅಹಲ್ಯೆ ಊರ್ಮಿಳೆಯರ
ವ್ಯಥೆಯ ಕತೆಯಲಿ ವಿರಮಿಸದೆ
ಭಾವಗಳ ಬಂಡೆಬ್ಬಿಸಿ
ಮೌನ ಮುರಿದು ಮಾತಾಗುತ್ತಾಳೆ.

ಸುಶೀಲಾ ಸೋಮಶೇಖರ್
ಸಕಲೇಶಪುರ.

ನಿಮಗಿದು ಗೊತ್ತೆ ?

ಪ್ರತಿ 18 ನಿಮಿಷಕ್ಕೆ 1 ವರದಕ್ಷಿಣೆ ಸಾವು

ಪ್ರತಿ 59 ನಿಮಿಷಕ್ಕೆ 1 ಲೈಂಗಿಕ ಹಿಂಸೆ

ಪ್ರತಿ 34 ನಿಮಿಷಕ್ಕೆ 1 ಅತ್ಯಾಚಾರ

ಪ್ರತಿ 12 ನಿಮಿಷಕ್ಕೆ 1 ಹಿಂಸಾ ಪ್ರಕರಣ

ಮಾನವ ಹಕ್ಕುಗಳು ಹಾಗೂ ಮಹಿಳಾ ಸಶಕ್ತತೆ.

(ಭಾರತದ ಮಾಜಿ ರಾಷ್ಟ್ರಪತಿ ಕೆ.ಆರ್ ನಾರಾಯಣನ್ ರವರು ನ್ಯಾಯಮೂರ್ತಿ ಸುನಂದಾ ಭಂಡಾರೆ ಸ್ಮಾರಕ ಫೌಂಡೇಶನ್ ಏರ್ಪಡಿಸಿದ್ದ ಸಮಾರಂಭದಲ್ಲಿ ಮಾಡಿದ ಭಾಷಣದ ಸಂಗ್ರಹಾನುವಾದ.)

ಇಂದು ನಿಮ್ಮೊಂದಿಗಿದ್ದು, ನ್ಯಾಯಮೂರ್ತಿ ಸುನಂದಾ ಭಂಡಾರೆ ಸ್ಮಾರಕ ಫೌಂಡೇಶನ್ ಏರ್ಪಡಿಸಿರುವ "ಮಾನವ ಹಕ್ಕುಗಳು ಹಾಗೂ ಮಹಿಳಾ ಸಶಕ್ತತೆ" ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಸಂತೋಷವಾಗುತ್ತಿದೆ. ಅಪಾರ ಬುದ್ಧಿಮತ್ತೆಯ ಸುನಂದಾ ಭಂಡಾರೆ ನ್ಯಾಯವಾದಿ ವೃತ್ತಿ ಸ್ವೀಕರಿಸಿ, ದೆಹಲಿಯ ಉಚ್ಚನ್ಯಾಯಾಲಯದಲ್ಲಿ ನ್ಯಾಯಾಧೀಶರ ಸ್ಥಾನಕ್ಕೆ ಏರಿದ್ದು ಅವರ ಅಪ್ರತಿಮ ವ್ಯಕ್ತಿತ್ವವನ್ನು ಸಂಕೇತಿಸುತ್ತದೆ. ಮಹಿಳಾ ಸಶಕ್ತತೆಯ ದೃಷ್ಟಿಯಿಂದ ನೋಡಿದಾಗ, ಸುನಂದಾಭಂಡಾರೆ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾದದ್ದು; ಲಿಂಗ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ನಮ್ಮ ದೇಶದ ಎಲ್ಲಾ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಅವರು ಕೊಟ್ಟ ತೀರ್ಪುಗಳನ್ನು ಹಾಗೂ ಆಕೆಯ ಬರವಣಿಗೆ, ಮಹಿಳೆಯರನ್ನು ಮೇಲ್‌ಸ್ತರಕ್ಕೆ ಒಯ್ಯುವ ಪ್ರಕ್ರಿಯೆಗೆ ಅವರ ದೃಷ್ಟಿಕೋನ ಸಹಾಯಕವಾಗಿತ್ತೆಂಬುದು ತಿಳಿದು ಬರುತ್ತದೆ. "ಸ್ವಾತಂತ್ರ್ಯ ಹಾಗೂ ಹಕ್ಕುಗಳನ್ನು ಉತ್ತಮಗೊಳಿಸುವುದು ನಮ್ಮ ಜೀವನದ ಆದರ್ಶವಾಗಿತ್ತು. ಈ ದೃಷ್ಟಿಕೋನವು ನಮ್ಮ ದೇಶದ ಮಹಿಳಾ ಚಳುವಳಿಯ ಭಾಗವೇ ಆಗಿದೆ. ಸಮಾಜದಲ್ಲಿ ಮಹಿಳೆಯರಿಗೆ ನ್ಯಾಯ ಒದಗಿಸುವ ಧ್ಯೇಯೋದ್ದೇಶವನ್ನು ಇಟ್ಟುಕೊಂಡಿದ್ದ ಸುನಂದಾರವರ ಆಶಯವನ್ನು ದೇಶದಲ್ಲಿ ಪ್ರಸಾರ ಮಾಡಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿರುವ ದಿ॥ ಸುನಂದಾರ ಪತಿ ಮುರಳೀಧರ ಭಂಡಾರೆ, ಮಗಳು ಮನಾಲಿ ಮತ್ತು ಸು.ಭಂ.ಫೌ.ಗೆ. ನನ್ನ ಅಭಿನಂದನೆಗಳು ಸಲ್ಲುತ್ತವೆ.

ಸುನಂದಾ ಅವರ ನೆನಪು ನನ್ನ ಮನಃ ಪಟಲದಲ್ಲಿ ಹಸಿಯಾಗೇ ಇರುವುದರಿಂದ ನನ್ನ ಮೊದಲ ಶ್ರದ್ಧಾಂಜಲಿ ಅವರಿಗೆ ಸಲ್ಲುತ್ತದೆ. ನ್ಯಾ.ಸುನಂದಾ ತಮ್ಮ ಒಂದು ಲೇಖನ "ಸಮಾಜ, ಕಾನೂನು ಹಾಗೂ ಲಿಂಗಸಮಾನತೆ"ಯಲ್ಲಿ ಕೆಳಹಂತದ ಮಹಿಳೆಯರು ತಾರತಮ್ಯಕ್ಕೆ ಒಳಗಾಗುವ ಕಾರಣವನ್ನು ಕುರಿತು.....

"ಭಾರತದಲ್ಲಷ್ಟೇ ಅಲ್ಲ ಇಡೀ ವಿಶ್ವದಲ್ಲೇ ಮಹಿಳೆ ಮತ್ತು ಪುರುಷರ ನಡುವೆ ಸಮಾನತೆಯನ್ನು ತರಲು ನಿರಂತರವಾಗಿ ಶ್ರಮಿಸಬೇಕಾಗಿದೆ. ಈ ಕಾರ್ಯವನ್ನು ಯುಕ್ತಿಯಿಂದ ಸಫಲಗೊಳಿಸುವುದು ಗುರಿಯಾಗಿದೆ" ಎಂದಿದ್ದಾರೆ.

ನಮ್ಮ ದೇಶದಲ್ಲಿ ಈ ಭೇದಭಾವ ಮುಂದುವರೆದಿರುವುದಕ್ಕೆ ಮುಖ್ಯವಾದ ಕಾರಣಗಳೆಂದರೆ, ಮಹಿಳೆಯರ ಬಗ್ಗೆ ಸಮಾಜದಲ್ಲಿ ಗೌರವಾಭಿಮಾನಗಳಿರದ ಭಾವನೆ ಇರುವುದು ಹಾಗೂ ಮೂಲಭೂತ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಪರಾಧೀನೆಯಾಗಿರುವುದೇ ಆಗಿದೆ. ಹೆಣ್ಣಿನ ಶೋಷಣೆಗೆ ಸಂಬಂಧಿಸಿದಂತೆ ಕಾನೂನುಗಳನ್ನು ತರುವುದಕ್ಕಿಂತ ಮುಂಚೆ, ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಧಾವಿಸುವುದಕ್ಕಿಂತ ಮುಂಚೆ, ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ಪೂರ್ವಾಗ್ರಹಗಳನ್ನು ಇದಕ್ಕೆ ಆಧಾರವಾಗಿರುವ ದೃಷ್ಟಿಕೋನವನ್ನು ಹಾಗೂ ಮಹಿಳೆಯರ ಬಗ್ಗೆ ಸಮಾಜದಲ್ಲಿರುವ ನಿರ್ಲಕ್ಷ್ಯ ಭಾವನೆಯನ್ನು ನಿರ್ಮೂಲನೆ ಮಾಡಲು ನಾವು ದನಿ ಎತ್ತಬೇಕಾಗಿದೆ.

ಸ್ವಾತಂತ್ರ್ಯ, ಸಮಾನತೆ ಹಾಗೂ ನ್ಯಾಯಗಳನ್ನು ಘೋಷಿಸಿದ ಕ್ರಾಂತಿಗಳಿಗೆ ಮನುಷ್ಯಕುಲ ಸಾಕ್ಷಿಯಾಗಿ ನಿಂತಿದೆ. ಆದರೆ ಈ ಯಾವುದೇ ಕ್ರಾಂತಿ ಮಹಿಳೆಯರ ಹಕ್ಕುಗಳ ಬಗ್ಗೆ ಗಮನಹರಿಸಿದ್ದಿಲ್ಲ. ಫ್ರೆಂಚ್ ಕ್ರಾಂತಿಗೆ ರೂಸೋನ ಆದರ್ಶ ಪ್ರೇರಣೆಯಾಗಿತ್ತು. ಆತ 1762ರಲ್ಲಿ.... "ಪೂರ್ತಿಯಾಗಿ ತಿಳುವಳಿಕೆ ಇಲ್ಲದಿರುವುದು ಹೆಂಗಸರಿಗೆ ಲಾಭದಾಯಕವಾಗಿದೆ. ..." ಎಂದು ಹೇಳಿ, ಅವರನ್ನು ರಾಜಕೀಯದಿಂದ ಹೊರಗಿಡಬೇಕೆಂದು ಪ್ರತಿಪಾದಿಸಿದ. ಆತನ "ಸಾಮಾನ್ಯ ವಿಲ್ ಯೋಜನೆ" ಅಡಿಯಲ್ಲಿ ಪುರುಷರ ಉಯಿಲಿನಲ್ಲಿ ಹೆಂಗಸರು ಬಾರದೇ ಹೋದರು. 1789ರಲ್ಲಿ ಫ್ರೆಂಚ್ ಕ್ರಾಂತಿಯಾದ 20 ವರ್ಷಗಳ ನಂತರ ಪುರುಷರ ಹಾಗೂ ನಾಗರೀಕರ ಹಕ್ಕುಗಳ ಘೋಷಣೆ ಮಾಡಲಾಯಿತು.

ಇದರಲ್ಲಿ ರೂಸೋನ ವಿಚಾರವನ್ನು ಕಾನೂನು ಬದ್ಧ ಗೊಳಿಸಲಾಯಿತು; ಪುರುಷರ ಹಾಗೂ ಗುಲಾಮರಲ್ಲದವರ ಹಕ್ಕುಗಳನ್ನು ಖಾತ್ರಿ ಪಡಿಸಲಾಯಿತು. ಖೇದದ ಸಂಗತಿಯೆಂದರೆ ಪ್ರಪಂಚದಲ್ಲೇ ಹೊಸತನ್ನು ಹುಟ್ಟಿಹಾಕಿದ ಫ್ರೆಂಚ್‌ಕ್ರಾಂತಿ, ಹಾಗೂ ಅದು ಪ್ರತಿಪಾದಿಸಿದ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಕಲ್ಪನೆಯಿಂದ ಮಹಿಳೆಯರನ್ನು ಹೊರಗಿಡಲಾಯಿತು. ಫ್ರೆಂಚ್ ಕ್ರಾಂತಿಯಿಂದ ಬಂದ ಹೊಸ ಬೆಳಗಿನಲ್ಲಿ ಮನುಷ್ಯ ಕುಲ ಸಂತೋಷ ಪಡುತ್ತಿದ್ದ ಕಾಲದಲ್ಲೂ ಮಹಿಳೆಯರನ್ನು ಕುರಿತ ಪಕ್ಷ ಪಾತಿ ದೃಷ್ಟಿಕೋನ ಮುಂದುವರೆಯಿತು. ಇದು ನೆಪೋಲಿಯನ್ ಕಾಲದಲ್ಲೂ ಬಲಗೊಂಡು, ಆಗ ರೂಪಿಸಲಾದ ನಾಗರಿಕ ಸಂಹಿತೆಯಲ್ಲಿ ಪ್ರತಿ ಫಲನಗೊಂಡಿತು. ಈ ನಾಗರೀಕ ಸಂಹಿತೆಯ ಕರ್ತೃಗಳಲ್ಲಿ ಒಬ್ಬನಾದ ಪೋರ್ಟಾಲಿಸ್.

"**ನಾವು ಲಿಂಗ ಸಮಾನತೆ ಹಾಗೂ ಲಿಂಗ ಅದ್ವತೆಯ ಬಗ್ಗೆ ಬಹುಕಾಲದಿಂದ ಚರ್ಚೆ ಮಾಡುತ್ತಾ ಬಂದಿರುವುದರಲ್ಲಿ ಏನೂ ಹುರುಳಿಲ್ಲ**" ಎಂದು ಬಹಿರಂಗವಾಗಿ ಘೋಷಿಸಿಬಿಟ್ಟ. ಹೆಂಗಸರ ಬಗೆಗಿನ ತನ್ನ ಪೂರ್ವಾಗ್ರಹವನ್ನು ಮಂಡಿಸಿದ ಆತ ಮುಂದುವರೆದು

"**ಹೇಗೆ ಸ್ವಾಭಾವಿಕವಾಗಿಯೇ ಸ್ತ್ರೀ - ಪುರುಷರ ಸ್ವಭಾವದ ನಡುವಣ ವ್ಯತ್ಯಾಸದಿಂದಾಗಿ ಅವರ ಹಕ್ಕುಗಳು ಹಾಗೂ ಕೆಲಸದಲ್ಲಿ ತಾರತಮ್ಯ ಮಾಡುವುದನ್ನು ಸಮರ್ಥನೀಯ**" ಎಂದೂ ಹೇಳಿದ.

ಫ್ರೆಂಚ್ ಕ್ರಾಂತಿಯಲ್ಲಿ ಕಂಡು ಬಂದತ ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯಲ್ಲೂ ಸ್ವಾತಂತ್ರ್ಯಗಳು ಪುರುಷರಿಗಷ್ಟೇ ಸಂಬಂಧಿಸಿರುವ ಭಾವನೆಯು ಬೇರೂರಿದೆ. ಅಮೇರಿಕಾದ ಸ್ವಾತಂತ್ರ್ಯ ಘೋಷಣೆ ನೀಡಿದ ಹಕ್ಕುಗಳನ್ನು ಸಂಪತ್ತನ್ನು ಹೊಂದಿರದ ಪುರುಷರಿಗೆ ಮಹಿಳೆಯರಿಗೆ. ಹಾಗೂ ಗುಲಾಮರಿಗೆ ನಿರಾಕರಿಸಲಾಯಿತು.

ಅಮೇರಿಕಾ ಸ್ವಾತಂತ್ರ್ಯ ಘೋಷಣೆಯ ಮುಖ್ಯ ತಿರುಳು, "ಎಲ್ಲಾ ಮಾನವರನ್ನು ಸಮಾನವಾಗಿ ಸೃಷ್ಟಿಸಲಾಗಿದೆ ಎಂಬುದಾಗಿತ್ತು. ಇದನ್ನು ಸಿದ್ಧಪಡಿಸಿ ದವರಲ್ಲಿ ಒಬ್ಬರಾದ ಜಾನ್ ಅದಂ ಎಂಬುವರಿಗೆ ಅವರ ಪತ್ನಿ ಮಹಿಳೆಯರನ್ನು ಮರೆಯಬೇಡಿರಿ" ಎಂದು ಎಚ್ಚರಿಸಿದ್ದಳೆಂಬುದು ಗಮನ ಸೆಳೆಯುವ ಸಂಗತಿಯಾಗಿದೆ, ಆಕೆ ಮುಂದುವರೆದು,"ನಮ್ಮ ದನಿಗೆ ಜಾಗವಿಲ್ಲದ , ನಮಗೆ ಪ್ರಾತಿನಿಧ್ಯವಿಲ್ಲದ ಕಾನೂನುಗಳನ್ನು ನಾವು ಪಾಲಿಸಬೇಕಿಲ್ಲ" ಎಂದು ಕೆಣಕಿದ್ದಳು. ಮಹಿಳೆಯರ ಹಕ್ಕುಗಳಿಗಾಗಿ ದನಿ ಎತ್ತಿದ ಪತ್ನಿಯ ಆಗ್ರಹ ಕಂಡು ಆಶ್ಚರ್ಯಪಟ್ಟ ಜಾನ್ ಅದಂ,

"ನಮ್ಮ ಹೋರಾಟದಿಂದ ಸರ್ಕಾರದ ಹಿಡಿತ ಎಲ್ಲೆಲ್ಲೂ ಸಡಿಲವಾಗಿದೆಯೆಂದು, ಮಕ್ಕಳು ಮತ್ತು ತರಬೇತಿ ಶಿಬಿರಾರ್ಥಿಗಳುಅವಿಧೇಯರಾಗಿರುವರೆಂದು, ಕಾಲೇಜುಗಳಲ್ಲಿ ತುಮುಲ ಅಶಾಂತಿಯು ಕಾಣಿಸಿಕೊಳ್ಳುತ್ತಿದೆಯೆಂದು, ರೆಡ್ ಇಂಡಿಯನ್ನರು ತಮ್ಮ ಒಡೆಯರನ್ನು ಧಿಕ್ಕರಿಸುತ್ತಿದ್ದಾರೆಂದು ನಮಗೆ ವರದಿಗಳು ಬರುತ್ತಿವೆ. ಈಗ ಬಂದಿರುವ ನಿನ್ನ ಪತ್ರದಿಂದ, ಈ ಎಲ್ಲರಿಗಿಂತ ಹೆಚ್ಚು ಸಂಖ್ಯೆಯಲ್ಲಿರುವ ಮತ್ತು ಶಕ್ತಿಶಾಲಿಯಾಗಿರುವಂತ ಒಂದು ಸಮುದಾಯದಲ್ಲೂ ಅತೃಪ್ತಿ ಆಳವಾಗಿ ಬೇರೂರಿದೆ ಎಂಬುದು ಮೊಟ್ಟ ಮೊದಲ ಬಾರಿಗೆ ತಿಳಿದು ಬರುತ್ತಿದೆ" ಎಂದು ಪ್ರತಿಕ್ರಿಯಿಸಿದ.

ಮಹಿಳೆಯು ಇಂದಿಗೂ "ಪೂರ್ವಾಗ್ರಹದಿಂದ ಕೂಡಿದ ನಡೆತೆಗೆ ಹಾಗೂ ವಾತಾವರಣಕ್ಕೆ" ಬಲಿ ಪಶುಗಳಾಗಿ, ದಮನಿತರಾಗಿದ್ದಾರೆ ಎಂಬುದನ್ನು ನೋಡಿದರೆ ಅತ್ಯಂತ ವಿಷಾದವಾಗುತ್ತದೆ.

+++

ವಿಶ್ವಸಂಸ್ಥೆಯ ಶಾಸನ (Charter) ದಲ್ಲಿ ಅದನ್ನು ಅಂಗೀಕರಿಸುವಾಗ ಸ್ತ್ರೀ ಪುರುಷರಿಗೆ ಸಮಾನ ಹಕ್ಕು ಎಂಬ ಪದಪುಂಜವೂ ಇರಲಿಲ್ಲ ; ಲಿಂಗದದ ಆಧಾರದಲ್ಲಿ ತಾರತಮ್ಯವನ್ನು ಪ್ರತಿಭಂಧಿಸುವ ಪ್ಯಾರ ಕೂಡ ಇರಲಿಲ್ಲ ಎಂಬುದು ಗಮನಾರ್ಹ. ಆದರೆ ಈ ಸಭೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಇದನ್ನು ಬಲವಾಗಿ ವಿರೋಧಿಸಿದ್ದರಿಂದಲೇ, ಲಿಂಗ ತಾರತಮ್ಯವಿಲ್ಲದೇ ಎಲ್ಲಾ ಮನುಷ್ಯರ ಹಕ್ಕುಗಳನ್ನು ವಿಶ್ವ ಸಂಸ್ಥೆಯ ಶಾಸನ ರಕ್ಷಿಸಬೇಕೆಂದು ಒತ್ತಾಯಿಸಿದರು. ಈ ಮಹಾನ್ ಧ್ಯೇಯವನ್ನು ಸಾಧಿಸಿದವರು ವಿಶ್ವಸಂಸ್ಥೆಯ ಶಾಸನ ಸಭೆಯಲ್ಲಿ ಹಾಜರಿದ್ದ ಮಹಿಳಾ ಪ್ರತಿನಿಧಿಗಳು. ಅವರ ಅಪಾರ ಕಾರ್ಯಶೀಲತೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದ ಒಂದು ಶಾಸನದಲ್ಲಿ ಸ್ತ್ರೀ-ಪುರುಷರ ನಡುವೆ ಸಮಾನತೆಯನ್ನು ಎತ್ತಿಹಿಡಿದಿರುವುದು ದಾಖಲಾಗಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಇದು ಲಿಂಗನ್ಯಾಯದ

ಬಗೆಗಿನ ಈ ದಾಖಲೆ ಮನುಷ್ಯ ಇತಿಹಾಸದಲ್ಲೇ ಅಪೂರ್ವವಾದುದು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಸಂದರ್ಭದಲ್ಲೂ ಮಹಿಳಾ ಪ್ರತಿನಿಧಿಗಳು ಪ್ರತಿಭಟಿಸಿದ್ದರಿಂದ ಅದು ಪುರುಷ ಕೇಂದ್ರಿತವಾಗುಳಿಯದೆ "ಎಲ್ಲಾ ಮನುಷ್ಯರು ಸಹೋದರರು" ಎಂಬಂಥ ಪುರುಷವಾಚಕಗಳನ್ನು ಲಿಂಗ ಸೂಕ್ಷ್ಮತೆ ದೃಷ್ಟಿಕೋನದಿಂದ ಬದಲಾಯಿಸಿ ಅಳವಡಿಸಿಕೊಳ್ಳ -ಲಾಯಿತು. 1995ರ ಬೀಜಿಂಗ್ ಸಮಾವೇಶವು "ಮಹಿಳೆಯರ ಹಕ್ಕುಗಳು ಮಾನವ ಹಕ್ಕುಗಳು " ಎಂಬ ಐತಿಹಾಸಿಕ ಘೋಷಣೆಯನ್ನು ಪ್ರಕಟಿಸಿದ ಬಳಿಕ ಮಾನವ ಹಕ್ಕುಗಳಿಗಾಗಿ ಹಾಗೂ ಮಹಿಳಾ ಸಶಕ್ತತೆಗಾಗಿ ನೆಡೆದ ಹೋರಾಟವು ನಿರ್ಣಾಯಕ ಹಾಗೂ ಹಿಂದೂಡಲಾಗದ ಘಟ್ಟ ತಲುಪಿತು.

"ಮಹಿಳಾ ಹಕ್ಕುಗಳು ಮಾನವ ಹಕ್ಕುಗಳು" ಎಂಬ ಹೇಳಿಕೆಯು ತನ್ನ ಅರ್ಥವ್ಯಾಪ್ತಿಯೊಳಗೆ ಕೇವಲ, ನಾಗರೀಕ ಹಾಗೂ ರಾಜಕೀಯ ಹಕ್ಕುಗಳನ್ನಷ್ಟೇ ಒಳಗೊಂಡಿರದೆ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಕ್ಕುಗಳನ್ನು ಒಳಗೊಂಡಿದೆ. ಎಲ್ಲಾ ಮಾನವಹಕ್ಕುಗಳನ್ನೂ ವಿಶೇಷವಾಗಿ ಪ್ರಸ್ತಾಪಿಸುವ ವಿಶಾಲ ವ್ಯಾಖ್ಯೆಯು ಇನ್ನೂ ಈಡೇರಬೇಕಾಗಿದೆ. ಮುಂದುವರೆದ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳಿಗಾಗಿ ದನಿ ಎತ್ತಿರುವ ಬಹುತೇಕ ತಥಾಕಥಿತ ಹೋರಾಟಗಾರರೂ ಈ ವಿಶಾಲ ವ್ಯಾಖ್ಯೆಯನ್ನು ಒಪ್ಪುವ ಮಟ್ಟಕ್ಕೆ ಬಂದಿಲ್ಲ. ನಾಗರೀಕ ಹಾಗೂ ರಾಜಕೀಯ ಹಕ್ಕುಗಳ ವ್ಯಾಪಕತೆಯನ್ನು ವಿಸ್ತರಿಸಲು ತೋರಲಾದ ಹಿಂಜರಿತವು ರೋಮ್‌ನಲ್ಲಿ ನಡೆದ ವಿಶ್ವ ಆಹಾರ ಸಮಿತಿಯ ಘೋಷಣೆಯಲ್ಲಿ ಎದ್ದು ಕಂಡಿತು. ಅಲ್ಲಿ ಕೆಲವು ಮುಂದುವರೆದ ದೇಶಗಳು ಅಗತ್ಯ ಪ್ರಮಾಣದಲ್ಲಿ ಆಹಾರ ಪಡೆಯುವುದು ಅಥವಾ ಹಸಿವಿನಿಂದ ಮುಕ್ತವಾಗುವುದು ಮೂಲಭೂತ ಹಕ್ಕು ಎಂದು ಘೋಷಿಸುವುದನ್ನು ಪ್ರತಿರೋಧಿಸಿದವು. ಹಸಿವಿನಿಂದ ಮುಕ್ತವಾಗುವ ಹಕ್ಕು ಹೊಂದುವುದು ಒಂದು ಧ್ಯೇಯ ; ಇದನ್ನು ನಿಧಾನವಾಗಿ ಸಾಧಿಸಬಹುದೇ ಹೊರತು, ಇಂತಿಷ್ಟೇ ಸಮಯದಲ್ಲಿ ಇದನ್ನು ಜಾರಿಯಲ್ಲಿ ತರುವ ನಿರ್ಬಂಧವನ್ನು ಅಂತರರಾಷ್ಟ್ರೀಯ ಸಮುದಾಯದ ಸದಸ್ಯರ ಮೇಲೆ ಹೇರಲಾಗದೆಂದು ಅವು ಮತ್ತೆ ಮತ್ತೆ ವಾದಿಸಿದವು. ಇದು ಹೃದಯ ಹೀನವಾದದ್ದು. 800 ಮಿಲಿಯನ್‌ಗಿನ್ನಾ ಹೆಚ್ಚು ಮಂದಿ ಬಡತನದ ರೇಖೆಗಿಂತಾ ಕೆಳಗೆ ಬದುಕುತ್ತಿರುವಾಗ ಹೀಗೆ ವಾದಿಸುವುದು ಮುಂದುವರೆದ ರಾಷ್ಟ್ರಗಳ ಹೃದಯ ಶೂನ್ಯತೆಯನ್ನು ಬಯಲಿಗಿಡುತ್ತದೆ. ಬಡತನಕ್ಕೆ ವಿಶ್ವಾದ್ಯಂತ ಬರಗಾಲದ ಮುಖವೂ ಅಂಟಿದೆ. "ಇಡೀ ಪ್ರಪಂಚಕ್ಕೆ ಅನ್ನದಾತರೆಂದು ಉಣಿಸುವವರು ಮಹಿಳೆಯರೇ" ಎಂಬ ಹೃದಯಾಂತರಾಳದ ಅಭಿಪ್ರಾಯ ಸಾರ್ವತ್ರಿಕವಾಗಿದೆ.

ಬೀಜಿಂಗ್‌ನಲ್ಲಿ ಮಾಡಲಾದ ಮಹಿಳಾ ಹಕ್ಕುಗಳು ಮಾನವ ಹಕ್ಕುಗಳು ಎಂಬ ಘೋಷಣೆ ಮಹಿಳೆಯರ ಏಳ್ಗೆಯ ದೃಷ್ಟಿಯಿಂದ ಮಾನವ ಕುಲದ ಚರಿತ್ರೆಯಲ್ಲೇ ಅತಿ ಮುಖ್ಯವಾದ ಕ್ರಾಂತಿ ಕಾರಿಯಾದುದು. ವಂಚಿತಗೊಂಡ ಮಾನವತೆಗೇ ಈ ಘೋಷಣೆಯು ಏಳ್ಗೆಯ ಹಾಗೂ ಸಶಕ್ತತೆಯ ಚೈತನ್ಯವನ್ನು ನೀಡಿದೆ. ಈ ಹಕ್ಕುಗಳನ್ನು ಮಹಿಳೆಯರಿಗೆ ಒದಗಿಸುವುದರಿಂದ ಮಹಿಳೆಯರನ್ನಷ್ಟೇ ಸಶಕ್ತಗೊಳಿಸಿದಂತಾಗದೆ ಪ್ರತಿಯೊಬ್ಬರ ಮಾನವ ಹಕ್ಕುಗಳನ್ನು ಖಾತ್ರಿ ಪಡಿಸಿದಂತಾಗುತ್ತದೆ. ವಾಸ್ತವದಲ್ಲಿ,' ರಾಜಕೀಯ ಹಕ್ಕು ಹಾಗೂ ಉದ್ಯೋಗದ ಹಕ್ಕಿನಂಥ ಪ್ರಮುಖ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹಕ್ಕು ನಿರಾಕರಿಸುವುದೆಂದರೆ, ನೈಜ ಅಭಿವೃದ್ಧಿ ಸಾಧಿಸುವ ನಮ್ಮ ಪ್ರಯತ್ನಗಳನ್ನು ನಾವೇ ಹುಸಿಗೊಳಿಸಿದಂತಾಗುತ್ತದೆ. ಚರಿತ್ರೆಯಲ್ಲಿ ಮಹಿಳೆಯರಿಗೆ ಈ ಹಕ್ಕುಗಳನ್ನು ನಿರಾಕರಿಸಿದ್ದಕ್ಕಾಗಿ ಮಾನವ ಕುಲ ಈಗಾಗಲೇ ಅಪಾರ ಬೆಲೆ ತೆತ್ತಿದೆ. ಮಹಿಳೆಯರ ಸ್ಥಾನಮಾನವನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಿ ವರದಿ ಮಂಡಿಸಿದ 1995ರ ಮಾನವ ಅಭಿವೃದ್ಧಿ ವರದಿ....."ಅನೇಕ ಆರ್ಥಿಕ ಹಾಗೂ ರಾಜಕೀಯ ಅವಕಾಶಗಳಿಂದ ಮಹಿಳೆಯರನ್ನು ದೂರವಿಡುತ್ತಾ ಹೋಗವುದೆಂದರೆ ಆಧುನಿಕ ಪ್ರಗತಿಗೆ ದಕ್ಕೆಯನ್ನುಂಟು ಮಾಡುತ್ತಾ ಹೋಗುವುದೆಂದೇ ಅರ್ಥ" ಎಂದು ಸರಿಯಾಗೇ ಗುರುತಿಸಿದೆ.

ಇಲ್ಲಿ ಮಹಾತ್ಮ ಗಾಂಧಿಯವರನ್ನು ಸ್ಮರಿಸುವುದು ಅತಿ ಮುಖ್ಯ ಏಕೆಂದರೆ ಆಧುನಿಕ ಸಿದ್ಧಾಂತ ನಿರೂಪಕರಿಗಿಂತ ಎಷ್ಟೋ ದಶಕಗಳ ಮುಂಚೆ, ಮಹಿಳೆಯರಿಗೆ ದಕ್ಕಬೇಕಾದ ಸಮಾನ ಹಕ್ಕಿನ ಬಗ್ಗೆ ಅವರು ಮಾತನಾಡಿದ್ದಾರೆ.

"ಮಹಿಳೆಯರನ್ನು ಪುರುಷನ ಅರ್ಧಾಂಗಿ ಎಂದು ತಿಳಿಯಲಾಗಿದೆ. ಎಲ್ಲಿಯವರೆಗೆ ಆಕೆಗೆ ಕಾನೂನಿನಲ್ಲಿ ಪುರುಷನಷ್ಟೇ ಸಮಾನ ಹಕ್ಕು ದೊರಕುವುದಿಲ್ಲವೊ, ಎಲ್ಲಿಯವರೆಗೆ ಹುಡುಗಿಯು ಹುಟ್ಟಿದಾಗ ಹುಡುಗ ಹುಟ್ಟಿದಾಗ ಸಿಗುವಷ್ಟೇ ಪ್ರೀತಿ - ವಾತ್ಸಲ್ಯದ ಸ್ವಾಗತ ಸಿಗುವುದಿಲ್ಲವೋ ಅಲ್ಲಿಯವರೆಗೆ ಭಾರತದ ಸಮಾಜ

ಪಾರ್ಶ್ವ ವಾಯು ತಗಲಿದ ರೋಗದಿಂದ ಬಳಲುತ್ತಿದೇ ಎಂದೇ ಅರ್ಥ. ಮಹಿಳೆಯರನ್ನು ಹತ್ತಿಕ್ಕುವುದೆಂದರೆ ಅಹಿಂಸೆಯನ್ನು ನಿರಾಕರಿಸಿದಂತೆ" ಎಂದು 1940 ರಲ್ಲೇ ಬರೆದಿದ್ದರು.

ಮೂಲಭೂತ ರಾಜಕೀಯ ಹಕ್ಕನ್ನು ಪಡೆದುಕೊಳ್ಳಲು ಮಹಿಳೆಯರು ಅಪಾರ ಶ್ರಮವಹಿಸಿ ಹೋರಾಡಿದ್ದಾರೆ.

20ನೇ ಶತಮಾನವನ್ನು ಮಹಿಳೆಯರ ಶತಮಾನವೆಂದು, ಮತ ಚಲಾಯಿಸುವ ಹಕ್ಕನ್ನು ತಮಗೆ ಪಡೆದುಕೊಳ್ಳಲು ಹೋರಾಡಿದ ಶತಮಾನ ಎಂದು ಗುರುತಿಸಲಾಗಿದೆ. ಆದರೂ ಬಹಳಷ್ಟು ದೇಶಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಇಂದಿಗೂ ನಿರಾಕರಿಸಲಾಗಿದೆ.

ತಮ್ಮ ಶಾಸಕಾಂಗಗಳಲ್ಲಿ ಶೇ. 40 ರಷ್ಟು ಪ್ರಾತಿನಿಧ್ಯವನ್ನು ಮಹಿಳೆಯರಿಗೆ ಒದಗಿಸಿರುವ ಸ್ಕಾಂಡಿನೇವಿಯಾರಾಷ್ಟ್ರಗಳನ್ನು ಹೊರತುಪಡಿಸಿದರೆ ಇತರ ರಾಷ್ಟ್ರಗಳ ಶಾಸಕಾಂಗಗಳಲ್ಲಿ ಅವರಿಗೆ ದೊರೆತಿರುವುದು ಕೇವಲ ಶೇ.10ರ ಸರಾಸರಿ ಪ್ರಾತಿನಿಧ್ಯ. ಅತ್ಯಂತ ವಿಶಾಲವಾದ ರಾಜಕೀಯ ಕ್ಷೇತ್ರದಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರೆತಿರುವುದು ಮಹಿಳಾ ಸಶಕ್ತತೆ ಚರಿತ್ರೆಯಲ್ಲಿ ಕಾಣುವ ಶೋಚನೀಯ ವಾಸ್ತವ. ಈ ಗತಿಯಲ್ಲಿ ಮಹಿಳೆಯರಿಗೆ ರಾಜಕೀಯದಲ್ಲಿ ಪುರುಷರಿಗೆ ಸರಿಸಮಾನವಾದ ಪಾಲನ್ನು ಒದಗಿಸಲು ಇದೇ ಗತಿಯಲ್ಲಿ ಪ್ರಯತ್ನಿಸಿದರೆ ಕನಿಷ್ಠಪಕ್ಷ ಇನ್ನೂ 5 ಶತಮಾನಗಳಷ್ಟು ದೀರ್ಘ ಕಾಲ ಬೇಕಾಗುವುದೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಬಹು ಎಚ್ಚರಿಕೆಯಿಂದ ನಡೆಸಿರುವ ಅಧ್ಯಯನವು ಎಚ್ಚರಿಸುತ್ತದೆ.

ನಮ್ಮ ದೇಶದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಶೇ. 9ನ್ನು ಮೀರಿಲ್ಲ. ಭಾರತದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಟ ನೆಡೆಸುತ್ತಾ ಬಂದಿದ್ದರೂ, ರಾಜ್ಯಗಳ ವಿಧಾನ ಮಂಡಲಗಳಲ್ಲಿ ಅವರ ಸಂಖ್ಯೆ ಶೇ. 10ನ್ನು ದಾಟಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಟ ಕೈಗೊಂಡ ಸಮಯದಲ್ಲೇ ಮಹಾತ್ಮ ಗಾಂಧೀಜಿಯವರು ಪ್ರಜ್ಞಾಪೂರ್ವಕವಾಗಿ ಮಹಿಳೆಯರ ಬೆಂಬಲವನ್ನು ಪಡೆದುಕೊಂಡರು. ಅವರು 1929ರಲ್ಲಿ "ಮಹಿಳೆಯರಿಗೆ ಮತದಾನದ ಹಕ್ಕು ಹಾಗೂ ಸಮಾನವಾದ ಕಾನೂನು ಬದ್ಧ ಮನ್ನಣೆ ದೊರಕುವಂತಾಗಬೇಕು" ಎಂದು ಹೇಳಿದ್ದರು. 1930-ರಲ್ಲಿ ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿದ್ದ ಗಾಂಧೀಜಿಯವರನ್ನು ಭವಿಷ್ಯದಲ್ಲಿ ಭಾರತದ ಸಂಸತ್ತಿನಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ ಒದಗಿಸುವ ಅವಶ್ಯಕತೆಯ ಬಗ್ಗೆ ಪ್ರಶ್ನಿಸಲಾಯಿತು. ಆಗ ಅವರು ತಮ್ಮದೇ ಆದ ಧಾಟಿಯಲ್ಲಿ "ಭಾರತದ ಶಾಸಕಾಂಗದಲ್ಲಿ ಸೂಕ್ತ ಪ್ರಮಾಣದ ಪ್ರಾತಿನಿಧ್ಯವು ಮಹಿಳೆಯರಿಗೆ ದೊರಕದಿದ್ದರೆ ಅದನ್ನು ತಾವು ಬಹಿಷ್ಕರಿಸುವುದಾಗಿ ಉತ್ತರಿಸಿದರು". ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ಮಾನ್ಯ ಮಾಡಿದ ಸಂವಿಧಾನ ಜಾರಿಗೊಳಿಸುತ್ತಲೆ ಮಹಿಳೆಯರಿಗೆ ಮತದಾನದ ಹಕ್ಕು ಒದಗಿಸಲಾದದ್ದು ಸುಪ್ರಸಿದ್ಧ ಸಂಗತಿ. ಮಹಿಳೆಯರಿಗೆ ದೊರೆತ ಈ ಹಕ್ಕು ಹಾಗೂ ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಚಳುವಳಿಯಲ್ಲಿ ಮಹಿಳೆಯರು ಭಾಗವಹಿಸಿದುದ್ದರ ಫಲಿತಾಂಶವಾಗಿದೆ. ಮಹಾತ್ಮ ಗಾಂಧೀಜಿ 1925 ರಲ್ಲಿ "ಎಲ್ಲಿಯವರೆಗೆ ಭಾರತದ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವಂತಾಗುವುದಿಲ್ಲವೋ ಅಲ್ಲಿಯವರೆಗೆ ಈ ದೇಶಕ್ಕೆ ವಿಮೋಚನೆ ದೊರಕದು" ಎಂದು ಹೇಳಿದರು. ಅವರು ಇನ್ನೂ ಮುಂದುವರೆದು, ಎಲ್ಲಿಯವರೆಗೆ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಪಾಲುಗೊಂಡು ಅದನ್ನು ಶುಚಿಗೊಳಿಸುವುದಿಲ್ಲವೋ ಅಲ್ಲಿಯವರೆಗೆ ನಮಗೆ ಸ್ವರಾಜ್ಯ ಸಿಕ್ಕಲಿಕ್ಕಿಲ್ಲ, ಒಂದು ವೇಳೆ ಅದು ಸಿಕ್ಕಾರೂ, ಅಂಥ ಸ್ವರಾಜ್ಯ ನನಗೆ ಬೇಡ. ಏಕೆಂದರೆ ಮಹಿಳೆಯರು ಸಂಪೂರ್ಣವಾಗಿ ಭಾಗಿಯಾಗದೆ ಪಡೆದ ಸ್ವರಾಜ್ಯದಲ್ಲಿ ನನಗ್ಯಾವ ಆಸಕ್ತಿಯೂ ಇಲ್ಲ.

ರಾಷ್ಟ್ರಕವಿ ರವೀಂದ್ರನಾಥ್ ಟ್ಯಾಗೋರ್ ಕೂಡ "ಚರಿತ್ರೆಯ ಭಾಗ ಈ ಹಂತದಲ್ಲಿ ನಾಗರೀಕತೆಯು ಬಹುತೇಕವಾಗಿ ಪುರುಷ ಪ್ರಧಾನವಾಗಿದೆ. ಅಧಿಕಾರದ ಈ ನಾಗರಿಕತೆಯಲ್ಲಿ ಮಹಿಳೆಯರನ್ನು ಅಂಚಿಗೆ ದೂಡಲಾಗಿದೆ..." ಎಂದು ವ್ಯಥೆ ಪಡುತ್ತಾ, "ಈಗ ಕಾಲ ಬಂದಿದೆ, ಮಹಿಳೆಯರು ಈ ನಾಗರಿಕತೆಯೊಳಗೆ ತಮ್ಮ ಛಾಪು ಮೂಡಿಸಬೇಕಾಗಿದೆ. ನಿರ್ದಯೆ ಹಾಗೂ ಅವ್ಯಾಹತ ಪೈಪೋಟಿ ಪ್ರಧಾನವಾದ ಈ ಅಧಿಕಾರ ಯುಗದಲ್ಲಿ ಮಹಿಳೆಯರು ತಮ್ಮ ಅಪೂಜ್ಯ ಜೀವ ಸಿಂಚನಗೈಯ್ಯಬೇಕಾಗಿದೆ", ಎಂದು ಆಶಿಸಿದರು.

ನಮ್ಮ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಸಂಸತ್ತಿನ ಬಾಗಿಲನ್ನು ಮಹಿಳೆಯರಿಗೆ ತೆರೆದಿಡಬೇಕಾದ

ಅವಶ್ಯಕತೆಯ ಬಗ್ಗೆ ಸತತವಾಗಿ ಹೇಳಿದರು. ಅವರು 1950ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ಸಂಸತ್ತಿಗೆ ನಡೆಯುವ ಮುನ್ನ ಮುಖ್ಯ ಮಂತ್ರಿಗಳಿಗೆ ಬರೆದ ಪತ್ರದಲ್ಲಿ, "ನಾವು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಚುನಾಯಿತರಾಗುವಂತೆ ನೋಡಿಕೊಳ್ಳ ಬೇಕೆಂದು ಒತ್ತಿ ಹೇಳಿದರು. ಆದರೆ ಚುನಾವಣೆಯಲ್ಲಿ ಮಹಿಳಾ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗದಿದ್ದಾಗ ಅವರು ಮುಖ್ಯ ಮಂತ್ರಿಗಳಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ,

"ಮಹಿಳೆಯರು ಅತಿ ಕಡಿಮೆ ಸಂಖ್ಯೆಯಲ್ಲಿ ಸಂಸತ್ತಿಗೆ ಚುನಾಯಿತರಾಗಿರುವುದನ್ನು ನೋಡಿ ನನಗೆ ವ್ಯಥೆಯಾಗಿದೆ. ಮಹಿಳೆಯರು ಸಂಸತ್ತಿನಲ್ಲಿ ಹೆಚ್ಚಿನ ಪ್ರಾತಿನಿಧ್ಯ ಪಡೆಯುವಂತೆ ನೋಡಿಕೊಳ್ಳುವುದೆಂದರೆ ಅವರಿಗೆ ಉಪಕಾರ ಮಾಡದಂತೇನೂ ಅಲ್ಲ; ಅವರಿಗೆ ನ್ಯಾಯ ಒದಗಿಸಿದಂತೇನೂ ಅಲ್ಲ. ಬದಲಾಗಿ ನಮ್ಮ ರಾಷ್ಟ್ರ ಭವಿಷ್ಯ ಉತ್ತಮವಾಗಿ ನಿರ್ಮಾಣಗೊಳ್ಳಲು ಇದು ಸಾಧ್ಯವಾಗಲೇಬೇಕು. ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿ ಸಂಸತ್‌ಗೆ ಪ್ರವೇಶಿಸುವಂತಾಗುವುದರಿಂದ ಇಡೀ ರಾಷ್ಟ್ರ ಸರಿಯಾದ ದಿಕ್ಕಿನಲ್ಲಿ ಮುನ್ನಡೆಯುವುದು ಸಾಧ್ಯವಾಗುತ್ತದೆ. ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಪೂರ್ಣವಾಗಿ ಭಾಗಿಯಾದಾಗ ಮಾತ್ರ ಭಾರತ ನೈಜ ಹಾಗೂ ಪರಿಪೂರ್ಣ "ಅಭಿವೃದ್ಧಿಯನ್ನು ಸಾಧಿಸಲು ಯೋಗ್ಯವಾಗುತ್ತದೆ ಎಂಬುದು ನನ್ನ ಧೃಡ ನಿಲುವಾಗಿದೆ. ಮಹಿಳೆಯರಿಗೆ ಅವಕಾಶಗಳು ಲಭ್ಯವಾದಾಗ ಅವರು ಪುರುಷರಿಗಿಂತ ಹೆಚ್ಚು ಸಮರ್ಥವಾಗಿ ಸಾಧನೆ ಗೈದಿದ್ದಾರೆ ಎಂದರೆ ಅತಿಶಯೋಕ್ತಿಯಾಗದು. ಭಾರತದ ಭವಿಷ್ಯವು ಬಹುತೇಕವಾಗಿ ಪುರುಷರ ಮೇಲೆ ಅವಲಂಬಿಸಿರುವುದಕ್ಕಿಂತ ಮಹಿಳೆಯರ ಅಪೂರ್ವ ಕೊಡುಗೆಯನ್ನು ಅವಲಂಬಿಸಿದೆ".

ತಳಮಟ್ಟದಲ್ಲಿ ಜನಪ್ರತಿನಿಧಿಗಳನ್ನು ಚುನಾಯಿಸುವ ಪ್ರಜಾಸತ್ತಾತ್ಮಕ ಸಂಸ್ಥೆಗಳಾದ ಪಂಚಾಯತಿ ಪುರ/ನಗರ ಸಭೆಗಳಲ್ಲಿ ಈಗ ಮಹಿಳೆಯರಿಗೆ ಶೇ.33 ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಇದೊಂದು ಅತ್ಯಂತ ಸಮಾಧಾನಕರ ಅಂಶ. ಈ ಸಂಸ್ಥೆಗಳ ಮೂಲಕ ಸರಿಸುಮಾರು 10,00,000 ಜನ ಮಹಿಳೆಯರು ಜನರಿಂದ ಚುನಾಯಿತರಾಗಿ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ಗ್ರಾಮೀಣ ಹಾಗೂ ಪಟ್ಟಣ ನಗರಗಳ ಮಹಿಳೆಯರು ಹೀಗೆ ಸಾರ್ವಜನಿಕ ಬದುಕಿಗೆ ಬಂದು, ತಮ್ಮ ಕೊಡುಗೆಯನ್ನು ನೀಡುತ್ತಿರುವುದು ಮಹಿಳಾ ಸಶಕ್ತತೆಗೆ ಅಪೂರ್ವ ಮಹತ್ವವನ್ನು ತಂದು ಕೊಟ್ಟಿದೆ. ಪಂಚಾಯಿತಿಯಲ್ಲಿ ಕಂಡುಬಂದಿರುವ ಈ ಬೆಳವಣಿಗೆಯಿಂದಾಗಿ ನಮ್ಮ ಸಮುದಾಯಕ ಜೀವನದಲ್ಲಿ ಶಿಕ್ಷಣ, ಆರೋಗ್ಯ, ಶೌಚಾಲಯ ಹಾಗೂ ನಿರ್ಮಲ ಪರಿಸರ ಮುಂತಾದ ಕ್ಷೇತ್ರಗಳಿಗೆ ಅಪಾರ ಪ್ರಯೋಜನ ಲಭಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗಿಯಾಗಿದ್ದರಿಂದಾಗಿ ಸಮಾಜದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಚಟುವಟಿಕೆಗಳಿಗೆ ಹೆಚ್ಚಿನ ಮಹತ್ವ ಬಂದಿದೆ ಎಂಬುದು ಹಲವು ಅಧ್ಯಯನಗಳಿಂದ ಬೆಳಕಿಗೆ ಬಂದಿದೆ.

ಹಳ್ಳಿಗಾಡಿನ ಹಾಗೂ ಪಟ್ಟಣ / ನಗರ ಪ್ರದೇಶಗಳ ಮಹಿಳೆಯರು ತಮ್ಮ ಪಾಲ್ಗೊಳ್ಳುವಿಕೆಯಿಂದ ಇಂಥ ಮಹತ್ವದ ಕೆಲಸಗಳಿಗೆ ದಾರಿ ದೀಪವಾಗಿರುವಾಗ, ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಶೇ 33 ರಷ್ಟು ಸ್ಥಾನಗಳನ್ನು ಇವರಿಗೆ ಕಾಯ್ದಿರಿಸುವ ಮಸೂದೆಯನ್ನು ಒಪ್ಪಿಕೊಳ್ಳಲು ನಾವೇಕೆ ಹಿಂಜರಿಯುತ್ತಿದ್ದೇವೆ ? ಸಕ್ರಿಯವಾಗಿ ಭಾಗವಹಿಸುವ ಅವಕಾಶವನ್ನು ಮಹಿಳೆಯರಿಗೆ ಒದಗಿಸುವ ಮೂಲಕ ನಾವು ಮತ್ತೊಮ್ಮೆ ವಿಶ್ವಕ್ಕೆ ಮಾದರಿಯಾಗಿ ನಿಲ್ಲಬೇಕಾಗಿದೆ. ಈ ಪ್ರಯತ್ನದಲ್ಲಿ ನಾವು ಯಶಸ್ವಿಯಾಗುತ್ತೇವೆಂಬ ವಿಶ್ವಾಸ ನನಗಿದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಸ್ಥಾನಗಳನ್ನು ಕಾಯ್ದಿರಿಸುವುದಕ್ಕೆ ಬದ್ಧರಾಗಿರುವುದಾಗಿ, ಸ್ಪಷ್ಟಪಡಿಸಿರುವುದು ಸ್ವಾಗತಾರ್ಹ ಬೆಳವಣಿಗೆ. ಈ ದಿಸೆಯಲ್ಲಿ ನಾವು ಪ್ರಾಮಾಣಿಕವಾಗಿ ಮುನ್ನಡೆಯುತ್ತೇವೆಂಬ ಭರವಸೆ ನನಗಿದೆ.

ಪ್ರಾತಿನಿತ್ಯ ಒದಗಿಸುವುದೂ ಸೇರಿದಂತೆ, ಮಹಿಳೆಯರಿಗೆ ಹಲವಾರು ಅವಕಾಶಗಳನ್ನು ತೆರೆದಿಡುವ ಹಿನ್ನೆಲೆಯಲ್ಲಿ "ಮಹಿಳೆಯರಿಗಾಗಿ ರಾಷ್ಟ್ರೀಯ ದೃಷ್ಟಿ ಕೋನಯೋಜನೆ" ಯನ್ನು 1988 ರಲ್ಲಿ ರೂಪಿಸಲಾಗಿದ್ದು, ಇದರಲ್ಲಿ ಈ ಕುರಿತು ಹಲವಾರು ಸಲಹೆಗಳಿವೆ. ಈ ಯೋಜನೆಯಲ್ಲಿನ ವಿವರಗಳನ್ನು ಚರ್ಚಿಸುವಾಗ, 1946 ರಲ್ಲಿ ಪ್ರಾರ್ಥನಾ ಸಭೆ ಬಳಿಕ ಒಮ್ಮೆ ಮಹಾತ್ಮ ಗಾಂಧೀ ಆಡಿದ ಮಾತುಗಳನ್ನು ನೆನಪಿಸಿಕೊಳ್ಳುವುದು ಸೂಕ್ತ, ಪ್ರಪಂಚದ ಅತಿದೊಡ್ಡ ಮಹಿಳಾಪರ ಚಿಂತಕರಾಗಿದ್ದ ಮಹಾತ್ಮ ಗಾಂಧೀಜಿ ಆಗ ಮಹಿಳೆಯರನ್ನು ಚುನಾವಣೆಯಲ್ಲಿ ಅಭ್ಯರ್ಥಿಯಾಗಿಸಲು

ರಾಜಕೀಯ ಪಕ್ಷಗಳು ತೋರುತ್ತಿದ್ದ ನಿರಾಸಕ್ತಿಯನ್ನು ಕುರಿತು ಹೀಗೆ ಪ್ರತಿಕ್ರಿಯಿಸಿದರು.

"ಮಹಿಳೆಯರ ವಿಚಾರ ಬಂದಾಗ ಸಮಾನತೆ ಒದಗಿಸುವ ಹುಸಿ ಘೋಷಣೆ ಕೂಗುವುದು ನನ್ನ ಶೈಲಿಯಲ್ಲ. ಈ ನಿಟ್ಟಿನಲ್ಲಿ ನಾವು ಖಚಿತ ನಿಲುವು ತಾಳುವುದು ಇಂದಿನ ಅಗತ್ಯ. ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ತುಚ್ಛೀಕರಿಸಲ್ಪಟ್ಟಿರುವ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಒದಗಿಸಬೇಕು. ಈ ದಿಕ್ಕಿನಲ್ಲಿ ನಾವು ಹೆಜ್ಜೆ ಹಾಕಬೇಕು. ಇದರಿಂದಾಗಿ ಪುರುಷರಿಗೆ ಸಿಕ್ಕುತ್ತಿದ್ದ ಅವಕಾಶಗಳು ಕಡಿಮೆಯಾದರೂ ಅಡ್ಡಿಯಿಲ್ಲ ; ಮಹಿಳೆಯರೇ ಇರಲಿ ಅಥವಾ ಇನ್ನಾವುದೇ ಸಮುದಾಯವಿರಲಿ, ಪೋಷಕ ವೃತ್ತಿಯನ್ನು ನಿರಾಕರಿಸಬೇಕು. ನಾವು ಪಡೆದುಕೊಳ್ಳಬೇಕಾಗಿರುವುದು ದಯೆ, ಅನುಕಂಪ, ಕರುಣೆಗಳಲ್ಲ. ನಾವು ನ್ಯಾಯಕ್ಕಾಗಿ ಆಗ್ರಹ ಪಡಿಸಬೇಕು. ಈ ಪ್ರಕ್ರಿಯೆಯಲ್ಲಿ ಪುರುಷರು ಪಾಲುಗೊಂಡರೆ, ಅವರು ಮಹಿಳೆಯರಿಗೆ ಉಪಕಾರ ಮಾಡಿದಂತೇನೂ ಆಗುವುದಿಲ್ಲ. ತಡವಾಗಿಯಾದರೂ ನ್ಯಾಯ ಸಿಗುವುದಕ್ಕಾ ನೆರವಾದ ಕರ್ತವ್ಯ ನಿರ್ವಹಿಸಿದಂತಾಗುತ್ತದೆ ಅಷ್ಟೇ".

ಮಹಿಳಾ ಸಶಕ್ತತೆಯೆಂಬುದು ಬರೀ ರಾಜಕೀಯಕ್ಕೆ ಸೀಮಿತವಾಗಿಲ್ಲ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ವಿಚಾರಗಳನ್ನು ಅದು ಒಳಗೊಂಡಿದೆ. ಮಹಿಳೆಯರು ತಮ್ಮ ಸಮಾಜಿಕ ಆರ್ಥಿಕ ಹಕ್ಕುಗಳನ್ನು ಪಡೆದುಕೊಳ್ಳಲು ರಾಜಕೀಯ ಸಶಕ್ತತೆಯು ಸಂಪೂರ್ಣ ಅವಕಾಶಗಳನ್ನು ಒದಗಿಸುತ್ತದೆ ಎಂಬುದೂ ನಿಜ. ಮಾನವಹಕ್ಕುಗಳ ಪ್ರಧಾನ ಭಾಗವಿದು. ನಾಗರೀಕತೆಯನ್ನು ರೂಪಿಸುವಲ್ಲಿ ಮಹಿಳೆಯರ ಅದ್ಭುತವಾದ ಕೊಡುಗೆಯನ್ನು ನಿರ್ಲಕ್ಷಿಸಲಾಗಿದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಮಹಿಳೆಯರಿಗೆ ಮಾನವ ಹಕ್ಕುಗಳನ್ನು ಖಾತ್ರಿಪಡಿಸುವ ಜೊತೆಗೆ ಅವರು ಸಮಾನ ಅವಕಾಶಗಳನ್ನು ಪಡೆದುಕೊಳ್ಳುವಂತಾಗುವ ವಾತಾವರಣ ನಿರ್ಮಾಣವಾಗಬೇಕು. ಇದರಿಂದ ತಮ್ಮ ಕುಟುಂಬದ ಸುಸ್ಥಿತಿಗೆ ತಮ್ಮ ಸ್ವಾಭಿಮಾನದ ಬದುಕು ರೂಪಿಸಿಕೊಳ್ಳುವುದಕ್ಕೆ ಮಹಿಳೆಯರು ಸಶಕ್ತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳೆಯರಿಗೆ ಒದಗಿಸುವ ನೆರವು, ಸಹಕಾರ ಮಹತ್ವ ಪಡೆಯುತ್ತದೆ. ಇದರಿಂದ ಮಹಿಳೆಯರು ಸಶಕ್ತರಾಗುವ ಪ್ರಕ್ರಿಯೆಗೆ ವಿಶೇಷ ಅರ್ಥ ಬರುತ್ತದೆ.

ಮಹಿಳೆ ಮತ್ತು ಪುರುಷರು ಸರಿಸಮಾನರು ಎಂಬುದು ಮೊದಲು ಮನೆಯಲ್ಲಿ ಪ್ರಾರಂಭವಾಗಬೇಕು. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧೀಜಿಯವರು 1921ರಲ್ಲಿ ಶಾಲಾ ಮಕ್ಕಳಿಗಾಗಿ ಬರೆದಿರುವ ಮಹತ್ವದ ಪುಸ್ತಕವನ್ನು ಉಲ್ಲೇಖಿಸಲು ಬಯಸುತ್ತೇನೆ. ಗುಜರಾತಿನಲ್ಲಿ ಬಾಲ್‌ಪೋಕಿ ಎಂದು ಕರೆಯುವ ಈ ಪುಸ್ತಕದಲ್ಲಿ, ಮಹಿಳೆ ಮತ್ತು ಪುರುಷರು ಮನೆಕೆಲಸವನ್ನು ಸಮನಾಗಿ ಮಾಡಬೇಕೆಂಬುದನ್ನು ಮಗ, ತಾಯಿ, ಮಗಳ ಸಂಭಾಷಣೆ ರೂಪದಲ್ಲಿ ನಿರೂಪಿಸಿದ್ದಾರೆ. ಆ ಪುಸ್ತಕದಲ್ಲಿನ ವಿಚಾರವು ಕುಟುಂಬದಲ್ಲಿ ವಿಷಮತೆಯನ್ನು ಉಂಟು ಮಾಡುತ್ತದೆಂದು ಕೆಲವರು ವಿರೋಧಿಸಿದರು. ಆ ಪುಸ್ತಕದಲ್ಲಿ ಬರುವ ಹುಡುಗಿ, ತನ್ನ ಶೈಕ್ಷಣಿಕ ಆಕಾಂಕ್ಷೆಯ ಜೊತೆಗೆ ತನ್ನ ಸಹೋದರನಂತೆ ಆಟೋಟದಲ್ಲಿ ಭಾಗವಹಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಆಗ ಮನೆ ಕೆಲಸದಲ್ಲಿ ಅಮ್ಮನಿಗೆ ಸಹಾಯ ಮಾಡುವಂತೆ ಆಕೆಯ ಸಹೋದರ ಬುದ್ಧಿ ಹೇಳಿದಾಗ ಆ ಹುಡುಗಿ ತನಗೆ ಓದುವ ಹಾಗೂ ಆಡುವ ಹಕ್ಕುಗಳಿವೆ ಎಂದು ತನ್ನ ಅಣ್ಣನೊಂದಿಗೆ ವಾದಿಸುತ್ತಾಳೆ. ಈ ವಾದವನ್ನು ಕೇಳಿಸಿಕೊಂಡ ಅಮ್ಮ ಮಗಳ ಸಹಾಯಕ್ಕೆ ಬರುತ್ತಾಳೆ ; ಮಗನಿಗೆ ಅವನು ಮನೆ ಕೆಲಸದಲ್ಲಿ ಭಾಗವಹಿಸುವಂತೆ ತಿಳಿಹೇಳಿ, "ಈ ಮನೆ ನಿಮ್ಮಿಬ್ಬರಿಗೂ ಸೇರಿದ್ದು, ಈ ಮನೆಯ ಕೆಲಸ ನಿಮ್ಮಿಬ್ಬರದೂ ಜವಾಬ್ದಾರಿ" ಎನ್ನತ್ತಾಳೆ.

ಗಾಂಧೀಜಿ ತಮ್ಮ ಕಾಲಮಾನಕ್ಕಿಂತ ತುಂಬಾ ಮುಂದಿದ್ದರು. ಇತ್ತೀಚಿನ ದಿನಗಳಲ್ಲಿ ನಾವು ಶಾಲಾ ಪಠ್ಯಗಳನ್ನು ಹೊಸದಾಗಿ ಬರೆಯುವ ಬಗ್ಗೆ ಮಾತುಕತೆಗಳಾಗುವುದನ್ನು ಕೇಳುತ್ತೇವೆ. ನಮ್ಮ ಶೈಕ್ಷಣಿಕ ಅಧಿಕಾರ ವರ್ಗ ಈ ಮೇಲಿನ ಪುಸ್ತಕವನ್ನು ನಮ್ಮ ಮಕ್ಕಳ ಪಠ್ಯಪುಸ್ತಕವನ್ನಾಗಿ ತರುವುದು ಸ್ವಾಗತಾರ್ಹ ವಿಚಾರವಾಗಿದೆ.

ಗಾಂಧೀಜಿಯವರು 1929 ರಲ್ಲಿ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಅಗತ್ಯದ ಬಗ್ಗೆ ಬರೆದಿರುವುದನ್ನು ನೆನಪಿಸ ಬಯಸುತ್ತೇನೆ.

ಮಹಿಳೆ ಎಂದಿನಿಂದಲೂ ನೋವು ಸಹಿಸಿಕೊಳ್ಳುತ್ತಾ ಬಂದಿದ್ದಾಳೆ ; ತ್ಯಾಗ ಮಾಡುತ್ತಾ ಬಂದಿದ್ದಾಳೆ. ಹೀಗಾಗಿ ಮಹಿಳೆಯ ಪಾಲ್ಗೊಳ್ಳುವಿಕೆಯಿಂದ ನಮ್ಮ ಸಾರ್ವಜನಿಕ ಜೀವನ ಶುದ್ಧಿಯಾಗುತ್ತದೆ; ಮಿತಿಯಿಲ್ಲದ ಮಹತ್ವಾಕಾಂಕ್ಷೆಗೆ ಮತ್ತು ಹಣ - ಆಸ್ತಿ - ಸಂಪಾದನೆಗೆ ಕಡಿವಾಣ ಬೀಳುತ್ತದೆ.

ಮಹಿಳಾ ಹಕ್ಕುಗಳ ಬಗ್ಗೆ ಹಾಗೂ ಅವರ ಸಮಾಜಿಕ ಪಾತ್ರದ ಬಗ್ಗೆ ಗಾಂಧೀಜಿ ಹೊಂದಿದ್ದ ದೃಷ್ಟಿಕೋನ ಇಂದಿಗೂ ಪ್ರಸ್ತುತವಾಗಿದೆ. ಆದರೆ ನಮ್ಮ ಆದರ್ಶಗಳಲ್ಲಿ ಹಾಗೂ ಅಭ್ಯಾಸಗಳಲ್ಲಿ ನಾವು ಬಹಳಷ್ಟು ಹಿನ್ನೆಡೆ ಸಾಧಿಸಿದ್ದೇವೆಂದು ನನಗನಿಸುತ್ತಿದೆ. ಉದಾಹರಣೆಗೆ, ಬ್ರಹ್ಮ ಸಮಾಜ ತಂದ ಸುಧಾರಣೆಯ ಪ್ರಭಾವದಿಂದಾಗಿ ಬ್ರಿಟೀಷರ ಕಾಲದಲ್ಲಿ 'ಸತಿ' ಪದ್ಧತಿಯನ್ನು ತೊಡೆದು ಹಾಕಲಾಗಿತ್ತು. ವಿಧವಾ ವಿವಾಹ, ವರದಕ್ಷಿಣೆಯ ಪದ್ಧತಿ ಮುಂತಾದವುಗಳ ಬಗ್ಗೆ ನಮ್ಮ ಆಲೋಚನೆ ಪ್ರಗತಿಪರವಾಗಿತ್ತು. ಆದರೆ ಇಂತಹ ಮಹತ್ವದ ವಿಚಾರಗಳಲ್ಲಿ ಇಂದು ನಾವು ಹಿಮ್ಮುಖವಾಗಿ ಹೆಜ್ಜೆ ಹಾಕುತ್ತಿರುವಂತಿದೆ. 'ಸತಿ' ಪದ್ಧತಿ ದೇಶದ ಕೆಲವು ಭಾಗದಲ್ಲಿ ಹೆಚ್ಚಾಗಿದೆ; ವರದಕ್ಷಿಣೆ ಪದ್ಧತಿ ಈ ನವಸಮಾಜದ ಪ್ರಮುಖ ಸಮಸ್ಯೆಗಳಲ್ಲೊಂದಗಿದೆ. ಮಹಿಳೆಯರಿಗೆ ಕಿರುಕುಳ ನೀಡುವುದು, ಅವರನ್ನು ಕೆಟ್ಟದಾಗಿ ನಡಿಸಿಕೊಳ್ಳುವುದು, ಅವರ ಮೇಲೆ ದೌರ್ಜನ್ಯ ಎಸಗುವುದು ಮುಂತಾದ ಪ್ರಕರಣಗಳು ಮೊದಲಿಗಿಂತಾ ಎಷ್ಟೋ ಪಾಲು ಹೆಚ್ಚಾಗಿವೆ. ಅಂದು ಕೌರವರ ಆಸ್ಥಾನದಲ್ಲಿ ದ್ರೌಪದಿಯ ವಸ್ತ್ರಾಪಹರಣ ಹಾಗೂ ಅವಮಾನವಾದಂತೆ ಇಂದಿಗೂ ಕೂಡ ಮಹಿಳೆಯರ ಮೇಲೆ ಸಾರ್ವಜನಿಕವಾಗಿ ಹಲ್ಲೆ, ದೌರ್ಜನ್ಯ, ಮಾನಭಂಗ ಮುಂತಾದುವು ಮುಂದುವರೆದಿವೆ.

+++

ಈಗ ಭಾರತದ ಪುರುಷರು ಗಂಭೀರವಾಗಿ ತಮ್ಮನ್ನು ಆತ್ಮ ಪರೀಕ್ಷೆಗೆ ಗುರಿಪಡಿಸಿಕೊಳ್ಳಬೇಕಾಗಿದೆ. ನಮ್ಮ ಸಮಾಜದಲ್ಲಿ ಹೀಗೆ ಬೆಳೆಯುತ್ತಿರುವ ಕಾಯಿಲೆ ಹಾಗೂ ಅವ್ಯವಸ್ಥೆಯನ್ನು ಸರಿಪಡಿಸಲು ಮುಂದಾಗಬೇಕಾಗಿದೆ. ಹೀಗೆ ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವುದು ಹಾಗೂ ವಂಚಿತ ಸಮುದಾಯವನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ಜ್ಯಾತ್ಯಾಧಾರಿತ ಹಾಗೂ ಬಂಡವಾಳಶಾಹಿಯಾಧಾರಿತವಾದ ನಮ್ಮ ಸಮಾಜದಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶದ ಬಡವರು, ಜನಸಾಮಾನ್ಯರು, ಮಹಿಳೆಯರು ವಿವಿಧ ಆಂದೋಲನಗಳು ನೇತಾರರಾಗಿ ತಮ್ಮ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿರೋಧಿಸಲು ಹಾಗೇಯೇ ಇಡೀ ಸಮಾಜವನ್ನು ಪರಿವರ್ತಿಸಲು ಪ್ರಯತ್ನಶೀಲರಾಗಿರುವುದು ಸಾಮಾಧಾನದ ಸಂಗತಿಯಾಗಿದೆ. ಪ್ರತಿಭಟನೆ, ಖಂಡನೆಯ ಕಾರ್ಯಕ್ರಮಗಳೊಂದಿಗೆ ನಮ್ಮ ಜನ ನೀರಿನ ಬಳಕೆ, ಶೇಖರಣೆ ಹಾಗೂ ಅಭಿವೃದ್ಧಿಯಂಥ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ನವಸಮಾಜ ನಿರ್ಮಾಣದಲ್ಲಿ ಸಕ್ರಿಯರಾಗಬೇಕಾಗಿದೆ.

ಭಾರತದ ಮಹಿಳೆಯರು ಜಾಗೃತರಾದಾಗ ಶಕ್ತಿಯ ಕೇಂದ್ರವಾಗುತ್ತಾರೆ. ಆಗ ಅವರಿಂದ ಹೊರಹೊಮ್ಮುವ ಬೆಳಕು ಇಡೀ ಸಮಾಜಕ್ಕೆ ದಾರಿದೀಪವಾಗುತ್ತದೆ ; ಸಮಾಜ ಪ್ರಗತಿ ಪರವಾಗಿ ಬದಲಾವಣೆ ಪಡೆಯುತ್ತದೆ.

ಈ ಶಕ್ತಿಯನ್ನು ಹುಟ್ಟು ಹಾಕುವುದು ಮತ್ತು ಅನುಭವಿಸುವದು ಹೇಗೆ ಎಂಬುದನ್ನು ತೋರಿಸಿಕೊಟ್ಟವರಲ್ಲಿ ನ್ಯಾ.ಸುನಂದಾ ಭಂಡಾರೆ ಮೊದಲಿಗರು. ಅವರಿಗೆ ಗೌರವತರುವಂಥ ರೀತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿರುವ ಸುನಂದ ಭಂಡಾರೆ ಫೌಂಡೇಷನ್‌ಗೆ ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ಧನ್ಯವಾದಗಳು.

ಕೃಪೆ : ಮೇನ್ ಸ್ಟ್ರೀಮ್

ಕನ್ನಡಕ್ಕೆ : ಬಿ.ಎನ್. ಶಾರದ.

ಬಾಬಾಬುಡನ್‌ಗಿರಿ ಸೌಹಾರ್ದ ಸಮಾವೇಶ

ದಿನಾಂಕ 29.11.2003 ರಂದು ಬಾಬಾ ಬುಡನ್‌ಗಿರಿ ಸೌಹಾರ್ದ ಸಮಾವೇಶ ಚಿಕ್ಕಮಂಗಳೂರಿನಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಪ್ರಚಾರಕ್ಕೆಂದು ಪ್ರಕಟಿಸಿದ ಕರ ಪತ್ರವನ್ನು ಮಾನಸದ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಮನುಷ್ಯರನ್ನು ಪ್ರೀತಿಸುವ ಸರ್ವಧರ್ಮೀಯರೇ, ಮಾನವತಾವಾದಿಗಳೇ,

ಕೋಮುವಾದದ ವಿಷಸರ್ಪ ಮತ್ತೆ ಹೆಡೆ ಎತ್ತಿ ನಿಂತಿದೆ. ಉತ್ತರ ಭಾರತದಲ್ಲಿ ತಮ್ಮ ಅಮಾನವೀಯ ಪ್ರಯೋಗಗಳಿಗೆ ಗೆಲುವು ಸಿಕ್ಕಿದೆ ಎನ್ನುವ ಭ್ರಮೆಯಲ್ಲಿ ಕೋಮುವಾದಿಗಳು ಸಹಬಾಳ್ವೆ, ಔದಾರ್ಯಗಳೇ ಜೀವಸೆಲೆಯಾಗಿರುವ ಕರ್ನಾಟಕದ ಸಂಸ್ಕೃತಿ ಮೇಲೆ ತಮ್ಮ ದಾಳಿಯನ್ನು ಆರಂಭಿಸಿದ್ದಾರೆ. ನಮ್ಮ ಜನಸಂಸ್ಕೃತಿಯ ಜೀವಂತ ಸಂಕೇತವೂ, ನಮ್ಮೆಲ್ಲರ ಶ್ರದ್ಧಾ ಕೇಂದ್ರವೂ ಆಗಿರುವ ಬಾಬಾಬುಡನಗಿರಿಯನ್ನು ಹಾಳುಗೆಡವಲು ಹೊರಟಿದ್ದಾರೆ. ಏಕೆಂದರೆ ಅದು ಕೋಮುವಾದಿಗಳು ದ್ವೇಷಿಸುವ ಬಹುಮುಖಿ ಚರಿತ್ರೆ, ಹಾಗೂ ಸಂಸ್ಕೃತಿಗಳ ಸಾಕ್ಷಿಯಾಗಿದೆ. ಅವರು ಎಂದೂ ಒಪ್ಪದ ಹಿಂದೂ-ಮುಸ್ಲಿಂ ಧರ್ಮಗಳ ಪರಸ್ಪರ ಸಂಬಂಧದ ಮೂರ್ತ ನೆಲೆಯಾಗಿದೆ.

ಅಪೂರ್ವ ಸೌಹಾರ್ದ ಕೇಂದ್ರ, ಬಾಬಾಬುಡನ್‌ಗಿರಿ

ಬಾಬಾಬುಡನ್‌ಗಿರಿ ಎಲ್ಲ ಧರ್ಮಿಯರೂ ಒಗ್ಗೂಡಿ ಬದುಕಬೇಕೆಂಬ ಮಾನವತಾವಾದಿ ಆಶಯಗಳ ಸೌಹಾರ್ದದ ಸ್ಥಳ. ನೂರಾರು ವರ್ಷಗಳಿಂದ ಎಲ್ಲಾ ಧರ್ಮದ ಜನಸಾಮಾನ್ಯರು ಇದನ್ನು ತಮ್ಮ ಶ್ರದ್ಧಾ ಕೇಂದ್ರವೆಂದು ನಂಬಿಕೊಂಡು ಬಂದಿದ್ದಾರೆ.

ಮಳೆ ಸುರಿಯುವಾಗ ಓಡಿಹೋಗಿ ಮರದಡಿ ನಿಲ್ಲುವವರಿಗೆ ಇದು ಯಾವ ಜಾತಿಯ ಮರ ? ನನ್ನ ಪಕ್ಕದಲ್ಲಿ ನಿಂತವರು ಯಾವ ಮತದವರು ಎಂಬ ಪ್ರಶ್ನೆಗಳೇ ಏಳುವುದಿಲ್ಲ. ಹಾಗೆಯೇ ಬಾಬಾಬುಡನ್‌ಗಿರಿಯ ಭಕ್ತರೂ ಕೂಡ ಸಾಮಾನ್ಯವಾಗಿ ಎಲ್ಲ ಧರ್ಮಗಳ ಬಡಜನರು. ಬಾಳಿನ ಕಷ್ಟಗಳ ಹೊಡೆತದಲ್ಲಿ ನಲುಗಿದವರು. ಇಂತಹವರನ್ನು 'ಹಿಂದೂಗಳು' ಮತ್ತು 'ಮುಸ್ಲಿಮರು' ಎಂದು ಪ್ರತ್ಯೇಕಿಸುವುದೇ ಅಪಚಾರ. ಬಾಬಾಬುಡನಗಿರಿ-ಯಲ್ಲಿರುವ ದತ್ತ ಪಂಥವು ಜಾತಿ ಪದ್ಧತಿ, ವೈದಿಕಶಾಹಿಗಳನ್ನು ವಿರೋಧಿಸಿ ಅಸ್ತಿತ್ವಕ್ಕೆ ಬಂದ ಜನಪರ ಪಂಥ. ಸೂಫಿಪಂಥ ಕೂಡ ಅಧಿಕಾರದ ದಬ್ಬಾಳಿಕೆ ಮತ್ತು ಕಂದಾಚಾರ ವಿರೋಧಿಸಿ ಜೀವತಳೆದಿದೆ.

ಹಿಂದೂ-ಮುಸ್ಲಿಂ ಬಡಜನರ ಪರವಾದ ಆಶಯಗಳುಳ್ಳ ಈ ಎರಡೂ ಪಂಥಗಳು ಇಲ್ಲಿ ಸಹಬಾಳ್ವೆ ಮಾಡಿಕೊಂಡು ಬಂದಿವೆ. ಎಷ್ಟರಮಟ್ಟಿಗೆ ಎಂದರೆ ಅಲ್ಲಿಯ ಪುರಾಣ ಕಥೆಗಳು, ಪವಿತ್ರ ವಸ್ತುಗಳು ಇವುಗಳಲ್ಲಿ ಯಾವುದು ಯಾರಿಗೆ ಸೇರಿದ್ದು ಎಂದು ಹೇಳುವುದೇ ಅಸಾಧ್ಯ. ನೂರಾರು ವರ್ಷ ಜನಸಾಮಾನ್ಯರು ಎರಡು ಪಂಥಗಳ ಸಹಬಾಳ್ವೆಯನ್ನು ಒಪ್ಪಿಕೊಂಡು ಗೌರವಿಸುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬಾಬಾಬುಡನ್‌ಗಿರಿಯ ಸೌಹಾರ್ದವನ್ನು ಕೋಮುವಾದಿ ಶಕ್ತಿಗಳು ಕದಡುವ ಪ್ರಯತ್ನ ಮಾಡುತ್ತಿವೆ.

ಇಂದು ಬಾಬಾಬುಡನಗಿರಿಯಲ್ಲಿ ಗಲಭೆ ಎಬ್ಬಿಸುತ್ತಿರುವ ಸಂಘಟನೆಗಳ ಹಿನ್ನೆಲೆ ಏನು ?

ಅನುಮಾನವೇ ಬೇಡ, ಈ ಸಂಘಪರ್ಗಗಳಲ್ಲಿರುವವರು ಅದೇ ಜನ. ಜಾತಿಪದ್ಧತಿಯೇ ಧರ್ಮವೆಂದು ನಂಬಿಸಿ ಇತಿಹಾಸದುದ್ದಕ್ಕೂ ಕೂಡ ದುಡಿಯುವ ಜನರ ಬೆವರಿನ ಪಾಲನ್ನು ಅಪಹರಿಸುವ ಜನ, ಅಸ್ಪೃಶ್ಯ - ಹಿಂದುಳಿದವ - ಶೂದ್ರ - ಮಹಿಳೆ ಎಂದು ಸಮಾಜವನ್ನು ವಿಭಜಿಸಿ ನಮ್ಮ ಮನಸ್ಸು, ಬುದ್ಧಿ, ವಿಚಾರಗಳನ್ನು ಕುಲಗೆಡಿಸಿದ ಜನ. ಇಲ್ಲಿಯ ಧರ್ಮಗಳಲ್ಲಿಯೂ ಮನುಷ್ಯಪರ ಅಂಶಗಳನ್ನು ನಾಶಮಾಡಿ ಅಂತಃಕರಣವೇ ಇಲ್ಲದ ಕ್ರೂರ ಸಂಪ್ರದಾಯ ಸೃಷ್ಟಿಸಿದ ಜನ. ತಮ್ಮ ಹೊಸ ಅವತಾರದಲ್ಲಿ ಬಾಬರಿ ಮಸೀದಿಯನ್ನು ಬೀಳಿಸಿ ದೇಶದ ಮನಸ್ಸನ್ನೇ ವಿಭಜನೆ ಮಾಡಿದವರು. ಗುಜರಾತಿನಲ್ಲಿ ಗರ್ಭಿಣಿ ಹೆಂಗಸರ ಬಸಿರು ಬಗೆದು ಹಸುಕಂದನನ್ನು ಹೊರಗೆಳೆದು ತ್ರಿಶೂಲದಲ್ಲಿ ಚೂರುಮಾಡಿ ಬೆಂಕಿಯಲ್ಲಿ ಎಸೆದವರು. ಅಸಂಖ್ಯಾತ ಮಹಿಳೆಯರ ದೇಹಗಳ

ಮೇಲೆ ನಾವು ಮಾತಿನಲ್ಲಿ ಹೇಳಲಾರದ ಹಿಂಸೆಯನ್ನು ಮಾಡಿದವರು. ದಲಿತರು, ಆದಿವಾಸಿಗಳನ್ನು ನಿರಾಶ್ರಿತರನ್ನಾಗಿ ಮಾಡಿದವರು. ಕೋಮುಗಲಭೆಗಳನ್ನು ಪ್ರಾರಂಭಿಸಿ ಅಮಾಯಕ ಜನರ ರಕ್ತ ಚೆಲ್ಲುವವರು. ಶೃಂಗೇರಿಯಲ್ಲಿ ನವರಾತ್ರಿ ಉತ್ಸವಕ್ಕೆ ಬಂದ ಮುಸ್ಲಿಂ ವ್ಯಾಪಾರಿಗಳನ್ನು ಓಡಿಸುವವರು, ಆದಿವಾಸಿಗಳ ಸಮಾವೇಶದಲ್ಲಿ ಗಲಭೆ ಎಬ್ಬಿಸುವವರು. ಅವರೇ ಇಂದು ಬಾಬಾಬುಡನಗಿರಿಯು ಸಂಕೇತಿಸುವ ಸಹಬಾಳ್ವೆ- ಸಾಮರಸ್ಯ-ಮಾನವೀಯತೆಯ ಆಶಯಗಳನ್ನು ನಾಶಮಾಡಲು ಹೊರಟಿದ್ದಾರೆ.

ಧಾರ್ಮಿಕ ಸಂಘಟನೆಗಳಲ್ಲ, ರಾಜಕೀಯ ಸಂಘಟನೆಗಳು:

ಕೆಲವು ವರ್ಷಗಳ ಹಿಂದೆ ಬಾಬರಿ ಮಸೀದಿಯನ್ನು ನಾಶ ಮಾಡುವುದರ ಮೂಲಕ ರಾಜಕೀಯ ಅಧಿಕಾರ ಹಿಡಿಯಲು ಬಯಸಿದ ಸಂಘಪರಿವಾರದವರು ಅದೇ ಪ್ರಯತ್ನವನ್ನು ಬಾಬಾಬುಡನಗಿರಿಯಲ್ಲಿ ಮಾಡುವ ಕೆಲಸವನ್ನು ಆರಂಭಿಸಿದ್ದಾರೆ. ಗುಜರಾತ್‌ನಲ್ಲಿ

ದಿನಾಂಕ 29/12/2003 ರಂದು ಭಾನುವಾರ ಬೆಳಗ್ಗೆ 10.30ಕ್ಕೆ ಚಿಕ್ಕಮಂಗಳೂರಿನ ತಾಲ್ಲೂಕ್ ಕಛೇರಿಯ ಎದುರಿಗೆ ಗದ್ದರ್‌ರವರ ಓ....ಹೋ....ಆ....ಹಾ ಹಾಡಿನೊಂದಿಗೆ ಬಾಬಬುಡನ್‌ಗಿರಿಯ ಮೆರವಣಿಗೆ 11.30ಕ್ಕೆ ಪ್ರಾರಂಭವಾಯಿತು. ಇದರಲ್ಲಿ ಜಾತಿಬಿಡಿ, ಮತ ಬಿಡಿ, ಮಾನವತೆಗೆ ಜೀವಕೊಡಿ, ಹಮ್ ಸಬ್ ಏಕ್ ಹೈ, ಕಿಕ್ ಔಟ್ ಕಿಕ್ ಔಟ್ ಬಿಜೆಪಿ ಕಿಕ್ ಔಟ್ ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ಹತ್ತು ಸಾವಿರ ಜನರನ್ನು ಒಳಗೊಂಡ ಸೌಹಾರ್ದ ಸಮಾವೇಶದಲ್ಲಿ ಅನೇಕ ಕಲಾವಿದರು, ಮಹಿಳಾ ಸಂಘಟನೆಗಳು ಚಿಂತಕರು, ರೈತ ಮುಖಂಡರು, ಗಾಂಧಿವಾದಿಗಳು ಭಾಗವಹಿಸಿದ್ದರು.

ಈ ಮೆರವಣಿಗೆಯು ತಾಲೂಕ್ ಕಛೇರಿಯಿಂದ ಆಜಾದ್ ಪಾರ್ಕ್‌ವರೆಗೂ ನಡೆಯಿತು. ಮಧ್ಯಾಹ್ನ 2.00 ಗಂಟೆಯ ವೇಳೆಗೆ ಕರ್ನಾಟಕ ವಿಮೋಚನಾ ರಂಗದ ಕಲಾವಿದರಿಂದ ಒಂದು ಬೀದಿನಾಟಕ ಪ್ರದರ್ಶನ ನಂತರ ಮಹಿಳಾ ಜಾಗೃತಿ ಹಾಗೂ ಮಾನಸದ ತಂಡದವರಿಂದ ಕ್ರಾಂತಿ ಹಾಡುಗಳ ಮೂಲಕ ಬಹಿರಂಗ ಸಭೆ ಪ್ರಾರಂಭವಾಯಿತು.

ಕೋಮುವಾದವನ್ನೇ ಅಸ್ತ್ರವಾಗಿಟ್ಟುಕೊಂಡು ಅಧಿಕಾರಕ್ಕೆ ಬರಲಿಚ್ಛಿಸುವವರಿಗೆ ಹಾಗೂ ತಮ್ಮ ರಾಜಕೀಯದ ದಾಹಕ್ಕೆ ಅಮಾಯಕರನ್ನು ಬಲಿತೆಗೆದುಕೊಳ್ಳುತ್ತಿರುವವರಿಗೆ ಎಚ್ಚರಿಕೆಯನ್ನು ನೀಡಬೇಕೆಂದು ವೇದಿಕೆಯ ಮೇಲೆ ನೆರೆದಿದ್ದ ಅನೇಕ ಮುಖಂಡರು ಮಾತನಾಡಿದರು.

ಸ್ವಾಮಿ ಅಗ್ನಿವೇಶ್‌ರವರು ತಮ್ಮ ಮಾತುಗಳನ್ನು ಮಿಲ್‌ಕೆ ಚಲೋ ಮಿಲ್‌ಕೆ ಚಲೋ ಎಂಬ ಒಗ್ಗಟ್ಟನ್ನು ಅರ್ಥೈಸುವ ಹಾಡಿನ ಮೂಲಕ ಪ್ರಾರಂಭಿಸಿದರು. ಬಾಬಬುಡನ್‌ಗಿರಿ -ಯನ್ನು ಮತ್ತೊಂದು ಅಯೋಧ್ಯೆಯನ್ನಾಗಿ ಮಾಡಲು ಹೊರಟಿರುವ ಪ್ರವೀಣ್ ತೊಗಾಡಿಯಾ ಒಂದು ಹುಚ್ಚು ನಾಯಿ, ಆದರೆ ಇವನಂತಹವನಿಗೆ ಪ್ರೋತ್ಸಾಹ ಕೊಡುತ್ತಿರುವ ಅಟಲ ಬಿಹಾರಿ ವಾಜಪೇಯಿ ಎಂದು ಸಾರಿದರು.

ಜಿ.ಕೆ.ಗೋವಿಂದರಾವ್‌ರವರು, ನಮ್ಮ ಶಾಂತಿಯನ್ನು ಭಂಗಗೊಳಿಸಲು ಬಿ.ಜೆ.ಪಿಯವರು ಯಾರು, ನಾವು ಒಗ್ಗಟಿನಿಂದ ಇದ್ದರೆ ಯಾರು ನಮ್ಮನ್ನು ಏನು ಮಾಡಲು ಸಾಧ್ಯವಿಲ್ಲ. ಗಂಡಸರು ಹೆಂಗಸರು ಹಾಗೆ ದೊಡ್ಡದಾಗಿ ಹಣೆಗೆ ಕುಂಕುಮ ಇಟ್ಟುಕೊಳ್ಳಿ ಎನ್ನುವುದು ಏನ್ರಿಸರಿ ಎಂದು ತಿಳಿಸಿದರು.

ಆಂಧ್ರದ ನಕ್ಸಲೀಯ ಚಳವಳಿಯ ಕಲಾ ಸೆಲೆಯಾಗಿರುವ ಗದ್ದರ್ ಜನಪರ ಹೋರಾಟದ ನೆಲೆಗಳ ಬಗ್ಗೆ ತಿಳಿಸಿದರು.

ಹೀಗೆ ಬೇರೆ ಬೇರೆ ಗುಂಪುಗಳ ಮುಖಂಡರನೇಕರು ಈ ಸಮಾವೇಶ ಈ ದಿನ ಕೇವಲ ಚಿಕ್ಕಮಂಗಳೂರಿನಲ್ಲಿ ಆಗಿದೆ, ಇದು ಮುಂದೆ ಇಡೀ ಕರ್ನಾಟಕ ಅಷ್ಟೇ ಅಲ್ಲದೆ ಇಡೀ ದೇಶಾದ್ಯಂತ ನಡೆಯಲಿ ಸೌಹಾರ್ದ ಸಮಾವೇಶಕ್ಕೆ ಮೊದಲ ಹೆಜ್ಜೆಯಾಗಬೇಕು. ಇದರಲ್ಲಿ ನಾವೆಲ್ಲರು ಭಾಗವಹಿಸುವುದರ ಮೂಲಕ ಬಿ.ಜೆ.ಪಿ ಯರವರ ಮುಂದಿನ ದುಷ್ಟಯೋಜನೆಗಳನ್ನು ಪಕ್ಕಕ್ಕಿಡಬಹುದು, ಎಂದು ಸಾರಿದರು. ಈ ಬಹಿರಂಗ ಸಭೆ ರಾತ್ರಿ 8.00 ಗಂಟೆಯವರೆಗೂ ಮುಂದುವರೆದಿತ್ತು.

ಇವರು ನಡೆಸಿದ ಕೋಮುವಾದದ ದಾಳಗಳು ಅಲ್ಲಿನ ಅಧಿಕಾರ ಹಿಡಿಯಲು ನೆರವಾದದ್ದು ನಮ್ಮ ಕಣ್ಣ ಮುಂದಿದೆ. ಧರ್ಮ ಹಾಗೂ ದೇವರ ಬಗೆಗಿನ ನಮ್ಮ ಪ್ರೀತಿ, ಭಕ್ತಿಯನು ಬಳಸಿಕೊಂಡು ಇನ್ನೊಂದು ಧರ್ಮದವರನ್ನು ದ್ವೇಷಿಸಲು ಹಚ್ಚುವುದೇ ಸಂಘಪರಿವಾರದ ಕಾರ್ಯತಂತ್ರ. ಅವರ ಪ್ರಕಾರ ಬಾಬರಿ ಮಸೀದಿಯೇ ಇರಲಿ, ಬಾಬಬುಡನ್‌ಗಿರಿಯೇ ಇರಲಿ ಅಥವಾ ಭಾರತದ ಯಾವುದೇ ಸ್ಮಾರಕವಿರಲಿ, ಅವು ಎಂದೋ "ಒಂದು ಕಾಲಕ್ಕೆ ಹಿಂದೂಗಳಿಗೆ ಸೇರಿದ್ದು, ಅನಂತರ ಅವನ್ನು ಇತರ ಧರ್ಮೀಯರು ಆಕ್ರಮಿಸಿಕೊಂಡಿದ್ದಾರೆ. ಈಗ ಹಿಂದೂಗಳ ಧರ್ಮರಕ್ಷಣೆಗಾಗಿ ಶಾಂತಿ, ಸೌಹಾರ್ದ ಕಾನೂನುಗಳನ್ನು ಮೀರಿ ಹಿಂಸೆಯ ಮೂಲಕ

ಅವುಗಳನ್ನು "ಮುಕ್ತಿಗೊಳಿಸಿ" ಮತ್ತೆ ಹಿಂದೂ ಸ್ಮಾರಕಗಳನ್ನು ಮಾಡಬೇಕೆಂದು" ಅವರ ವಾದ. ಇದಕ್ಕೆ ಪೂರಕವಾಗಿ ಇವರು ಸುಳ್ಳು ಇತಿಹಾಸ ಸೃಷ್ಟಿಸುತ್ತಾರೆ. ಸದ್ಯದ ಅವರ ಒತ್ತಾಯವೆಂದರೆ ಬಾಬಾಬುಡನ್‌ಗಿರಿಯಲ್ಲಿ ವಿಗ್ರಹ ಪ್ರತಿಷ್ಠಾಪಿಸಿ ಅಲ್ಲಿ ಹಿಂದೂ ಅರ್ಚಕನನ್ನು (ದಲಿತನಲ್ಲ!) ನೇಮಿಸುವುದು. ಇಂತಹ ಇವರ ಬೇಡಿಕೆಗಳು ಮುಗಿಯುವುದೇ ಇಲ್ಲ. ಏಕೆಂದರೆ ಅವರಿಗೆ ಬೇಕಾಗಿರುವುದು ಜನರು ನಿರಂತರವಾಗಿ ಬಡಿದಾಡಿಕೊಳ್ಳುತ್ತಿರುವ ಪರಿಸ್ಥಿತಿ. ಮುಸ್ಲಿಮರು, ಕ್ರಿಶ್ಚಿಯನ್ನರು ಹಾಗೂ ದಲಿತರ ಮೇಲೆ ಹಿಂಸೆ ಮಾಡಲು ಅವರಿಗೆ ನೆಪಗಳು ಬೇಕಿವೆ ಅಷ್ಟೆ.

ವಿದೇಶೀ ಕಂಪನಿಗಳಿಗಾಗಿ ಕೋಮುವಾದಿಗಳಿಂದ ಭಾರತದ ಜನರ ಬಲಿ !

ಇಂದು ಚಿಕ್ಕಮಗಳೂರನ್ನೂ ಒಳಗೊಂಡಂತೆ ಇಡೀ ಮಲೆನಾಡಿನ ಆರ್ಥಿಕ ವ್ಯವಸ್ಥೆ ಬೆಲೆ ಕುಸಿತದಿಂದಾಗಿ ತಲ್ಲಣಗೊಂಡಿದೆ. ಕಾಫಿ, ಅಡಿಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಕೂಲಿ ಕಾರ್ಮಿಕರ ಕೂಲಿದರ ಕಡಿಮೆಯಾಗಿರುವುದಲ್ಲದೆ ಕೂಲಿ ಸಿಗುವುದೇ ಕಷ್ಟವಾಗತೊಡಗಿದೆ. ಎಲ್ಲಾ ವ್ಯಾಪಾರ ವಹಿವಾಟು ನೆಲಕಚ್ಚಿವೆ. ಸಾಲದೆಂಬಂತೆ, ರಾಷ್ಟ್ರೀಯ ಉದ್ಯಾನದ ಹೆಸರಿನಲ್ಲಿ ಆದಿವಾಸಿ ಹಾಗೂ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಸುಪ್ರೀಂ ಕೋರ್ಟ್‌ನ ತೀರ್ಪಿನಿಂದಾಗಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ ಸಹಸ್ರಾರು ರೈತ ಕುಟುಂಬಗಳು ಬದುಕಿನ ಎಲ್ಲಾ ಆಸರೆಗಳನ್ನು ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ. ಒಟ್ಟಾರೆ ಜನರ ಬದುಕು ನರಕಸದೃಶವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೋಮುವಾದಿಗಳು ಬಾಬಾಬುಡನ್‌ಗಿರಿಗೆ "ಮುಕ್ತಿ ಕೊಡಿಸಲು" ಹೊರಟಿದ್ದಾರೆ. **ಬಂಧುಗಳೇ ಈಗ ಹೇಳಿ, ನಾಡಿನ ರೈತರು ಸಾಯುತ್ತಿದ್ದಾಗ ಈ ಸಂಘಟನೆಗಳು ಎಂದಾದರೂ ದನಿಯೆತ್ತಿವೆಯೇ ? ಜನರ ಬದುಕಿನ ಬಗ್ಗೆ ಇವರು ಎಂದಾದರೂ ಮಾತಾಡಿದ್ದಾರೆಯೇ ? ಖಂಡಿತವಾಗಿಯೂ ಇಲ್ಲ. ಅದು ಅವರ ಉದ್ದೇಶವೂ ಆಗಿಲ್ಲ.**

ಜಾಗತೀಕರಣದ ಹೆಸರಲ್ಲಿ ಸರ್ಕಾರಗಳು ಮಾಡುತ್ತಿರುವ ಕೆಲಸಗಳಿಂದಾಗಿ ನಮ್ಮ ರೈತರು, ಕಾರ್ಮಿಕರು, ಜನಸಾಮಾನ್ಯರು ಭೀಕರ ದುರಂತದ ಸ್ಥಿತಿ ತಲುಪಿದ್ದರಿಂದಾಗಿ ಹುಟ್ಟುವ ಪ್ರತಿಭಟನೆ, ಚಳುವಳಿಗಳನ್ನು ತಪ್ಪಿಸುವುದು, ಜನಪರ ಚಳುವಳಿಗಳು ಬೆಳೆಯುವ ಬದಲು ಅರ್ಥವಿಲ್ಲದ ವಿವಾದಗಳಿಗಾಗಿ ನಮ್ಮೆಲ್ಲರ ಶಕ್ತಿ ಹರಣವಾಗುವಂತೆ ಮಾಡುವುದು ಅವರ ಉದ್ದೇಶವಾಗಿದೆ. ಇವರು ಏನೇ ಸೋಗು ಹಾಕಿದರೂ ನಮಗೆಲ್ಲಾ ಸ್ಪಷ್ಟವಾಗಿ ಕಾಣುತ್ತಿದೆಯಲ್ಲವೆ ? ಇವರು ಬೆಂಬಲಿಸುವ ಬಿ.ಜೆ.ಪಿ. ಸರ್ಕಾರ, ಈ ದೇಶದ ನೆಲ, ಜಲ, ಕಾಡು ಮುಂತಾದ ಸಂಪನ್ಮೂಲಗಳನ್ನು ಖಾಸಗೀಕರಣದ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ, ವಿದೇಶಿ ಕಂಪನಿಗಳಿಗೆ ಮಾರುತ್ತಿದೆ. ಈ ಹೊಡೆತಗಳಿಂದ ವಿನಾಶವಾಗುತ್ತಿರುವ ಕಾರ್ಮಿಕರು, ರೈತರು, ಜನಸಾಮಾನ್ಯರ ಚಳುವಳಿ ಉಗ್ರರೂಪ ತಾಳುತ್ತಿದೆ. ಇದು ಆಗಬಾರದೆಂದು ವಿದೇಶಿ ಶಕ್ತಿಗಳಿಂದ ಹಣ, ಬಲ ಪಡೆದುಕೊಂಡಿರುವ ಸಂಘಪರಿವಾರ ಬಾಬಾಬುಡನಗಿರಿಯತ್ತ ದಿಕ್ಕು ತಪ್ಪಿಸುವ ವ್ಯರ್ಥ ವಿವಾದಗಳನ್ನು ಹುಟ್ಟು ಹಾಕುತ್ತಿದೆ. ಒಂದೆಡೆ ದೇಶವನ್ನು ಲೂಟಿ ಮಾಡಲು ಬರುತ್ತಿರುವ ವಿದೇಶಿ ಕಂಪೆನಿಗಳಿಗೆ ಸ್ವಾಗತ ನೀಡುತ್ತಿದ್ದರೆ ಮತ್ತೊಂದೆಡೆ ಹೆಗಲಿಗೆ ಹೆಗಲು ನೀಡಿ ಈ ನಾಡು ಕಟ್ಟಲು ಬೆವರು ರಕ್ತ ಸುರಿಸಿದ ಮುಸ್ಲಿಮರನ್ನು ಹೊರಗೆ ತಳ್ಳುವ ಹುನ್ನಾರ ನಡೆಸಿದ್ದಾರೆ. ಎಲ್ಲ ಧರ್ಮೀಯರು ಒಂದಾಗಿ ಹೋರಾಡಬೇಕಾದ ಈ ಚಾರಿತ್ರಿಕ ಕಾಲಘಟ್ಟದಲ್ಲಿ ಐಕ್ಯತೆಯನ್ನು ಛಿದ್ರಗೊಳಿಸುತ್ತಿರುವುದಲ್ಲದೆ, ನಿಜವಾದ ಸಮಸ್ಯೆಗಳಿಂದ ದೂರಮಾಡಿ, ಇಲ್ಲದಿರುವ ಸಮಸ್ಯೆಗಳತ್ತ ನಮ್ಮನ್ನು ಕೊಂಡೊಯ್ಯುತ್ತಿದ್ದಾರೆ. ಧರ್ಮದ ಹೆಸರಿನಲ್ಲಿ ಇತಿಹಾಸದುದ್ದಕ್ಕೂ ವಂಚನೆಗೈಯುತ್ತಾ ಬಂದವರು ಈಗಲೂ ಸಹ ತಮ್ಮ ತಂತ್ರಗಾರಿಕೆಯನ್ನು ಬಳಸಲು ಹೊರಟಿದ್ದಾರೆ. ಕೋಮುವಾದದ ಮೂಲಕ ರಾಜಕೀಯ ಅಧಿಕಾರ ಪಡೆದುಕೊಂಡು ಬಂಡವಾಳಶಾಹಿಗಳಿಗೆ, ವಿದೇಶಿಕಂಪನಿಗಳಿಗೆ ದೇಶವನ್ನು ಮಾರಿ ಜನರನ್ನು ಆತ್ಮಹತ್ಯೆಗೆ ತಳ್ಳುತ್ತಿರುವ ಸಂಘಪರಿವಾರದ ವಿರುದ್ಧ ನಾವು ಸಂಘಟಿತರಾಗಬೇಕಿದೆ.

ನ್ಯಾಯಾಲಯದ ಉಲ್ಲಂಘನೆಗೆ ರಾಜ್ಯ ಸರ್ಕಾರಗಳೂ ಭಾಗಿ ! :

ಕರ್ನಾಟಕದ ಉಚ್ಚನ್ಯಾಯಾಲಯವು ಬಾಬಾಬುಡನಗಿರಿಯಲ್ಲಿ 1976ಕ್ಕೂ ಹಿಂದಿನ ಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆಂದು ಮತ್ತು ಅದುವರೆಗೂ ನಡೆದುಕೊಂಡು ಬಂದ ಪೂಜಾವಿಧಿಗಳೇ ಅಧಿಕೃತವೆಂದು ಸ್ಪಷ್ಟವಾಗಿ ಹೇಳಿದೆ. ಯಥಾಸ್ಥಿತಿಯನ್ನು ಕಾಪಾಡಿಕೊಂಡುಬರಬೇಕೆಂದು ಜಿಲ್ಲಾ ಆಡಳಿತಕ್ಕೆ ನಿರ್ದೇಶನ ನೀಡಿದ. ಆದರೆ ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್‌ಗಳು ಪ್ರತಿವರ್ಷ ಹೊಸದೊಂದು ಬೇಡಿಕೆಯನ್ನು ಸೇರಿಸುತ್ತಾ ಬಂದಿವೆ. ಬಿ.ಜೆ.ಪಿ. ನಾಯಕರ ತಂಡವೂ ತನ್ನ

ಬೆಂಬಲ ಸೂಚಿಸಿ ತನ್ನ ಕೋಮುವಾದಿ ಧೋರಣೆಯನ್ನು ಮೆರೆದಿದೆ. ನ್ಯಾಯಾಲಯಗಳು ಈ ಹಿಂದೆ ಕೊಟ್ಟಿರುವ ತೀರ್ಪಿಗೆ ಇದು ಸ್ಪಷ್ಟವಾಗಿ ವಿರುದ್ಧವಾಗಿದೆ. ನ್ಯಾಯಾಲಯದ ತೀರ್ಪನ್ನು ತನಗೆ ಬೇಕಾದ ಹಾಗೆ ಬದಲಾಯಿಸಿಕೊಳ್ಳುವ ಸಂಘಪರಿವಾರ ತನ್ನ ಹಿತಾಸಕ್ತಿಗೆ ವಿರುದ್ಧವಾದ ತೀರ್ಪು ಬಂದಾಗ ಅದನ್ನು ಪಾಲಿಸುವುದಿಲ್ಲ. ಜೊತೆಗೆ ರಾಜ್ಯ ಸರ್ಕಾರವೂ ಕೂಡ ಅವರ ಮೇಲೆ ಕ್ರಮ ಕೈಗೊಳ್ಳದ ದರೋಡೆಗೆ ಬಂದವರನ್ನೇ ಮನೆಗಾವಲಿಗೆ ನೇಮಿಸಿದಂತೆ ಉಸ್ತುವಾರಿ ಸಮಿತಿಗಳಲ್ಲಿ ಭಜರಂಗದಳದವನ್ನೇ ನೇಮಿಸಿಕೊಂಡಿದೆ.

ಹಿಂದೂ, ಮುಸ್ಲಿಂ ಸೌಹಾರ್ದದ ಬಾಬಾಬುಡನ್‌ಗಿರಿ ಸೌಹಾರ್ದ ಕೇಂದ್ರವಾಗಿಯೇ ಉಳಿಯಬೇಕು. ಸಾಮರಸ್ಯವನ್ನು ಕದಡುವ ಯಾವುದೇ ಪ್ರಯತ್ನಗಳನ್ನು ನಾವು ವಿರೋಧಿಸಬೇಕಾಗಿದೆ. ಜನಸಂಸ್ಕೃತಿಯ ಭಾಗವಾಗಿದ್ದ ಬಾಬಾಬುಡನ್‌ಗಿರಿಯನ್ನು ಕೋಮುವಾದಿಗಳಿಂದು ಕೋಮುದ್ವೇಷ ಹರಡುವ ಕೇಂದ್ರವಾಗಿ ಮಾಡಿಕೊಂಡಿದ್ದಾರೆ. ಬಾಬಾಬುಡನ್‌ಗಿರಿ ಕೋಮುವಾದಿಗಳ ಪಾಲಾಗದಂತೆ ಕಾಪಾಡುವುದು, ಅದನ್ನೊಂದು ಸೌಹಾರ್ದದ ತಾಣವಾಗಿ ಉಳಿಸಿಕೊಳ್ಳುವುದು, ಬಾಬಾಬುಡನ್-ದತ್ತ ಪರಂಪರೆಯ ನಿಜವಾದ ವಾರಸುದಾರರಾದ ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಚಿಕ್ಕಮಗಳೂರಿನ ಯುವಮಿತ್ರರಲ್ಲಿ ಒಂದು ಮನವಿ :

ಇಂದು ನಿರುದ್ಯೋಗದ ಭಯದಿಂದ ಕಂಗಾಲಾಗಿರುವ ಯುವಜನರನ್ನು ಸಂಘಪರಿವಾರ ಸಂಘಟನೆಗಳು ತಮ್ಮ ದುಷ್ಟ. ರಾಜಕಾರಣಕ್ಕಾಗಿ ಬಳಸಿಕೊಳ್ಳುತ್ತಿವೆ. ತಮ್ಮ ದುಸ್ಥಿತಿಗೆ ಅಲ್ಪಸಂಖ್ಯಾತರೇ ಕಾರಣವೆಂದು ಸುಳ್ಳು ಹೇಳುತ್ತಿವೆ. ಬಿ.ಜೆ.ಪಿ., ವಿ.ಹೆಚ್.ಪಿ. ಮತ್ತು ಭಜರಂಗದಳದ ನಾಯಕರು ವರ್ಗ, ಜಾತಿ ಹಾಗೂ ರಾಜಕೀಯದ ಸವಲತ್ತುಗಳನ್ನು ಬಳಸಿಕೊಂಡು ಬಲಿಷ್ಠರಾಗುತ್ತಿದ್ದಾರೆ. ಬಾಬಾಬುಡನ್‌ಗಿರಿ ಅಥವಾ ಅಯೋಧ್ಯೆಯ ಕೋಮು ಸಂಘರ್ಷಗಳಲ್ಲಿ ಭಾಗವಹಿಸುವುದರಿಂದ ನಮ್ಮ ಯುವಕರ ಮನೆ ಹಾಗೂ ಪರಿಸರಕ್ಕೆ ಏನಾದರು ಲಾಭವಿದೆಯೇ ?. ದಲಿತರ ಜೀವವು ಸತ್ತ ಹಸುವಿಗಿಂತ ಕೀಳು ಎನ್ನುವವರು, ದಲಿತರನ್ನು, ಶೂದ್ರರನ್ನು ಮಹಿಳೆಯರನ್ನು ಪ್ರಾಣಿಗಳಿಗಿಂತ ಹೀನಾಯವಾಗಿ ಕಾಣುವ ಮನುವಾದಿ ಪರಂಪರೆಯನ್ನು ಈಗಲೂ ಒಪ್ಪುವ ಸಂಘಗಳು ನಿಮಗಾಗಿ ನಮ್ಮ ಹಳ್ಳಿಗಳಿಗಾಗಿ ಏನಾದರೂ ಮಾಡುತ್ತಿವೆಯೇ? ಖಂಡಿತ ಇಲ್ಲ. ನಮ್ಮ ರಕ್ತ ಸುರಿಸಿ ನಮ್ಮಿಂದ ದೊಂಬಿ ಮಾಡಿಸಿ ಅವರು ತಮ್ಮ ಸ್ವಾರ್ಥ ನೋಡಿಕೊಳ್ಳುತ್ತಾರೆ. ಸಾವಿರಾರು ವರ್ಷಗಳಿಂದ ಇದೇ ಶಕ್ತಿಗಳಿಂದಾಗಿ ಬಡತನ, ಶೋಷಣೆ,ಅವಮಾನ ಅನುಭವಿಸಿದ ನಮ್ಮ ಜನರ ಚರಿತ್ರೆಯನ್ನು ನೆನಪಿಸಿಕೊಳ್ಳೋಣ.

ಕೋಮುವಾದ ಕೇವಲ ಅಲ್ಪಸಂಖ್ಯಾತರ ಶತ್ರುವಲ್ಲ.

ಕೋಮುವಾದವಿಂದು ಈ ದೇಶದ ಕೋಟ್ಯಾಂತರ ಅಲ್ಪಸಂಖ್ಯಾತರ ಬದುಕನ್ನು ಆತಂಕ ಹಾಗೂ ಅನಿಶ್ಚಿತತೆಯಲ್ಲಿ ನೂಕಿದೆ. ಈ ನಾಡಿನ ಇತಿಹಾಸದಲ್ಲಿ ಹಾಗೂ ಭವಿಷ್ಯದಲ್ಲಿ ಸಮಾನ ಪಾಲನ್ನು ಹೊಂದಿರುವ ಮುಸ್ಲಿಂ, ಕ್ರೈಸ್ತ, ಇತರ ಧಾರ್ಮಿಕ ಅಲ್ಪಸಂಖ್ಯಾತರನ್ನು ದೇಶದ್ರೋಹಿಗಳಂತೆ, ವಿಚ್ಛಿದ್ರಕಾರಿ, ಭಯೋತ್ಪಾದಕರಂತೆ ಚಿತ್ರಿಸಲಾಗುತ್ತಿದೆ. ಸುಳ್ಳು ನೆಪಗಳನ್ನು ಬಳಸಿಕೊಂಡು ಅವರ ಬದುಕಿನ ಮೇಲೆ ದಾಳಿ ನಡೆಸಲಾಗುತ್ತಿದೆ. ಈ ಅನ್ಯಾಯದ ವಿರುದ್ಧ ದನಿ ಎತ್ತಬೇಕಾಗಿರುವುದು ಪ್ರತಿಯೊಬ್ಬ ನಾಗರಿಕನ ಮೊದಲ ಕರ್ತವ್ಯವಾಗಿದೆ. ಕೋಮುವಾದಿಗಳು ಕೇವಲ ಅಲ್ಪಸಂಖ್ಯಾತರ ಶತ್ರುಗಳಲ್ಲ. ದಲಿತ, ಶೂದ್ರ, ಮಹಿಳೆ ಹಾಗೂ ಎಲ್ಲಾ ಬಡಜನರ ಶತ್ರುವಾಗಿದ್ದಾರೆ. ಆದ್ದರಿಂದಲೇ ಧರ್ಮ, ಜಾತಿ, ವರ್ಗ, ಲಿಂಗಭೇದವನ್ನು ಅಳಿಸುವ ಗುರಿಯೊಂದಿಗೆ ನಡೆಯುತ್ತಿರುವ ಎಲ್ಲಾ ಜನಪರ ಹೋರಾಟಗಳನ್ನು ಕೋಮುವಾದಿಗಳು ವಿರೋಧಿಸುತ್ತಾರೆ. ಜಾಗತೀಕರಣ ಮತ್ತು ಕೋಮುವಾದಗಳು ಎಷ್ಟು ಭಿನ್ನವೆಂದು ತೋರಿದರೂ ಅವುಗಳಿಂದ ಪ್ರಯೋಜನ ಪಡೆಯುವ ವರ್ಗಗಳು ಒಂದೇ ಆಗಿವೆ. ಆದ್ದರಿಂದ ಇಂದು ಕನ್ನಡನಾಡಿನ ಅಭಿಮಾನವೆಂದರೆ ನಮ್ಮ ನೆಲ, ಜಲ, ಕಾಡುಗಳನ್ನು ವಿದೇಶಿಕಂಪನಿಗಳ ಕಪಿಮುಷ್ಠಿಯಿಂದ ಉಳಿಸಿಕೊಳ್ಳುವುದು, ಕೋಮುದಳ್ಳುರಿಯಿಂದ ನಮ್ಮ ಜನರ ಬದುಕು ನಾಶವಾಗದಂತೆ ಪ್ರಯತ್ನಿಸುವುದು.

ವಿಶ್ವಮಾನವ ಸಂದೇಶವನ್ನು ಸಾರಿದ, ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ ಸೆಟೆದುನಿಂತ ಮಲೆನಾಡಿನ ಧೀರ ಕವಿ ಕುವೆಂಪುರವರ ಜನ್ಮ ದಿನವಾದ ಡಿಸೆಂಬರ್ 29ರಂದು ನಡೆಯಲಿರುವ ಬಾಬಾಬುಡನ್‌ಗಿರಿ ಸೌಹಾರ್ದ ಸಮಾವೇಶ ಎಲ್ಲಾ ಧರ್ಮದ ದಮನಿತರ ಸಮಾವೇಶವಾಗಿದೆ. ಬನ್ನಿ, ಅಂದು ನಮ್ಮೆಲ್ಲ ಇತರ ಕೆಲಸಗಳನ್ನು ಬದಿಗಿಡೋಣ. ಇತಿಹಾಸದ ಹೊಸ ತಿರುವಿನಲ್ಲಿ ನಮ್ಮೆಲ್ಲರ ಸಂಕಲ್ಪ ಬಲದ ಅಭಿವ್ಯಕ್ತಿಯಾದ ಈ ಸಮಾವೇಶದಲ್ಲಿ ಭಾಗವಹಿಸೋಣ. **- ವರದಿ**

ಲೈಂಗಿಕತೆ ಅಲ್ಪಸಂಖ್ಯಾತರ ಹಕ್ಕುಗಳು ಮಾನವ ಹಕ್ಕುಗಳು

ಡಿಸೆಂಬರ್ 8, ಭಾನುವಾರ ಸಂಜೆ 4 ಘಂಟೆಗೆ ಪುರಭವನದಿಂದ ಎಂ.ಜಿ. ರಸ್ತೆ ಮಹಾತ್ಮ ಗಾಂಧಿ ಪ್ರತಿಮೆಯವರೆಗೂ ಲೈಂಗಿಕತೆ ಶೋಷಣೆಗೆ ಒಳಗಾಗಿರುವವರು ಹಿಜ್ರಾಗಳು, ಕೋಥಿಗಳು, ದ್ವಿಲಿಂಗಕಾಮಿಗಳು, ಸಲಿಂಗಕಾಮಿಗಳು, ಲೆಸ್ಬಿಯನ್‌ಗಳು, ಗೇಗಳು, ಲಿಂಗ ಬದಲಾಯಿಸಿಕೊಂಡವರು, ತಮ್ಮ ಲಿಂಗ ಹಾಗೂ ಲೈಂಗಿಕತೆಯ ಕಾರಣಕ್ಕಾಗಿ ಶೋಷಣೆಗೊಳಗಾದವರು ಮತ್ತವರ ಬೆಂಬಲಿಗರನ್ನೊಳಗೊಂಡ 'ವಿವಿಧ' ಎಂಬ ಒಂದು ಸ್ವಾಯತ್ತ ಗುಂಪು ಮಾನವ ಹಕ್ಕುಗಳ ಅಂಗವಾಗಿ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು, 'ವಿವಿಧ' ಒಂದು ಸಮುದಾಯದ ಧ್ವನಿಯಾಗಿ ಮೊದಲ ಬಾರಿಗೆ ಸಾಮಾಜಿಕವಾಗಿ ಹೊರ ಅಡಿ ಇಟ್ಟಿದೆ. ಈ ಮೆರವಣಿಗೆಯಲ್ಲಿ 'ವಿವಿಧ' ಗುಂಪಿನವರನ್ನು ಬೆಂಬಲಿಸುವ ಬೇರೆ ಬೇರೆ ಮಹಿಳಾ ಸಂಘಟನೆ, ಮಾನವಹಕ್ಕುಗಳ ಸಂಘಟನೆ ಹಾಗೂ ಎ.ಎಲ್.ಎಫ್ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು.

ಚಾಂದಿನಿ ಎಂಬ ಹಿಜ್ರಾಳನ್ನು ಮಧುವೆಯಾಗಿ 6 ತಿಂಗಳ ನಂತರ ಸೀಮೆ ಎಣ್ಣೆ ಸುರಿದು ಕೊಲೆ ಮಾಡಿರುವ ಆಕೆಯ ಗಂಡನಿಗೆ ಯಾವುದೇ ತಾರತಮ್ಯವಿಲ್ಲದೆ ಶಿಕ್ಷೆಯನ್ನು ಕೊಡುವುದರ ಮೂಲಕ ಚಾಂದಿನಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸುತ್ತಾ ನೋಡಿ ಸ್ವಾಮಿ ನಾವಿರೋದು ಹೀಗೆ, ನಮ್ಮ ಲೈಂಗಿಕತೆ ನಮ್ಮ ಹಕ್ಕು, ನಮ್ಮನ್ನು ಮಾನವೀಯತೆಯಿಂದ ಕಾಣಿರಿ. ಹೀಗೆ ಹಲವಾರು ಘೋಷಣೆಗಳನ್ನು ಕೂಗುತ್ತಾ ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯ, ಅನ್ಯಾಯದ ಕನ್ನಡಿಯನ್ನು ಎತ್ತಿ ಹಿಡಿಯುವಂತೆ ಮೆರವಣಿಗೆ ಮುಂದುವರೆಯಿತು. ತಮ್ಮ ಮೇಲೆ ಹೆಚ್ಚು ದೌರ್ಜನ್ಯವನ್ನು ನಡೆಸುವ ಕಬ್ಬನ್‌ಪಾರ್ಕ್ ಪೋಲಿಸರ ವಿರುದ್ಧ ಕಬ್ಬನ್ ಪಾರ್ಕ್ ಪೋಸೋಸ್ ಠಾಣೆಯ ಎದುರು ಐದು ನಿಮಿಷದ ಕಾಲ ತಮ್ಮೆಲ್ಲರ ಅಸ್ತ್ರವಾದ ಚಪ್ಪಾಳೆಯನ್ನು ತಟ್ಟಿ ಪೋಲಿಸರಿಗೆ ಧಿಕ್ಕಾರ ಹಾಕುತ್ತಾ ಮಹಾತ್ಮ ಗಾಂಧಿಯ ಪ್ರತಿಮೆಯ. ಕಡೆ ಮೆರವಣಿಗೆ ಹೊರಟಿತ್ತು.

ಸಂಜೆ 5.30ಕ್ಕೆ ಗಾಂಧಿ ಪ್ರತಿಮೆಯ ಬಳಿ ಸಾರ್ವಜನಿಕ ಸಭೆ ಇದ್ದು ಈ ಸಭೆಯಲ್ಲಿ ಅನೇಕ ಹಿಜ್ರಾಗಳು, ಕೋಥಿಗಳು, ದ್ವಿಲಿಂಗಕಾಮಿಗಳು ಮಾತನಾಡಿದ್ದರು. ಇವರ ಸುತ್ತಲೂ ಅನೇಕ ಮಾಧ್ಯಮದವರು ನೆರೆದು ಇವರ ಮಾತುಗಳಿಗೆ ಕಿವಿಗೊಟ್ಟರು.

ಎಲ್ಲರೂ ಮಾತನಾಡುತ್ತಾ ತಮ್ಮ ಮೇಲೆ ಆಗುತ್ತಿರುವ ಶೋಷಣೆ, ದೌರ್ಜನ್ಯ, ತಾರತಮ್ಯದ ಬಗ್ಗೆ ವಿವರಿಸಿದ್ದರು. ಈ ಸಂದರ್ಭದಲ್ಲಿ ಪ್ರಕಟಿಸಿದ ಕರಪತ್ರವನ್ನು ಮಾನಸ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಪ್ರತೀ ವರ್ಷ ಪ್ರಪಂಚದಾದ್ಯಂತ ಡಿಸೆಂಬರ್ 10ರಂದು ಮಾನವಹಕ್ಕುಗಳ ದಿನವಾಗಿ ಆಚರಿಸಲಾಗುತ್ತದೆ. ವರ್ಗ, ಜಾತಿ, ಲಿಂಗ, ಲೈಂಗಿಕತೆ, ಜನಾಂಗ, ಭಾಷೆ, ರಾಷ್ಟ್ರೀಯತೆ, ಪಂಗಡ, ಅಥವಾ ರಾಜಕೀಯ ನಂಬಿಕೆಗಳ ಬೇಧಭಾವವಿಲ್ಲದೆ ಎಲ್ಲರ ಮಾನವಹಕ್ಕುಗಳನ್ನು ರಕ್ಷಿಸಲಾಗಿದ್ದಾರೂ ಸಹ, ಲೈಂಗಿಕತೆ ಅಲ್ಪಸಂಖ್ಯಾತರ ಮಾನವಹಕ್ಕುಗಳನ್ನು ಭಾರತದೆಲ್ಲೆಡೆ ಉಲ್ಲಂಘಿಸಲಾಗುತ್ತಿದೆ. ಹಾಗಾಗಿ ಬಲವಂತವಾಗಿ ನಾವು ಹೀನಾಯ ಬದುಕಿಗೆ ತಳ್ಳಲ್ಪಟ್ಟಿದ್ದೇವೆ.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 377, ಒಂದೇ ಲಿಂಗದ ಇಬ್ಬರ ನಡುವಿನ ಲೈಂಗಿಕ ಸಂಪರ್ಕವನ್ನು ಅಪರಾಧವೆಂದು ಪರಿಗಣಿಸುತ್ತದೆ. ಈ ಕಾನೂನನ್ನು ಬ್ರಿಟೀಷರು 1860ರಲ್ಲಿ ಭಾರತದಲ್ಲಿ ಜಾರಿಗೆ ತಂದರು. ಬಹಳ ಹಿಂದೆ ಬ್ರಿಟನ್‌ನಲ್ಲೇ ಈ ಕಾನೂನನ್ನು ತೆಗೆದುಹಾಕಲಾಗಿದೆ. ಆದರೆ ಭಾರತದಲ್ಲಿ ಆ ಕುಖ್ಯಾತ ವಸಾಹತುಶಾಹಿ ಪರಂಪರೆ ಇನ್ನೂ ಮುಂದುವರೆದಿದೆ. ಈ ಕಾನೂನನ್ನು ಬಳಸಿಕೊಂಡು ಸಲಿಂಗ, ದ್ವಿಲಿಂಗ ಕಾಮಿಗಳು, ಡಬ್ಬಲ್‌ಡೆಕ್ಕರ್‌ಗಳು, ಕೋಥಿಗಳು ಹಾಗೂ ಹಿಜ್ರಾಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ಉದ್ಯಾನವನಗಳಲ್ಲಿ ಕಿರುಕುಳ ನೀಡುತ್ತಾರೆ. ಅವರಿಂದ ಹಣ ಕಿತ್ತುಕೊಳ್ಳುವುದು, ಬೆದರಿಸುವುದು, ಹೊಡೆಯುವುದು, ಲೈಂಗಿಕವಾಗಿ, ದೈಹಿಕವಾಗಿ ಹಿಂಸಿಸುವುದು ಸಾಮಾನ್ಯ. ಹಲವಾರು ಗೂಂಡಾಗಳು ಇವರ ಪರಿಸ್ಥಿತಿಯ ಲಾಭ ಪಡೆದುಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಇವರನ್ನು ಹಿಂಸಿಸಿ, ಹೊಡೆದು ಹಣ ಕಿತ್ತುಕೊಳ್ಳುತ್ತಾರೆ. ಲೆಸ್ಬಿಯನ್ ಜೋಡಿಗಳನ್ನು ಬೇರೆ ಮಾಡಲು ಸೆಕ್ಷನ್ 377ನ್ನು ಬಳಸಲಾಗುತ್ತದೆ.

ಮದುವೆ, ದುತ್ತು, ಉತ್ತರಾಧಿಕಾರತ್ವ, ಆಸ್ತಿ, ಜೀವವಿಮೆ, ಪಿಂಚಣಿ, ಗ್ರ್ಯಾಚ್ಯುಟಿ, ವಸತಿ ಇತ್ಯಾದಿಗೆ ಸಂಬಂಧಪಟ್ಟಂತೆ ಇರುವ ಕಾನೂನುಗಳು ಪರಲಿಂಗ ಮದುವೆಗಳನ್ನು ಮಾತ್ರ ನ್ಯಾಯಬದ್ಧಗೊಳಿಸುವುದರಿಂದ ಲೈಂಗಿಕತೆ ಅಲ್ಪಸಂಖ್ಯಾತರ ಹಕ್ಕುಗಳನ್ನು ಗುರುತಿಸುವುದಿಲ್ಲ. ಭಾರತದ ಸಂವಿಧಾನವು ಗಂಡು-ಹೆಣ್ಣು ಎಂಬ ಎರಡೇ ಲಿಂಗಗಳನ್ನು ಗುರುತಿಸುತ್ತದೆ. ಹಿಜ್ರಾಗಳಿಗೆ ಮದುವೆ ಹಕ್ಕು, ರೇಷನ್ ಕಾರ್ಡ್ ಸೌಲಭ್ಯ/ಪಾಸ್ ಪೋರ್ಟ್/ಮತ ಚಲಾವಣೆಯ ಹಕ್ಕುಗಳು ಸಿಗುವುದೇ ಇಲ್ಲ. ಬಹಳಷ್ಟು ಕೋಥಿಗಳು ತಾವು ಕೆಲಸ ಮಾಡುವ

ಸ್ಥಳಗಳಲ್ಲಿ ಪುರುಷ ಸಹೋದ್ಯೋಗಿಗಳಿಂದ ಲೈಂಗಿಕ ಕಿರುಕುಳ ಅನುಭವಿಸುತ್ತಾರೆ. ಹೆಚ್ಚಿನ ಆಯ್ಕೆಗಳಿಲ್ಲದೆ ಕಾರಣ ಬಹಳಷ್ಟು ಕೋಥಿಗಳು, ಹಿಜ್ರಾಗಳು ಜೀವನಕ್ಕಾಗಿ ಲೈಂಗಿಕ ವೃತ್ತಿಯಲ್ಲಿರುವವರ (ಹಿಜ್ರಾಗಳು, ಕೋಥಿಗಳು, ಮಹಿಳೆಯರು, ಪುರುಷರು) ಜೀವನ ನರಕವಾಗಿದೆ. ಐ.ಟಿ.ಪಿ.ಎ (ಇಮ್ಮಾರಲ್ ಟ್ರಾಫಿಕಿಂಗ್ ಪ್ರಿವೆನ್ಷನ್ ಆಕ್ಟ್) ಕಾಯ್ದೆಯು ಲೈಂಗಿಕ ವೃತ್ತಿಯನ್ನು ಅಪರಾಧವೆಂದು ಹಿಂಸಿಸಿವುದು ಕಿರುಕುಳ ನೀಡುವುದು ಅತ್ಯಾಚಾರವೆಸಗುವುದು, ಹೊಡೆದು ಬೈಯ್ದು ಹಣ ಕೀಳುವುದು ಸಾಮಾನ್ಯವಾಗಿದೆ.

ಲೈಂಗಿಕತೆ ಅಲ್ಪಸಂಖ್ಯಾತರು ದೈಹಿಕ ಹಿಂಸೆ, ಬೈಗುಳಾ, ಬೆದರಿಕೆಗೆ ನಿರಂತರವಾಗಿ ಒಳಗಾಗುತ್ತಾರೆ. ಅಲ್ಲದೆ ಮನೆಯವರು ಅವರನ್ನು ಹೊರಹಾಕುತ್ತಾರೆ. ಬಹಳಷ್ಟು ಜನರು ಮನೆಯಿಂದ ಹೊರಬಂದು ಆಸ್ತಿ ಹಕ್ಕಿನಿಂದ ವಂಚಿಸಲ್ಪಟ್ಟಿದ್ದಾರೆ. ಕೆಲವೊಮ್ಮೆ ಕುಟುಂಬದವರು ಬಲವಂತವಾಗಿ ಪರಲಿಂಗ ಮದುವೆಗೆ ತಳ್ಳುವುದರಿಂದ ಅವರ ಸಂಗಾತಿಗಳು, ಮಕ್ಕಳೂ ಸಹ ಶೋಷಣೆಗೆ ಒಳಪಡುತ್ತಾರೆ. ಕೆಲವು ಕುಟುಂಬಗಳು ತಮ್ಮ ಮಕ್ಕಳ ಲಿಂಗ/ಲೈಂಗಿಕತೆ ಅಭಿವ್ಯಕ್ತಿಯನ್ನು ಸರಿಪಡಿಸಲು ಅವೈಜ್ಞಾನಿಕ ತಪ್ಪು ಮಾಹಿತಿಯ ಅನೀತಿಯ ಮನೋವೈಜ್ಞಾನಿಕ ಚಿಕಿತ್ಸೆಗೊಳಪಡಿಸುತ್ತಾರೆ. ಈ ಚಿಕಿತ್ಸೆಯು ಅಪಾಯಕಾರಿ ಔಷಧಿ, ಎಲೆಕ್ಟ್ರಿಕ್ ಶಾಕ್ ಮತ್ತು ಹೇವರಿಕೆಯನ್ನುಂಟು ಮಾಡುವುದನ್ನು ಒಳಗೊಂಡಿದೆ. ಈ ಚಿಕಿತ್ಸಾ ವಿಧಾನಗಳಿಂದ ಅಪಾರ ತೊಂದರೆಯನ್ನು ಅನುಭವಿಸುವ ಲೈಂಗಿಕತೆ ಅಲ್ಪ ಸಂಖ್ಯಾತರು ದೈಹಿಕವಾಗಿ, ಮಾನಸಿಕವಾಗಿ ಕುಸಿದು ಹೋಗುತ್ತಾರೆ. ನಿಜವಾಗಿಯೂ ಬದಲಾಗ ಬೇಕಾಗಿರುವುದು ನಮ್ಮ ಲೈಂಗಿಕತೆ /ಲಿಂಗ ಅಲ್ಲ, ಲೈಂಗಿಕತೆ ಅಲ್ಪಸಂಖ್ಯಾತರನ್ನು ಕುರಿತ ಸಮಾಜದ ಅಜ್ಞಾನ, ಪೂರ್ವಾಗ್ರಹಗಳು, ಅಸಹಿಷ್ಣುತೆ. ನಮ್ಮ ಪುರುಷಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಲೆಸ್ಬಿಯನ್ ಮಹಿಳೆಯರು ಸಾರ್ವಜನಿಕ ಜಾಗ ಇಲ್ಲದಿರುವುದರಿಂದ ಇಮ್ಮಡಿಯ ತುಳಿತಕ್ಕೆ ಒಳಗಾಗುವರು ಕುಟುಂಬಗಳು ಲೆಸ್ಬಿಯನ್ ಜೋಡಿಗಳನ್ನು ಬೇರೆ ಮಡುವುದಲ್ಲದೆ ಲೆಸ್ಬಿಯನ್ / ದ್ವಿಲಿಂಗ ಕಾಮಿ ಮಹಿಳೆಯರನ್ನು ಪರಲಿಂಗ ಮದುವೆಗೆ ಬಲವಂತವಾಗಿ ಒತ್ತಾಯಿಸುತ್ತಾರೆ. ಭಾರತದಲ್ಲಿ ಕಳೆದ ಐದು ವರ್ಷಗಳಲ್ಲಿ 30ಕ್ಕೂ ಹೆಚ್ಚಿನ ಲೆಸ್ಬಿಯನ್ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿರುವುದು ದಾಖಲಾಗಿದೆ.

ಲೈಂಗಿಕತೆ ಅಲ್ಪಸಂಖ್ಯಾತರಿಗೆ ಬೀದಿಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ಶಾಲೆ/ಕಾಲೇಜುಗಳಲ್ಲಿ, ಆಸ್ಪತ್ರೆ, ಇತರೆ ಸ್ಥಳಗಳಲ್ಲಿ ದೈಹಿಕ/ ಲೈಂಗಿಕ/ಮೌಖಿಕ ಹಿಂಸೆ, ಅವಹೇಳನೆ ತಾರತಮ್ಯ ಸಾಮಾಜಿಕವಾಗಿ ಅನುಭವಿಸುವ ಒಂಟಿತನ ನಿತ್ಯ ದಿನಚರಿಯಾಗಿದೆ. ಸಮಾಜವು ನಮ್ಮಲ್ಲೇ ಅಪನಂಬಿಕೆ,ನಮ್ಮ ಬಗ್ಗೆ ನಾವೇ ಅವಮಾನ ಪಡುವಂತೆ, ಕೀಳರಿಮೆ, ಖಿನ್ನತೆ ಬೆಳೆಸಿಕೊಂಡು ಒಂಟಿಯಾಗಿ ಬದುಕುವಂತೆ ಮಾಡುತ್ತದೆ. ಬಲವಂತ ಆತ್ಮಹತ್ಯೆಯ ದಾರಿಗೂ ನಮ್ಮನ್ನು ಇದು ನೂಕುತ್ತದೆ.

ನಾವಿಂದು ಪರಲಿಂಗ-ಪಿತೃ ಪ್ರಧಾನ ಸಮಾಜದ ಮೂಕ ಬಲಿ ಪಶುಗಳಲ್ಲ. ನಾವು ಒಗ್ಗಟ್ಟಾಗಿದ್ದೇವೆ. ಭಾರತದಾದ್ಯಂತ ಸಹಾಯ ವಾಣಿಗಳು, ಬೆಂಬಲ ಗುಂಪುಗಳು, ಆರೋಗ್ಯ ಸೌಲಭ್ಯ ಮತ್ತು ನಮ್ಮ ಮಾನವಹಕ್ಕುಗಳ ರಕ್ಷಣೆಗಗಿ ಗುಂಪುಗಳನ್ನು ಪ್ರಾರಂಭಿಸಿದ್ದೇವೆ. ನಮ್ಮ ಬೆಂಬಲವನ್ನು ಇತರ ಜಾತಿ, ವರ್ಗ, ಲಿಂಗ, ಧರ್ಮ ಇತ್ಯಾದಿ ಹೆಸರಿನಲ್ಲಿ ತಾರತಮ್ಯಕ್ಕೊಳಗಾದವರೆಗೂ ವಿಸ್ತರಿಸಿದ್ದೇವೆ. ನಮ್ಮನ್ನು ನಾವು ಅಭಿವ್ಯಕ್ತಿಸಲು, ನಮ್ಮ ಹಕ್ಕುಗಳಿಗಾಗಿ ಹೋರಾಡಲು ಕಲಿತಿದ್ದೇವೆ. ನ್ಯಾಯ ಘನತೆ ಪಡೆಯುವವರೆಗೂ ನಮ್ಮ ಪಯಣನಿಲ್ಲದು.

ಲೈಂಗಿಕತೆ ಅಲ್ಪಸಂಖ್ಯಾತರನ್ನು ಹಿಂಸಿಸ ಬೇಡಿ. ಪ್ರೀತಿಯಿಂದ ಒಪ್ಪಿಕೊಳ್ಳಿ ಎಂದು ಕುಟುಂಬಗಳಿಗೆ ನಾವು ಮನವಿ ಮಡಿಕೊಳ್ಳುತ್ತೇವೆ. ನಾವು ಪ್ರಗತಿಪರ, ಜಾತ್ಯಾತೀತ ಗುಂಪುಗಳಿಗೆ ಮತ್ತು ಮಾಧ್ಯಮಗಳಿಗೆ ಕೇಳಿಕೊಳ್ಳುವುದೆಂದರೆ ನಿಮ್ಮ ಬೆಂಬಲವನ್ನು ಧರ್ಮ, ಜಾತಿ, ಜನಾಂಗ, ಲಿಂಗ, ಅಂಗವಿಕಲತೆ, ಲೈಂಗಿಕತೆ ಮತ್ತಿತರೆ ವಿಷಯಗಳ ಮೇಲೆ ನೆಡೆಯುವ ದ್ವೇಷದ ವಿರುದ್ಧ ಧ್ವನಿಗೂಡಿಸಿ ಎಂಬುದೇ ಆಗಿದೆ.

ನಮ್ಮ ಬೇಡಿಕೆಗಳು :

1. ಚಾಂದನಿಯ ಸಾವಿನ ಕುರಿತು ತಾರತಮ್ಯವಿಲ್ಲದೆ ಬಹು ಬೇಗ ಕೂಲಂಕುಷ ಪರಿಶೀಲನೆ ಮಾಡಿ ತಪ್ಪಿತಸ್ತರಿಗೆ ಶಿಕ್ಷೆ ಕೊಡಿ
2. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 377, ಐ.ಟಿ.ಪಿ.ಎ ಕಾಯ್ದೆ ಹಾಗೂ ಲೈಂಗಿಕತೆ ಅಲ್ಪಸಂಖ್ಯಾತರನ್ನು ತಾರತಮ್ಯಕ್ಕೊಳಪಡಿಸುವ ಎಲ್ಲಾ ಕಾಯ್ದೆಗಳನ್ನು ರದ್ದುಪಡಿಸಬೇಕು.
3. ಪ್ರಭುತ್ವದ ಎಲ್ಲಾ ಸಂಸ್ಥೆಗಳ (ಪೊಲೀಸ್, ಆರೋಗ್ಯ ವ್ಯವಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳು) ಮಾನವ ಹಕ್ಕುಗಳ ಉಲ್ಲಂಘನೆಯನ್ನು ಪರಿಶೀಲಿಸಲು, ಮಾನವಹಕ್ಕುಗಳ ಕಾರ್ಯಕರ್ತರನ್ನೊಳಗೊಂಡ ಸಮಿತಿಯನ್ನು ಸರ್ಕಾರ ನೇಮಿಸಬೇಕು.
4 ಹಿಜ್ರಾಗಳನ್ನು ಮಹಿಳೆಯರೆಂದು ಪರಿಗಣಿಸಬೇಕು.
5 ಹಿಜ್ರಾ ಮತ್ತು ಕೋಥಿಗಳಿಗೆ ಉದ್ಯೋಗ, ವಸತಿ, ಶಿಕ್ಷಣಾವಕಾಶಗಳನ್ನು ಕಲ್ಪಿಸಬೇಕು.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

BOOK-POST
PRINTED MATTER

REGD No. : CPMG/KA/BGE/289/2003 - 05

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067